ಶೂದ್ರ

Wipe your hand across your mouth, and laugh;
The worlds revolve like ancient women
Gathering fuel in vacant lots.

— *T. S. Eliot*



ಈ ಸಂಚಿಕೆಯಲ್ಲಿ :

ಕೆ.ಎಸ್. ಶ್ರೀನಿವಾಸಮೂರ್ತಿ–ಪ್ರತಿಭಾ ನಂದಕುಮಾರ್–ಆರ್.ಡಿ.ಹೆಗಡೆ ಮಹಾಬಲಮೂರ್ತಿ ಕೊಡ್ಲೆಕೆರೆ–ಎಸ್. ನಟರಾಜ್ ಬೂದಾಳು–ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು – ಶ್ರೀಧರ ಪಿಸ್ಸೆ – ನಟರಾಜ್ ಹುಳಿಯಾರ್–ಎಸ್. ಮನು ಚಕ್ರವರ್ತಿ–ಯು.ಆರ್. ಲಲಿತಾ–ಕೆ.ಎಸ್. ಮಧುಸೂದನ–ದೊಡ್ಡರಂಗೇಗೌಡ–ಡಿ. ಲಿಂಗಯ್ಯ–ಡಾ|| ಸಿದ್ಧಲಿಂಗಯ್ಯ ಶಾಂತಲಕ್ಷ್ಮಿ–ಜಯಂತ ಕಾಯ್ಕಿಣಿ–ವೈ. ಗ. ಜಗದೀಶ್–ಟಿ ಆರ್. ಚಂದ್ರಶೇಖರ್–ವಿಮರ್ಶೆಗೆ ಬಂದ ಪುಸ್ತಕಗಳು–ಸುದ್ದಿಯ ಗುದ್ದಾಟ

ಬೆಲೆ : 5-00 ರೂ. ದೂರವಾಣಿ : 643337

ಮುಕ್ತಚರ್ಚೆಗಾಗಿ 'ಶೂದ್ರ' ತಿಂಗಳ ಪತ್ರಿಕೆ

ಸಂಚಿಕೆ : 8–9 ಫೆಬ್ರವರಿ–ಮಾರ್ಚ್ 1991 ಸಂಪುಟ : 17

ಸಹಾಯಕ ಸಂಪಾದಕರು : ನಿರ್ಮಲಾ ರೆಡ್ಡಿ – ಉತ್ತನೂರು ರಾಜಮ್ಮ ವಿ. ಶೆಟ್ಟಿ
ಕೆ. ಎನ್. ಅರುಣ್ – ಸ. ರಘುನಾಥ್
ಜರಗನಹಳ್ಳಿ ಶಿವಶಂಕರ್–ಎಲ್. ಎನ್. ಮುಕುಂದರಾಜ್

ಮುಖಪುಟದ ಕೃಪೆ : ವೆಂಕಟಸುಬ್ಬಯ್ಯ
(ಕೆ. ಕೆ. ಹೆಬ್ಬಾರ್‌ರವರು ಭಿತ್ತಿಚಿತ್ರಗಳ ಪ್ರದರ್ಶನವನ್ನು ಮೈಸೂರಿನ ರಂಗಾಯಣದಲ್ಲಿ ನೋಡುತ್ತಿರುವುದು)

ಶೂದ್ರಕ್ಕೆ ಚಂದಾ ಕಳಿಸಿ. ಆಜೀವ ಚಂದಾ ಬಾಬ್ತು ಕಂತುಗಳಲ್ಲಿ ಕೊಡುವವರು ಸ್ವಲ್ಪ ಜಾಗ್ರತೆ ಕೊಟ್ಟರೆ ಒಳಿತು. ಚಂದಾದ ರೀತಿಯಲ್ಲಿ ನಾಲ್ಕೈದು ವರ್ಷ ಕೊಟ್ಟರೆ ನಿಜವಾಗಿಯೂ ತೊಂದರೆಯಾಗುತ್ತದೆ. ಶೂದ್ರ ಬರದಿದ್ದರೆ ಪತ್ರ ಬರೆಯಿರಿ. ಚಂದಾವನ್ನು ಎಂ. ಓ. ಮೂಲಕ ಕಳುಹಿಸುವವರು ದಯವಿಟ್ಟು ಕೌಂಟರ್ ಭಾಗದಲ್ಲಿ ವಿಳಾಸ ಬರೆಯಿರಿ. ಲೇಖನ ಮತ್ತು ಕವನ ಕಳುಹಿಸುವವರು ರಿಪ್ಲೈ ಕಾರ್ಡಿಡಿ. ಚೆಕ್ ಮೂಲಕ ಕಳುಹಿಸುವವರು 10 ರೂ. ಹೆಚ್ಚುವರಿ ತುಂಬಿ.

ನೀವು ಕಳಿಸುವ ಚಂದಾ ಶೂದ್ರದ ಬೆಳವಣಿಗೆಯ ಸಂಕೇತ

ವಾರ್ಷಿಕ ಚಂದಾ : 50-00 ರೂ. ಪುಸ್ತಕ ಭಂಡಾರಗಳಿಗೆ 55-00 ರೂ.
ಆಜೀವ ಚಂದಾ : 400-00 ರೂ. (ನಾಲ್ಕು ಕಂತುಗಳಲ್ಲಿ) 450–00 ರೂ.

ಶೂದ್ರ ಶ್ರೀನಿವಾಸ್, ನಂ. 1, 3 ನೇ ಕ್ರಾಸ್, ಬಾಲಾಜಿನಗರ, ಸುದ್ದುಗುಂಟೆಪಾಳ್ಯ,
ಡಿ. ಆರ್. ಕಾಲೇಜ್ ಅಂಚೆ, ಬೆಂಗಳೂರು-560 029

ಚಿತ್ರ ಶಿಲ್ಪಗಳ ಅನನ್ಯತೆ : ಕೆಲವು ಪರಿಚಯಾತ್ಮಕ ಟಿಪ್ಪಣಿಗಳು

— ಕೆ. ಎಸ್. ಶ್ರೀನಿವಾಸಮೂರ್ತಿ

– 1 –

ಚಿತ್ರ ಅಥವಾ ಶಿಲ್ಪ ಕಲಾಕೃತಿಗಳ ಪ್ರದರ್ಶನಾಲಯವೊಂದರಲ್ಲಿ ನಾವಿದ್ದೇವೆ ಎನ್ನೋಣ. ಆಗ ಸಾಮಾನ್ಯವಾಗಿ ನಮ್ಮನ್ನು ಮೊದಲು ಕಾಡುವ ಪ್ರಶ್ನೆ ಅಥವಾ ಸಮಸ್ಯೆಯೆಂದರೆ 'ಈ ಚಿತ್ರದ ಅಥವಾ ಶಿಲ್ಪದ ಅರ್ಥವೇನು ?' ಎಂಬುದು. ಮೈಸೂರಿನ ಜಗನ್ಮೋಹನ ಕಲಾ ಸಂಗ್ರಹಾಲಯದಲ್ಲಿರುವ ರವಿವರ್ಮನ ಪೌರಾಣಿಕ ಚಿತ್ರಗಳನ್ನು ನೋಡಿದಾಗ ನಮಗೆ ಇದೊಂದು ದೊಡ್ಡ ಸಮಸ್ಯೆ ಅನಿಸುವುದಿಲ್ಲ; ಹಾಗೆಯೇ ಬೆಂಗಳೂರಿನಲ್ಲಿ ವೆಂಕಟಪ್ಪನವರ ಪ್ರಕೃತಿಚಿತ್ರಗಳನ್ನು ನೋಡಿದರೂ ನಾವು ಈ ರೀತಿ 'ಅರ್ಥ'ದ ಪ್ರಶ್ನೆಗಳನ್ನು ಕೇಳುವುದಿಲ್ಲ : ರವಿವರ್ಮನು ಚಿತ್ರಿಸಿರುವ, ಜಟಾಯುವನ್ನು ಕೊಚ್ಚಿಹಾಕುತ್ತಿರುವ ರಾವಣನ ಚಿತ್ರ ಅಥವಾ ಕಾಲಿನಿಂದ ಮುಳ್ಳೊಂದನ್ನು ತೆಗೆಯುವ ನೆಪದಲ್ಲಿ ದುಷ್ಯಂತನ ಕಡೆ ಕಣ್ಣು ಹಾಯಿಸುತ್ತಿರುವ ಶಕುಂತಲೆಯ ಚಿತ್ರಗಳು, ಆಯಾ ಕಥಾ ಸಂದರ್ಭಗಳ ಪರಿಚಯವಿರುವ ನಮಗೆ ತಕ್ಷಣ ಆತ್ಮೀಯವಾಗಬಲ್ಲವು. ಅದೇ ರೀತಿ, ವೆಂಕಟಪ್ಪನವರು ಸೆರೆಹಿಡಿದಿರುವ ಉದಕಮಂಡಲದ ಸರೋವರದಲ್ಲಿನ ಪ್ರತಿಬಿಂಬ, ಅಲ್ಲಿನ ನೀಲವರ್ಣದ ಬೆಟ್ಟಸಾಲು ಮತ್ತು ಹುಲ್ಲುಗಾವಲಿನ ವಿಹಂಗಮ ನೋಟಗಳ ರಮ್ಯತೆಯು ನಮ್ಮನ್ನು ಒಮ್ಮೆಲೇ ತನ್ಮಯರನ್ನಾಗಿಸುತ್ತದೆ. ಅಂದರೆ, 'ಆಧುನಿಕ' ಅಥವಾ 'ಅಮೂರ್ತ' ಮುಂತಾಗಿ ಕರೆಯಲ್ಪಡುವ ಚಿತ್ರ ಅಥವಾ ಶಿಲ್ಪಗಳ ಬಗ್ಗೆಯೇ ನಮ್ಮ ಅನುಮಾನಗಳು ಹೆಚ್ಚಾಗಿರುವುದು. ಅಷ್ಟೇ ಅಲ್ಲ; ಇವುಗಳಲ್ಲಿ ಎಷ್ಟು ಮೋಸ, ಎಷ್ಟು ಸಾಚಾ, ಎಂದೂ ನಮಗೆ ಎಷ್ಟೋ ಬಾರಿ ಗುಮಾನಿಯಾಗುತ್ತದೆ. ಇಂಥ ಕೃತಿಗಳ ಉದ್ದೇಶ ಮತ್ತು ಮಹತ್ವಗಳನ್ನು ನಿಮಗೆ ಅರ್ಥವಾಗುವ ಹಾಗೆ, ನಮ್ಮ ನಂಬಿಕೆಯನ್ನು ಗಳಿಸುವ ಹಾಗೆ ತಿಳಿಯಪಡಿಸುವವರೂ ಕಮ್ಮಿಯೇ : ಎಷ್ಟೋ ಕಲಾವಿದರು "ಚಿತ್ರ-ಶಿಲ್ಪಗಳಲ್ಲಿ 'ಅರ್ಥ' ಎಂಬುದು ಏಕೆ ಬೇಕು ?" – ಎಂದು ಬಾಯಿ ಮುಚ್ಚಿಸಿಬಿಡುತ್ತಾರೆ : 'ಒಂದು ಹಕ್ಕಿಯ ಹಾಡಿಗೆ ಅರ್ಥ ಹಚ್ಚುತ್ತೀರೇನು ?' ಎಂದು ಹಿರಿಯ ಕಲಾವಿದ ಪಿಕಾಸೋನೇ ಕೇಳಿಲ್ಲವೆ ? ಹೀಗಾಗಿ, ಕಲಾಕೃತಿಗಳು ಏಕೊ ನಮ್ಮ ಲೌಕಿಕ ಪ್ರಪಂಚಕ್ಕೆ ಸೇರದಂಥ, ನಮ್ಮ ಕೈಗೆಟುಕದ ವೈಚಿತ್ರ್ಯಗಳೋ, ವಿಸ್ಮಯಗಳೋ ಆಗಿಬಿಡುತ್ತವೆ. ನಾವು ಯಾವುದನ್ನು 'ಅಮೂರ್ತ ಕಲೆ' ಎಂದು ಕರೆಯುತ್ತೇವೆಯೊ ಅದರಲ್ಲಿಯೂ ಒಂದು ಅರ್ಥ, ಒಂದು ವಿಷಯ ಎನ್ನುವುದು ಇರಬಾರದೇಕೆ, ಎಂಬ

ಕೆ. ಎಸ್. ಶ್ರೀನಿವಾಸ ಮೂರ್ತಿ, 397, 43ನೇ ಅಡ್ಡರಸ್ತೆ, 8ನೇ ಬ್ಲಾಕ್
ಜಯನಗರ, ಬೆಂಗಳೂರು-82

ಪ್ರಶ್ನೆಯೇ ಮಾತ್ರ ನಮ್ಮಲ್ಲಿ ಉಳಿಯುತ್ತದೆ: ಯಾವುದೇ ಕಲಾಕೃತಿಯೊಂದು ಹುಟ್ಟುವುದೇ ಒಂದು ನಿರ್ದಿಷ್ಟವಾದ ಸಾಂಸ್ಕೃತಿಕ ಸಂದರ್ಭದಿಂದ; ಆದ್ದರಿಂದ ಮನುಷ್ಯನ ನಂಬಿಕೆಗಳು, ಒಳನೋಟಗಳೇ ಮುಂತಾದವು ಯಾವುದೇ ಕಲಾಕೃತಿಯಲ್ಲಾಗಲಿ, ಒಂದಲ್ಲ ಒಂದು ರೀತಿ ಕಂಡುಬರಲೇ ಬೇಕಲ್ಲ – ಎಂಬುದೇ ನಮ್ಮ ಅನುಮಾನ; ಜೊತೆಗೆ, ಯಾವುದೇ ಕಲಾವಿದನಲ್ಲಿಯೂ, ವ್ಯಕ್ತಿಯೊಬ್ಬನಿಗೆ ಸಾಮಾನ್ಯವಾದಂಥ ವೈಯಕ್ತಿಕ ಒಲವು–ನಿಲುವುಗಳು, ಪ್ರವೃತ್ತಿ ಮತ್ತು ವೈಚಿತ್ರ್ಯಗಳು ಇರುತ್ತವೆ. ಅವನು ಪ್ರಾಮಾಣಿಕವಾಗಿ ಪ್ರಯತ್ನಿಸುವ ಪ್ರತಿಯೊಂದು ಕ್ರಿಯೆಯಲ್ಲೂ ಇವು ಒಂದಲ್ಲ ಒಂದು ರೀತಿ ಇರಬೇಕಲ್ಲವೆ? ಹೀಗಾಗಿ, ಕಲಾಕೃತಿಯೊಂದರಲ್ಲಿ ಅರ್ಥವನ್ನು ಅಪೇಕ್ಷಿಸುವುದು ಅಸಹಜವೇನಲ್ಲ; ಆದರೆ, ನಿರ್ದಿಷ್ಟವಾದ ಒಂದು ಕಥೆ ಅಥವಾ ಮನೋಹರವಾದ ನೋಟ, ವಿನ್ಯಾಸಗಳಷ್ಟೇ ನಮಗೆ ಅರ್ಥವನ್ನುಂಟುಮಾಡುವುದಾದರೆ, ಅದೊಂದು ಸಮಸ್ಯೆಯಾಗುತ್ತದೆ.

ಮೂಲಭೂತವಾಗಿ, ಕಲಾಕೃತಿಯೊಂದು ಕಲಾವಿದನ ಮತ್ತು ನಮ್ಮ ನಡುವಿನ ಸಂವಾದದ ಪ್ರಕ್ರಿಯೆ. ಕಲಾಕೃತಿಯೊಂದರ ಅರ್ಥದ ಪ್ರಶ್ನೆಯನ್ನು ಈ ಸರಳವಾದ ತಿಳುವಳಿಕೆಯಿಂದ ನಾವು ಗ್ರಹಿಸಿಕೊಳ್ಳಬೇಕು. ಇದನ್ನು ಹೀಗೆ ವಿವರಿಸಬಹುದು: ಕಲಾಕೃತಿಯೊಂದರ ಮೂಲಭೂತ ಉದ್ದೇಶವು ಯಾವುದೇ ವಿಷಯ, ವಿಚಾರ, ಘಟನೆಯೇ ಮುಂತಾದವನ್ನು ನಮಗೆ ನೇರವಾಗಿ ವಿವರಿಸುವುದೋ, ವರದಿ ಮಾಡುವುದೋ ಅಲ್ಲ; ಅವುಗಳನ್ನು ಕುರಿತ ಪ್ರತಿಕ್ರಿಯೆಯೊಂದು ಸಾಧ್ಯವಾಗುವ ಹಾಗೆ ಮಾಡುವುದು. ಆ ಮೂಲಕ – ಎಷ್ಟೋ ಬಾರಿ ಮಾತಿಗೂ ಮೀರಿದಂಥ – ಆಶ್ಚರ್ಯ, ವಿಸ್ಮಯ, ಹೊಸದೊಂದು ಅರಿವು ಮುಂತಾದವು ನಮ್ಮಲ್ಲಿ ಹುಟ್ಟುತ್ತವೆ. ಅಂದರೆ, ಕಲಾಕೃತಿಯೊಂದರ ಅರ್ಥವನ್ನು ಗ್ರಹಿಸಲು ನಮಗೆ ಅಗತ್ಯವಾದುದು ಅಲ್ಲಿನ ಮರ, ಗಿಡಗಳಂಥ ವಸ್ತುಗಳಲ್ಲ (objects): ಕಲಾಕೃತಿಯೊಂದರಲ್ಲಿ ಭಿಕ್ಷುಕನೊಬ್ಬನನ್ನು ಒಂದು ಕ್ಯಾಮರಾದಷ್ಟೇ ನಿಖರವಾಗಿ ಚಿತ್ರಿಸಿರಲಿ ಅಥವಾ ಅಮೂರ್ತವಾಗಿಯೇ ವಿರೂಪಗೊಳಿಸಿರಲಿ, 'ಭಿಕ್ಷುಕ' ಎಂಬ ಶಬ್ದವೇ ನಮ್ಮಲ್ಲಿ, ಆ ಸಂದರ್ಭಕ್ಕೆ ಬೇಕಾದ, ಭಾವ ಪ್ರಚೋದನೆಯನ್ನು ಉಂಟುಮಾಡಬಲ್ಲದು. ಆದರೆ, ಆ ಕಲಾಕೃತಿಯ ಅರ್ಥ ಮತ್ತು ಮಹತ್ವಗಳ ನಿರ್ಧಾರವಾಗುವುದು ಇಂಥ ಕೌಶಲ ಅಥವಾ ತಾಂತ್ರಿಕ ಸಾಧನೆಗಳಿಂದಷ್ಟೇ ಅಲ್ಲ; ಅಥವಾ ಅಲ್ಲಿ ಚಿತ್ರಣಗೊಂಡ ವ್ಯಕ್ತಿ, ವಸ್ತು (object), ಘಟನೆಗಳೇ ಮುಂತಾದವುಗಳಿಗ ಇರುವ ತಮ್ಮದೇ ಆದ – ಉದಾಹರಣೆಗೆ ಸೌಂದರ್ಯಾತ್ಮಕ ಅಥವಾ ಸಾಮಾಜಿಕ – ಮಹತ್ವ ಮತ್ತು ಆಕರ್ಷಣೆಗಳಿಂದ ಅಲ್ಲ. ಆಯಾ ವಸ್ತು (object) ಅಥವಾ ವ್ಯಕ್ತಿಗಳಿಗೆ ಆಯಾ ಕಲಾವಿದನು ತನ್ನ ಕೃತಿಯಲ್ಲಿ ತೋರುವ

ಪ್ರತಿಕ್ರಿಯೆ ಮತ್ತು ಆ ಮೂಲಕ ನಮ್ಮಲ್ಲಿ ಉಂಟಾಗುವ ಹೊಸ ಅರಿವು ಅಥವಾ ಅನುಭವಗಳ ಮೂಲಕವೇ ನಮಗೆ ಕಲಾಕೃತಿಯೊಂದರ 'ಅರ್ಥ'ವು ಸ್ಪಷ್ಟವಾಗುವುದು.

– 2 –

ಹೀಗೆ, ಚಿತ್ರ ಅಥವಾ ಶಿಲ್ಪಗಳು ನೀಡುವ ಅನುಭವ ವಿಶೇಷವು ಅನನ್ಯವಾದದ್ದು: ಇದನ್ನು ಗುರುತಿಸಲು ನಮ್ಮಲ್ಲೇ ಕೆಲವು ತೊಡಕುಗಳಿರುವುದೂ ಮೇಲೆ ಸೂಚ್ಯವಾಗಿದೆ: ಇದನ್ನು ಸರಳವಾಗಿ, ಸಂಕ್ಷಿಪ್ತವಾಗಿ ಹೀಗೆ ಮುಂದುವರಿಸಿ ವಿವರಿಸಬಹುದು: ಅತ್ಯಂತ ಪರಿಚಿತವಾದ ಕೆಲವು ವಿಷಯಗಳನ್ನು ಎಷ್ಟೋ ವೇಳೆ ನಾವು ಅಲಕ್ಷಿಸಿಬಿಡುತ್ತೇವೆ: ಉದಾಹರಣೆಗೆ ರೇಡಿಯೊದಂಥ ಪ್ರಸಾರ–ಮಾಧ್ಯಮವೊಂದರಲ್ಲಿ ಓದುಗನೊಬ್ಬನ ಮುಖದಲ್ಲಿ ಆಗುವಂಥ ಆದರೆ ಕೇಳುಗರಿಗೆ ಕಾಣದಂಥ ಅಭಿವ್ಯಕ್ತಿಯ ವಿಚಾರವನ್ನೇ ತೆಗೆದುಕೊಳ್ಳಬಹುದು: ನಮಗೆ ಈ ಓದುಗನ ಮುಖ ಕಾಣಿಸದು. ಧ್ವನಿ ಮಾತ್ರ ಕೇಳಿಸುತ್ತದೆ. ಆದರೆ ಇದೊಂದು ದೊಡ್ಡ ಕೊರತೆ ಎಂದೇನೂ ನಮಗೆ ಅನ್ನಿಸದಿರಬಹುದು. ಏಕೆಂದರೆ, ಇದು ಈಗಾಗಲೇ ನಾವು ಅನಿವಾರ್ಯವಾಗಿ ಒಪ್ಪಿಕೊಂಡಿರುವಂಥ ಸಾಮಾನ್ಯವಾದ ಒಂದು ಸಂದರ್ಭ. ಆದರೆ ದೂರದರ್ಶನದಲ್ಲಾದರೆ, ಅವನ ಮುಖದಲ್ಲಿನ ಹಾವಭಾವಗಳೂ ಅವನ ಮಾತುಗಳ ಜೊತೆ ಜೊತೆಗೇ ನಮ್ಮನ್ನು ತಲುಪುತ್ತವೆ. ಆಗ ಅವನ ಭಾವನೆ ಮತ್ತು ಧೋರಣೆಗಳು ಇನ್ನಷ್ಟು ಬೇಗ, ಹೆಚ್ಚು ಪರಿಣಾಮಕಾರಿಯಾಗಿ ನಮ್ಮನ್ನು ತಲುಪುವುದು ಸಾಧ್ಯ. ದೂರದರ್ಶನದಲ್ಲಿ ಬರುವ ನಾಟಕಗಳೂ ಬರೀ ಮಾತುಗಳಿಗೇ ಸೋತುಹೋದಾಗಲೂ ಏನು ಎಂಬುದು ಅರಿವಿಗೆ ಬರುತ್ತದೆ. ಅಂದರೆ, ದೃಶ್ಯಾನುಭವ ಎಂಬುದಕ್ಕೆ ತನ್ನದೇ ಆದಂಥ ಸ್ವಂತಿಕೆಯೊಂದು ಇದೆ ಎಂದ ಹಾಗಾಯಿತು. ಸಾಹಿತಿಯೊಬ್ಬನು ದೃಶ್ಯಾನುಭವವನ್ನು ಸೆರೆಹಿಡಿಯುವ ರೀತಿಯ ಜೊತೆಗೆ ಇದನ್ನು ಹೋಲಿಸಿ ಇದನ್ನು ಇನ್ನಷ್ಟು ಸ್ಪಷ್ಟಗೊಳಿಸಬಹುದು: ದೃಶ್ಯಲೋಕವನ್ನು ಒಬ್ಬ ಸಾಹಿತಿಯೂ ಕಣ್ಣಿಗೆ ಕಟ್ಟುವ ಹಾಗೆ ಶಬ್ದಗಳ ಮೂಲಕವೇ ಚಿತ್ರಿಸಬಲ್ಲ; ಇದನ್ನು ಕುವೆಂಪು ಅವರ ಕವನವೊಂದರ ಈ ಸಾಲುಗಳು ಸ್ಪಷ್ಟ ಮಾಡುತ್ತವೆ:

"ಹಚ್ಚನೆ–ಪಚ್ಚನೆ ವೇದಿಕೆಯಲ್ಲಿ
ಸಾಸಿರಗಟ್ಟಲೆ ಮುತ್ತನು ಚೆಲ್ಲಿ
ರನ್ನದ ಕಿರು ಹಣತೆಗಳಲ್ಲಿ
ಶ್ಯಾಮಲ ತೈಲದಿ ಹೊನ್ನಿನ ಬತ್ತಿ
ಕಾಮನ ಬಿಲ್ಲನು ಬೆಂಕಿಯು ಹೊತ್ತಿ
ಸೊಡರುರಿಯುತ್ತಿವೆ ಅಲ್ಲಲ್ಲಿ."

ದೃಶ್ಯಾನುಭವವೊಂದರ ಸ್ವಾರಸ್ಯ, ವೈವಿಧ್ಯ, ಆಕರ್ಷಣೆಗಳನ್ನು ತನ್ನ ಶಬ್ದಗಳ ಸೀಮಿಂತದಲ್ಲಿಯೇ ಕವಿಯೊಬ್ಬನು ಈ ರೀತಿ ಪರಿಣಾಮಕಾರಿಯಾಗಿ ಸೆರೆಹಿಡಿಯಬಲ್ಲ. ಹೀಗಾಗಿ ಒಬ್ಬ ಪ್ರಬುದ್ಧನಾದ ಸಾಹಿತಿಯ ಕೈಯಲ್ಲಿ ತನ್ನ ಮಾಧ್ಯಮದ ಸೀಮಿಂತಗಳೇ ಸಾಮರ್ಥ್ಯಗಳೂ ಆಗಬಹುದು: ಅಂದರೆ, ತನ್ನ ಮಾಧ್ಯಮವಾದ ಭಾಷೆಯ ಮೂಲಕ ಆವನು ಏನೆಲ್ಲ ಸಾಧಿಸಿದ್ದಾನೆ ಎಂಬುದರ ಪ್ರಶಂಸೆಯೇ ಇದು. ಆದರೆ, ಇದರಿಂದ ಚಿತ್ರ ಅಥವಾ ಶಿಲ್ಪ ಕಲಾಕೃತಿಗಳು ನೀಡುವಂಥ ದೃಶ್ಯಾನುಭವದ ಅಗತ್ಯವಿಲ್ಲ ಎಂದು ಅರ್ಥವಲ್ಲ. ಏಕೆಂದರೆ, ಈ ದೃಶ್ಯ ಮಾಧ್ಯಮದ ಕೃತಿಗಳಿಗೆ ನಮ್ಮ ಮಾತಿಗೆ ಸಿಗಲಾರದಂಥ ಬೇರೆ ಬೇರೆ ಮುಖಗಳಿವೆ: ಅಡ್ಡವಾಗಿ ಮೈಚೆಲ್ಲಿಕೊಂಡ ದಿಗಂತದ ಪ್ರಶಾಂತತೆ, ಲಂಬವಾಗಿ ನಾಲಿಗೆ ಚಾಚುವ ಬೆಂಕಿಯ ಜ್ವಾಲೆಗಳು ಹುಟ್ಟಿಸುವ ಕಳವಳ, ಉದ್ವೇಗ ಅಥವಾ ಆಳೆತ್ತರಕ್ಕೂ ಚಿಮ್ಮಿ ಹೂವಿನಂತೆ ಅರಳಿ ಪುಳಕಗೊಳಿಸುವ ಸಮುದ್ರದ ಅಲೆಗಳು–ಮುಂತಾದ ಅನುಭವ ವಿಶೇಷಗಳು ಒಬ್ಬೊಬ್ಬರಿಗೂ ಒಂದೊಂದು ಬಾರಿಯೂ ವಿಭಿನ್ನವಾದುದು.

ಈ ಅನುಭವಗಳೆಲ್ಲವೂ ನಮ್ಮ ಕಣ್ಣಿಗೆ ಸುಲಭವಾಗಿ ಬೀಳುವಷ್ಟು ಸಾಮಾನ್ಯವಾದವು; ಈ ವಿಶಿಷ್ಟ ದೃಶ್ಯಲೋಕವು ಈ ಬಗೆಯ ವಿಸ್ಮಯ, ಕುತೂಹಲ ಮತ್ತು ಆಕರ್ಷಣೆಗಳಿಂದ ಕೂಡಿರುವಂಥದು; ಇವೆಲ್ಲವುಗಳಿಗೆ ಸುಲಭವಾಗಿ ಸ್ಪಂದಿಸಲು ನಮ್ಮ ಕಣ್ಣಿಗಿರುವ ಸಾಮರ್ಥ್ಯವು ಇಲ್ಲಿ ಗಮನೀಯವಾದದ್ದು.

ಕಣ್ಣಿನಿಂದ ಮರೆಯಾದದ್ದು ನೆನಪಿನಿಂದಲೂ ಅಳಿಸಿ ಹೋದ ಹಾಗೆಯೇ ಎನ್ನುವ ಮಾತೊಂದು ಇಂಗ್ಲಿಷಿನಲ್ಲಿದೆ; ಆದರೆ, ಕಣ್ಣ ಮುಂದೆಯೇ ಸಾಕಷ್ಟು ತೀವ್ರವಾದ ಅನುಭವಗಳಾಗಿರುವ ಇಂಥ ನೋಟಗಳು ನಮ್ಮನ್ನು ಸ್ವಲ್ಪವೂ ತಟ್ಟದಿದ್ದರೆ ಒಂದು ಅಮೂಲ್ಯವಾದ ಅನುಭವ ಲೋಕವೇ ನಮಗೆ ಇದ್ದೂ ಇಲ್ಲವಾಗುತ್ತದೆ.

3

ಕಣ್ಣು ನಮ್ಮ ಜ್ಞಾನೇಂದ್ರಿಯಗಳಲ್ಲಿ ಒಂದು ಮುಖ್ಯವಾದ ಇಂದ್ರಿಯ. ನಮ್ಮ ಮಾನಸಿಕ ಬೆಳವಣಿಗೆಯಲ್ಲಿ ಕಣ್ಣಿನ ಪಾತ್ರ ಮಹತ್ತರವಾದುದು. ಈ ಬೆಳವಣಿಗೆಯ ಎಲ್ಲಾ ಹಂತಗಳಲ್ಲೂ ಇದು ಕ್ರಿಯಾಶೀಲವಾದ ಇಂದ್ರಿಯವೆ: ಆದರೆ, ಕಣ್ಣಿಗಿರುವ ಈ ಕ್ರಿಯಾಶೀಲತೆಯ ವ್ಯಾಪ್ತಿಯನ್ನು ನಾವು ಸರಿಯಾಗಿ ಗುರುತಿಸುವುದಿಲ್ಲ. ನಮ್ಮ ವೈಚಾರಿಕತೆ ಕಲ್ಪನಾಶಕ್ತಿಗಳಿಗೆ ಎಲ್ಲಾ ಜ್ಞಾನೇಂದ್ರಿಯಗಳೂ ಪೂರಕವಾದ ಪ್ರೇರಣೆಗಳನ್ನು ಒದಗಿಸುತ್ತಿರುತ್ತವೆ. ಅದೇ ರೀತಿ, ನಮ್ಮ ಮಾನಸಿಕ ಬೆಳವಣಿಗೆಯ ಮೊದಲ ಹಂತಗಳಲ್ಲಿ, ಚಿಕ್ಕ ವಯಸ್ಸಿನಲ್ಲಿ, ದೃಶ್ಯಗ್ರಹಿಕೆ ಎನ್ನುವುದು ಮಹತ್ತರವಾದ ಪಾತ್ರ

ಶೂದ್ರ

ನನ್ನು ವಹಿಸುತ್ತದೆ; ಆ ನಂತರ, ನಮ್ಮ ಬುದ್ಧಿಶಕ್ತಿ ಮತ್ತು ಕಲ್ಪನಾಶಕ್ತಿಗಳು ಪ್ರಬಲವಾಗುತ್ತವೆ ಎನ್ನಬಹುದು; ಬೆಂಕಿಯ ರೋಚಕವಾದ ಬಣ್ಣ ಮತ್ತು ಬೆಳಕುಗಳಿಗೆ ಮುಗ್ಧವಾದ ಮಗುವೊಂದು ಮೈಯೆಲ್ಲಾ ಕಣ್ಣಾಗಿ ನೋಡುತ್ತದೆ. ಅಷ್ಟೇ ಅಲ್ಲ; ಅದರ ಜ್ವಾಲೆಗಳು ತಳೆಯುವ ಲಾಲಿತ್ಯಪೂರ್ಣವಾದ ಆಕಾರಗಳನ್ನು ಮುಟ್ಟಲು, ಹಿಡಿಯಲು ಪ್ರಯತ್ನಿಸುತ್ತದೆ. ಹಾಗೆ ಮುಟ್ಟಿದಾಗ ಉಂಟಾಗುವ ನೋವಿನ ಅನುಭವದಿಂದ ಭಯ ಮತ್ತು ಎಚ್ಚರಿಕೆಗಳಿಗೆ ಅವಕಾಶವಾಗುತ್ತದಷ್ಟೆ. ಇದೇ ರೀತಿ, ಪ್ರಪಂಚದ ಅಥವಾ ಪ್ರಕೃತಿಯ ವಿವಿಧ ವಸ್ತುಗಳ ಆಳ-ಹರವುಗಳು, ಅವು ನಿಜವೊ ಅಥವಾ ಕೇವಲ ಭ್ರಮೆಯೋ ಎನ್ನುವುವೂ ನಮಗೆ ಸ್ಪರ್ಶಜ್ಞಾನದಿಂದ ಬರುತ್ತದೆ. ಒಂದು ಹಂತದಲ್ಲಿ, ಕೇವಲ ನೋಟದಿಂದಲೇ, ಅದೇನಿರಬಹುದು ಎಂಬುದನ್ನು ನಿಖರವಾಗಿ ಗುರುತಿಸಲು ಸಮರ್ಥರಾಗುತ್ತೇವೆ: ಕೈಗೆಟುಕದಷ್ಟು ದೂರದಲ್ಲಿ ಮೃದುವಾಗಿ ಕಾಣುವ, ಹಗುರವಾಗಿ ತೇಲುವ ಮೋಡಗಳನ್ನು ನಾವು ಹತ್ತಿಯೆಂದು ಭ್ರಮಿಸುವುದಿಲ್ಲ. ರಸ್ತೆಯ ಮಧ್ಯೆ ದುಂಡಗಿನ ಕಪ್ಪು ಆಕಾರವೊಂದು ಕಂಡುಬಂದರೆ, ಅದರ ಮೇಲೆ ಕಾಲಿಡುವ ಮೊದಲು ನಾವು ಯೋಚಿಸುತ್ತೇವೆ, ಎಚ್ಚರ ವಹಿಸುತ್ತೇವೆ.

ಆದರೆ, ಕಣ್ಣಿನ ಉಪಯುಕ್ತತೆಯು ಇಷ್ಟಕ್ಕೇ ಸೀಮಿತವಲ್ಲ. ಅದರ ಮಹತ್ವವು ಇನ್ನೂ ಹೆಚ್ಚಿನದು. ಉದಾಹರಣೆಗೆ ನಮ್ಮ ನಿತ್ಯಜೀವನದಲ್ಲಿ ವಿವಿಧ ವಸ್ತುಗಳ ಗಾತ್ರ, ಬಣ್ಣ ಮತ್ತು ಅವು ಉಂಟುಮಾಡುವ ಲಯ ಅಥವಾ ಸಮತೋಲಗಳಂಥ ಅನುಭವಗಳನ್ನು ನಾವು ಕಣ್ಣಿನಿಂದಲೇ ಗುರುತಿಸಿ ಅನುಭವಿಸುತ್ತೇವೆ. ವಿಶಾಲವಾಗಿ ಅಡ್ಡಡ್ಡ ಹರಡಿದ ಹೊಲ ಅಥವಾ ಮೈದಾನಗಳು, ಎತ್ತರೆತ್ತರವಾಗಿ ದಟ್ಟವಾಗಿ ಬೆಳೆದ ಬೆಟ್ಟಗುಡ್ಡ ಕಾಡುಮೇಡುಗಳು ನಿರ್ದಿಷ್ಟವಾದ ರೂಪ, ಆಕಾರಗಳ ಅನುಭವಗಳನ್ನು ಉಂಟುಮಾಡುತ್ತವೆ. ಜೊತೆಗೆ ಯಾವುದೇ ಎರಡು ವಸ್ತುಗಳು ಅಥವಾ ಇಬ್ಬರು ವ್ಯಕ್ತಿಗಳ ರೂಪದಲ್ಲಿನ ಹೋಲಿಕೆಗಳನ್ನು ಅಥವಾ ವ್ಯತ್ಯಾಸಗಳನ್ನು ಕೇವಲ ನೋಟದಿಂದಲೇ ನಾವು ಗುರುತಿಸುವುದು ಸಾಧ್ಯ. ಇದೊಂದು ದೊಡ್ಡ ವಿಷಯವೇನಲ್ಲ ಅನಿಸಬಹುದು. ಆದರೆ ಎಲ್ಲಾ ಸಂದರ್ಭಗಳಲ್ಲೂ ಎಲ್ಲಾ ವಸ್ತು, ವ್ಯಕ್ತಿಗಳೂ ಒಂದೇ ರೀತಿಯಲ್ಲಿ ಕಾಣುವುದಿಲ್ಲವಷ್ಟೇ: ಆಯಾ ಸಂದರ್ಭದ ಬೆಳಕಿನ ತೀವ್ರತೆ, ಹವಾಮಾನಗಳ ಜೊತೆಗೆ ನಮ್ಮದೇ ಮಾನಸಿಕ, ದೈಹಿಕ ವ್ಯತ್ಯಾಸಗಳೂ ತಮ್ಮ ಪ್ರಭಾವವನ್ನು ಬೀರುತ್ತವೆ. ಈ ಎಲ್ಲಾ ಪ್ರಭಾವಗಳಿಂದ ಉಂಟಾಗುವ ವಿವಿಧ ಬದಲಾವಣೆಗಳನ್ನು ಅರಗಿಸಿಕೊಂಡೂ ನಮ್ಮ ಕಣ್ಣು ಆಯಾ ವಸ್ತು ಅಥವಾ ವ್ಯಕ್ತಿಗಳನ್ನು ಸಾಕಷ್ಟು ಸ್ಪಷ್ಟವಾಗಿ ಗುರುತಿಸಬಲ್ಲದು ಎಂಬುದು ಕುತೂಹಲಕಾರಿಯಲ್ಲವೆ? ಉದಾಹರಣೆಗೆ ಕತ್ತಲಲ್ಲಿ ತೂಗುಹಾಕಿದ ಒಂದು ಬಿಳಿ ಕರವಸ್ತ್ರ ಅಥವಾ ಕೋರೈಸುವ ಬೆಳಕಿನಲ್ಲಿರುವ ಒಂದು ಕಲ್ಲಿದ್ದಲ

ಚೂರುಗಳ ಛಾಯೆಯಲ್ಲಿ (ಕಪ್ಪು-ಬಿಳಿಗಳ ಸಾಂದ್ರತೆಯಲ್ಲಿ) ವ್ಯತ್ಯಾಸವಾಗಬಹುದು. ಆದರೂ, ಒಂದನ್ನು ಮತ್ತೊಂದಾಗಿ ನಾವು ಸಲೀಸಾಗಿ, ತಪ್ಪಾಗಿ ಗ್ರಹಿಸುವುದಿಲ್ಲ; ಅದೇ ರೀತಿ, ನಮ್ಮದೇ ಪೂರ್ವಾಗ್ರಹ, ಭಯ, ಆತಂಕ ಅಥವಾ ಅಪೇಕ್ಷೆಗಳಿಗೆ ಸರಿಯಾಗಿ ನಮ್ಮ ಭಾವನೆಗಳು ದಾರಿ ತಪ್ಪುವ, ಗೊಂದಲಗೊಳ್ಳುವ, ದ್ವಂದ್ವಕ್ಕೆಡೆಯಾಗುವ ಕೆಲವು ಕ್ಷಣಗಳೂ ಇವೆ.

ನಮ್ಮ ದೃಷ್ಟಿಗಿರುವ ಸಾಧ್ಯತೆಗಳೇ ಚಿತ್ರ, ಶಿಲ್ಪಗಳಾದಂಥ ಕಲಾಕೃತಿಗಳ ಸೃಷ್ಟಿಯಲ್ಲೂ ಕ್ರಿಯಾತ್ಮಕವಾಗುವುದು; ಈ ಕಲಾಕೃತಿಗಳು ಉಂಟುಮಾಡುವ ದೃಶ್ಯಪ್ರಚೋದನೆ, ಆಶ್ಚರ್ಯ ಅಥವಾ ಹೊಸ ಅನುಭವಗಳು ನಮಗೆ ದಕ್ಕುವುದೂ ನಮ್ಮ ದೃಷ್ಟಿಗಿರುವ ಈ ರೀತಿಯ ಸಾಧ್ಯತೆಗಳಿಂದಲೇ : ಒಂದು ವರ್ತುಲದ ಕೇಂದ್ರ ಮಧ್ಯದಲ್ಲಿ, ಆ ವರ್ತುಲದ ಪ್ರಮಾಣಕ್ಕೆ ಹೋಲಿಸಿದಾಗ, ತೀರ ಕ್ಷುಲ್ಲಕವಾದಂಥ ಇನ್ನೊಂದು ಆಕಾರವಿದೆಯೆನ್ನೋಣ. ಆಗ, ಮೊಟ್ಟಮೊದಲು ಈ ಕ್ಷುಲ್ಲಕವೆನಿಸುವಂಥ ಸಣ್ಣ ಆಕಾರವನ್ನು ಗಮನಿಸಿದ ನಂತರವೇ ಹೊರವರ್ತುಲದ ಕಡೆ ನಮ್ಮ ಕಣ್ಣು ಹೊರಳುವುದು. ಈ ಸಣ್ಣ, ಸರಳವಾದ ನಿದರ್ಶನದಲ್ಲೂ ನಮಗೆ ಸ್ಪಷ್ಟವಾಗುವ ಅಂಶವೆಂದರೆ : ವಿಶಿಷ್ಟ, ವಿಚಿತ್ರ, ಅಸಾಧಾರಣವಾದ – (ಈ ಯಾವುದೇ ಗುಣವಾಚಕಗಳೂ ಸಾಪೇಕ್ಷ ಎಂಬುದೂ ಇಲ್ಲಿ ಮಹತ್ವವಾದದ್ದೇ) – ಪ್ರತಿಯೊಂದು ಆಕಾರ, ಹಾಗೆಯೇ ಬಣ್ಣ ರೂಪ ಇತ್ಯಾದಿಗಳು, ನಮ್ಮಲ್ಲಿ ತೀವ್ರವಾದ ಕುತೂಹಲ, ಆಕರ್ಷಣೆಗಳನ್ನು ಹುಟ್ಟಿಸುತ್ತದೆ : ಪ್ರಕೃತಿಯಲ್ಲಿ ನಾವು ಕಾಣುವ ಬಣ್ಣಗಳೆಲ್ಲ ಹೆಚ್ಚಾಗಿ ಪ್ರಶಾಂತವಾದ ಅನುಭವವನ್ನು ಕೊಡುವಂಥ ಹಸಿರು, ನೀಲಿ ಅಥವಾ ಮಣ್ಣಿನ ಬಣ್ಣಗಳು. ಇವುಗಳಿಗಿಂತ ಗಾಢವಾದ ಬಣ್ಣಗಳಾದಂಥ ಹಳದಿ ಅಥವಾ ಕೆಂಪುಗಳೂ ಇಲ್ಲಿವೆ; ಆದರೂ ಒಟ್ಟು ನೋಟದಲ್ಲಿ ಅವು ಮಂದವಾದವು ಅಥವಾ ಅಪರೂಪವೆನಿಸುವಷ್ಟು ಕಡಿಮೆ ಪ್ರಮಾಣದವು. ಹೀಗಾಗಿ, ಈ ಯಾವುದೇ ಬಣ್ಣಗಳೂ ಪ್ರಕಾಶಮಾನವಾದಾಗ. ನಮ್ಮ ದೃಷ್ಟಿಯು ತಕ್ಷಣ ಹೊಸ ಎಚ್ಚರವೊಂದರಿಂದ ಅದಕ್ಕೆ ಸ್ಪಂದಿಸಬಲ್ಲದು.

ನಮ್ಮ ದೃಷ್ಟಿಯು, ಸರಳವಾಗಿ ಕಾಣುವಂಥ, ಇಂಥ ಹಲವು ಆಯಾಮಗಳನ್ನು ಪರಿಶೋಧಿಸಿ, ದುಡಿಸಿಕೊಂಡೇ ಕಲಾವಿದನೊಬ್ಬನು ತನ್ನ ಕೃತಿಯ ಮಾಂತ್ರಿಕ ಜಾಲವನ್ನು ಹೆಣೆಯುವುದು. ಈ ಮಾಂತ್ರಿಕತೆಯ ಎಲ್ಲ ಒಳಪದರಗಳನ್ನಾಗಲಿ, ಅಂತಿಮ ಒಳಪದರಗಳನ್ನಾಗಲೀ ಸುಲಭವಾಗಿ ವಿವರಿಸಬಹುದೆಂಬುದು ಧಾರ್ಷ್ಟ್ಯದ ಮಾತು. ಆದರೆ, ಈವರೆಗೆ, ಸ್ಪಷ್ಟವಾಗಿರುವ ಮಟ್ಟಿಗೆ, ಕಲಾಕೃತಿಯೊಂದು ನಮ್ಮ ಹೃದಯ, ಮನಸ್ಸುಗಳಿಗೆ ಸಾಕಷ್ಟು ಹತ್ತಿರವಾದದ್ದೆ. ಅದನ್ನು, ಆ ಮಟ್ಟಿಗೆ, "ಅರ್ಥ" ಮಾಡಿಕೊಳ್ಳುವುದೂ ಸಾಧ್ಯ.

(ಕೃಪೆ : ಆಕಾಶವಾಣಿ, ಬೆಂಗಳೂರು)

ಚಿಯರ್ಸ್

ಕುಳಿತವರು ಇಬ್ಬರೇ
ನೊರೆ ತುಳುಕಿದ್ದು ಎರಡೇ ಗ್ಲಾಸಿನಲ್ಲಿ
ಹೇಗೆ ಕೇಳಿಸಿತು
ಮೂರನೆಯ ಚಿಯರ್ಸ್ ?

ತೆಂಗಿನಗರಿಯ ಗಲಗಲದ ನಡುವೆ
ನಿದ್ದೆಯಲ್ಲಿ ಫಡಫಡಿಸುವ ಕಾಗೆ
ಬೆನ್ನ ಮೇಲಿಟ್ಟ ಕೈ ತಣ್ಣಗೆ
ನಶೆಯೇರುವ ಮೊದಲೇ ನಡುಕ.

ಕತೆಗೆ ಹೂಂಗುಡುವ
ನಡುವೆ ಕಾಣದ ಮುಲುನಗೆ
ಬೆಳುದಿಂಗಳು ನೆತ್ತಿಗೇರಿದಾಗ
ತಂಗಾಳಿಯಲ್ಲಿ ಪಿಸುಗುಟ್ಟಿ

ಕೊನೆಗೆ ಗಹಗಹಿಸಿ
ಮೆಟ್ಟಿಲಿಳಿದು ಹೋದವನು
ಹಿಂದಿರುಗಲಿಲ್ಲ.

ಎರಡು ಗ್ಲಾಸಿನಲ್ಲಿ ಉಳಿದಿತ್ತು ಸ್ವಲ್ಪ
ಮುಗಿಸಿದವನೊಬ್ಬ.

ಪ್ರತಿಭಾ ನಂದಕುಮಾರ್

ಪ್ರತಿಭಾ ನಂದಕುಮಾರ್, ಭಾಷಾಂತರಕಾರರು, ಎನ್.ಜಿ.ಇ.ಎಫ್., ಬೆಂಗಳೂರು

ಆರ್. ಡಿ. ಹೆಗಡೆಯವರ ಎರಡು ಕವನಗಳು

ಸಣ್ಣ ಲೋಟದ ನೀರು

ಈ ಸಣ್ಣ ಲೋಟದಲಿ ಕುಗ್ಗುವ ನೀರು
ನೆಲದ ವೈಶಾಲ್ಯದಲಿ ಹಿಗ್ಗುವುದ
ನೋಡುತ್ತೇನೆ : ಅದಕ್ಕದರದೇ ಗತ್ತು
ಆಟ ನಿರ್ಭೀತಿ ಕಸುವು ಸ್ವಾತಂತ್ರ್ಯ
ಅಲ್ಲವ : ತನಗೆ ತಾನೇ ಸಾರ್ವಭೌಮ

ಯೋಚಿಸುತ್ತೇನೆ : ಇಡೀ ನೀರ
ಆಡಬಲ್ಲೆನೆ ಮೀನ ಹಾಗೆ
ಅಥವಾ
ಕ್ಷುದ್ರ ಎಲೆಗೆ ಸವಾರಿಯಾಗುತ್ತದಲ್ಲ ಕಡಲು
ಅದೇನು ನಮ್ರತೆಯೆ ಆಟದ ವಿನೋದವೆ
ಕನಿಕರದ ಮತ್ತೆಂಥದೊ ದೌರ್ಬಲ್ಯವೆ
ಇದೇ ಸಬಲರ ಗುಣವಿದ್ದೀತೆ, ಹೇಗೆ,
ಅಥವಾ....
ಹೀಗೆ
ಮನಾಮನಿ ಮೈ ಬೆಳೆಸಿ ಕವಿದ ಈ ವಿಶ್ವದ
ಈ ನೆಲದ ಈ ಪ್ರಶಸ್ತ ವೇಳೆಯು ಈ ನನ್ನ
ಹೆಮ್ಮೆಯು ಪದ್ಯದಭಿವ್ಯಕ್ತಿಯು
ತನ್ನ ಸಂತೃಪ್ತಿಯಲ್ಲಿ ಎಂಥ ಸಾರವ ಬಳಸಿ
ದೀನವಾಗಿಸಿದೆ !

ಪದ್ಯ

ಪದ್ಯ
ನೀರ ಹಾಗಿರಬೇಕು
ಅದ ಕುಡಿದ ನೆಲವಾಗಬೇಕು
ನಾನು
ನೆಲದ ಹದ

ಆರ್. ಡಿ. ಹೆಗಡೆ, ಕೃಷ್ಣಮನೆ, ಸಿ.ಎಂ. ರಸ್ತೆ, ಕೆ.ಆರ್. ನಗರ-571 602, ಮೈಸೂರು ಜಿಲ್ಲೆ

ನೆಲವೆ ಸುಂಖ
ನೆಲವ ಜೀವ ಮಿತಿ ಕಾಂತಿ ಅವಕಾಶ
ನೀರೇ ;
ನೀರು
ಬರೇ ಅದರ ಅರ್ಥವಲ್ಲ.

●

ಆರ್. ಡಿ. ಹೆಗಡೆ

ಮಹಾಬಲಮೂರ್ತಿ ಅವರ ಎರಡು ಕವನಗಳು

ನನ್ನ ನಿತ್ಯದ ಪ್ರಪಂಚದೊಳಗೆ

ಅನೇಕ ಕವಿಗಳು
ಬರೆದ ಕವಿತೆಗಳು ನನ್ನಲ್ಲಿದ್ದವು.

ಎಷ್ಟೊಂದು ಪದಗಳು ಸಾಲುಸಾಲಾಗಿ
ಜಗದ ಚಿತ್ರವನ್ನೇ ಬರೆದು
ಪುನರ್ನಿರ್ಮಿಸಿದ ಪ್ರಪಂಚ.
ಅದರೊಳಗೆ ನಾನು
ಮತ್ತು ನನ್ನ ಎದುರಿನ ಹಾದಿ ಹಾಗೆ ಹೋಗೆ
ಭ್ರಮೆ ಮತ್ತು ವಾಸ್ತವದ ನಡುವಿನ ತುಡಿತ ನನಗೆ.

ಪ್ರತಿ ಸೃಷ್ಟಿ
ಹಠಮಾರಿ ವಿಶ್ವಾಮಿತ್ರ
ತ್ರಿಶಂಕು ಸ್ವರ್ಗ
ಕಥನ ಕವನದ ಮರ್ಮ
ಕೊಳದೊಳಗಿನ ಕಮಲದ ಹಾಗೆ ಥಳ್ ಥಳ್....ಎನ್ನುವುದಿಲ್ಲ....
ಎನ್ನಲು ನಾನು ಯಾರು ?

ಆದರೂ

ಮಹಾಬಲಮೂರ್ತಿ ಕೊಡ್ಲೆಕೆರೆ, ಅಧಿಕಾರಿ. ಕರ್ನಾಟಕ ಬ್ಯಾಂಕ್, ಸೆಟ್ಟಿಲ್ಲಪ್ಪ ವೃತ್ತದ ಸಮೀಪ
ಬಸವನಗುಡಿ, ಬೆಂಗಳೂರು–560 004

ನನ್ನ ನಿತ್ಯದ ಪ್ರಪಂಚ
ದಲ್ಲಿ, ನನ್ನ ಕವಿತೆಗಳ ಕತೆಯೇ ಬೇರೆ
ನದಿಯ ದಂಡೆಯ ಗುಂಟ
ಮೊಳಕೆ-ಪೈರು-ಪಸಿರು ಎಂದೆಲ್ಲ ಅನ್ನಲಾರೆ. ಬದಲು
ಬರಗಾಲ ಬಂದಾಗಲೂ ಮರೆಯಬಾರದು ಆದರೆ
ಮುಂದಿನ ವರ್ಷ ಬಾನು
ಸುರಿಸೇ ತೀರುತ್ತದೆ ಬತ್ತದ ಧಾರೆ.

ದೊರಕುತ್ತಿಲ್ಲ

ಏನಿದು ಬೆಂಕಿ
ಬೆಳಕು ಕೊಡಲೋ
ಅಥವಾ ಸುಡಲೋ ಜೀವ
ವಿರದ ಹೆಣವನ್ನು
ಕತ್ತಲಿನಲ್ಲಿ ಕಾಸಲು ದೇಹ
ಶಿಶಿರದ ದಿನಗಳಲ್ಲಿ.

ಬೆಂಕಿ ನಂದಿತ್ತು
ಶಾಖ ಮರೆಯಾಯ್ತು
ತಣ್ಣಗಾಯ್ತು ಪೃಥ್ವಿ
ಕೇವಲ ಮಂಜುಗಡ್ಡೆ, ಜೀವ ನಿಶ್ಚಲ

ಎಲ್ಲೋ ಇದೆ
ಸಮತೋಲ
ಬೆಂಕಿ ಶೀತದ ನಡುವೆ
ದೊರಕುತ್ತಿಲ್ಲ ನಮಗೆ – ನಮ್ಮ ತಲೆಮಾರಿಗೆ.

ಮಹಾಬಲಮೂರ್ತಿ ಕೊಡ್ಲೆಕೆರೆ

ದೀಪ ತುಂಬಿದ ಮೇಲೆ

ಕರಿಯು ಕಂಬಳಿ ತುದಿಗೆ ಬೆಳ್ಳಿ ತುಪ್ಪಟದಂಚು
ಹೊದ್ದು ಬಂದನು ಗುಡಿಗೆ ಹೊತ್ತು ಭಾರದ ನಡಿಗೆ
ಹುರುಂದುಳ್ಳಿಯಾ ಗಂಟು ಬಿಚ್ಚಲಾರದ ನಂಟು

ಮೂಲೆ ಸೇರಿದ ಮೇಲೆ ಕಪಟ ಬಾವಲಿ ಲೀಲೆ
ಅಪ್ಪುದ್ದ ಹನುಮಂತ ಒಬ್ಬಂಟಿ ನಿಂತು
ಒಂಟಿ ದೀಪದ ಜೊತೆಗೆ ಮಾತುಕತೆಯಾಡಿ

ಚಿಟುಗು ಮುಳ್ಳಾಗಿ ಕಣ್ಣೆವೆಯು ಒಳಗೆ
ಕಾಡುತ್ತಲಿವೆ ನಿಲುವಂಗಿ ಜೋಡುಗಳು
ಇದ್ದು ಹೋದವರಾರು ನಾನಿಲ್ಲದಾ ರಾತ್ರಿ
ಬಿಟ್ಟು ಹೋದವರಾರು ನಿಲುವಂಗಿ ಜೋಡು ?

ಕಾಡಿ ಗೋಗರೆದರೂ ಹೆಣ್ಣು ಕೊಡದ ಮಾರಿ
ಕೊಟ್ಟಳಲ್ಲವ್ವ ಇದ್ದೊಂದು ಕತೆಯು ಜಾರಿ
ದಾರಿ ತಪ್ಪಿಸಿತೇ ಇರುಳು ಕತೆಯು ಕಾರಿ ?

ಬೆಳಕು ಬಂದವು ಗುಡಿಗೆ ಇರುಳ ಸಾರಿ
ತುಂಬಿದ ದೀಪಗಳು ಗುಡಿಯು ಸೇರುವುದು ನಡೆದ ದಾರಿ
ದಾರಿಗುಂಟವು ಮಾತು ಮನೆಮನೆಯು ಕುರಿತು

ಬೆಳಕು ಕಂಡನು ಕಂಬಳಿಯು ಜಾಳಿನೊಳಗೆ
ಇಷ್ಟು ದಿನ ಹೊತ್ತವಳ ಮಾಳಿಗೆಯು ಮನೆಗೆ
ಕಾಡಿ ಕಾಡಿಸಿಕೊಂಡು ನಿಲುವಂಗಿ ಜೋಡಾದ ಕತೆಯು ಬಳಿಗೆ

ಬಂದು ಕಾಣುವುದರೊಳಗೆ ತಲೆಬಾಗಿಲಲ್ಲಿ
ನುಸುಳಿ ಹೋಯಿತು ನಾಯಿ ಹಿಟ್ಟು ತಿಂದು
ಕತೆಯು ಹೇಳಿತು ದದ್ದ ಮಡಕೆ, ಚೊಟ್ಟೆ

ಇಂಗಿ ಹೋಯಿತು ಕುದಿದು ಹಿಟ್ಟಿನೆಸರು
ದೀಪ ತುಂಬಿದ ಮೇಲೆ ಇರುಳು ಮೈಯ್ಯಿಳಿದ ಬಸಿರು.

ಎಸ್. ನಟರಾಜ ಬೂದಾಳು

ಎಸ್. ನಟರಾಜ ಬೂದಾಳು, ಅಂಚೆ ಸೂಪರಿಂಟೆಂಡೆಂಟರ ಕಛೇರಿ, ತುಮಕೂರು–572 102

ಮಂದಿರ - ಮಸೀದಿ

— ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

ನೆಮ್ಮದಿಯ ಬದುಕಿಗೆ ಬೇಕಾಗಿರುವುದು ಹೊಟ್ಟೆ ತುಂಬ ಅನ್ನ, ಮೈ ತುಂಬ ಬಟ್ಟೆ, ಇರಲು ಮನೆ. ಇವುಗಳಿಗಾಗಿ ನಿರಂತರ ಹೋರಾಟ ನಡೆದಿದೆ. ಎಷ್ಟೇ ಶ್ರಮ ವಹಿಸಿದರೂ ಈ ಸೌಲಭ್ಯಗಳು ಸರ್ವರಿಗೂ ಸಮಾನವಾಗಿ ದೊರೆಯುತ್ತಿಲ್ಲ. ಅನ್ನವಿದ್ದರೆ ಬಟ್ಟೆಯಿಲ್ಲ. ಬಟ್ಟೆಯಿದ್ದರೆ ಮನೆಯಿಲ್ಲ. ಮನೆಯಿದ್ದರೆ ಅನ್ನ ಬಟ್ಟೆಗಳಿಲ್ಲ. ಹೇಗೋ ಜೀವನ ಸಾಗಿದೆ. ಇಂಥ ಹೀನ ಸ್ಥಿತಿಯಿಲ್ಲೂ ಧರ್ಮ, ದೇವರು ಭಾರತೀಯರ ಬದುಕಿನ ಅವಿಭಾಜ್ಯ ಅಂಗಗಳಾಗಿ ಬರುತ್ತಿವೆ. ಕಟ್ಟಾ ನಾಸ್ತಿಕರೆಂದು ಬೀಗುತ್ತಿರುವವರೂ ತಮಗರಿವಿಲ್ಲದಂತೆಯೇ ಧರ್ಮ ದೇವರ ಜಾಲದಲ್ಲಿ ಸಿಕ್ಕು ಒದ್ದಾಡುತ್ತಿರುವುದುಂಟು.

ಅನಾಥ ಪ್ರಜ್ಞೆ ಕಳೆದುಕೊಳ್ಳಲು, ಅಶಾಂತ ಮನಕ್ಕೆ ಶಾಂತಿ ಪಡೆಯಲು ದೇವರು–ಧರ್ಮ ನೆರವೀಯುತ್ತದೆಂಬ ಮಾತು ಸತ್ಯವಿರಬಹುದು. ಈ ನಂಬಿಕೆಯೇ ಕೆಲವೊಮ್ಮೆ ಜನರ ಸುಲಿಗೆ, ಸಾಮಾಜಿಕ ಗೊಂದಲ, ಹಿಂಸೆ, ಅಶಾಂತಿಗಳಿಗೂ ಕಾರಣವಾಗಬಲ್ಲದು. ಚರಿತ್ರೆಯ ಪುಟಗಳಲ್ಲಿ ಇದಕ್ಕೆ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ದೇಶದ ಸಮಗ್ರತೆ, ಏಕತೆ ಕಾಪಾಡಿ ಜನರ ಮೂಲಭೂತ ಆವಶ್ಯಕತೆಗಳನ್ನು ಪೂರೈಸುವ ಹೊಣೆಹೊತ್ತ ಜನನಾಯಕರೇ ಸಂದರ್ಭಾನುಸಾರ ಧರ್ಮ-ದೇವರುಗಳನ್ನು ತಮ್ಮ ಬಂಡವಾಳವಾಗಿಸಿಕೊಂಡು ಸಮಾಜದ ಅಸ್ಥಿರತೆಗೂ ಕಾರಣರಾಗಬಲ್ಲರೆಂಬುದು ತೆರೆದಿಟ್ಟ ಸತ್ಯವಾಗಿದೆ.

ಅಯೋಧ್ಯೆಯ ಪ್ರಕರಣ ಇಡೀ ದೇಶವನ್ನೇ ಸುಡುತ್ತಿದೆ. ಈ ವಿವಾದದ ಕಿಚ್ಚಿಗೆ ತುಪ್ಪ ಸುರಿಯುವ ಕುತಂತ್ರಗಳು ನಡೆದೇ ಇವೆ. ಈ ಕಿಚ್ಚಿನಲ್ಲಿ ಬೇಯುತ್ತಿರುವವರು ಬೆವರು ಸುರಿಸಿ ದುಡಿದು ತಿನ್ನುತ್ತಿರುವ ಬಡಪಾಯಿಗಳು ಮಾತ್ರ. ನಮ್ಮ ಊರುಗಳಲ್ಲಿಯ ಎಷ್ಟೋ ಮಂದಿರ–ಮಸೀದಿಗಳಿಗೆ ಸುಣ್ಣ ಬಣ್ಣಕ್ಕೂ ಗತಿಯಿಲ್ಲ. ಧೂಳು ತುಂಬಿ, ಬಿರುಕು ಬಿಟ್ಟು ತಿರುಕರ, ನಾಯಿ ನರಿಗಳ ತಂಗುದಾಣಗಳಾಗಿವೆ. ಇಂಥವುಗಳ ಜೀರ್ಣೋದ್ಧಾರಕ್ಕೆ ಮುಂದಾಗದ ಮುಖಂಡರು ರಾಮಮಂದಿರ–ಬಾಬರಿ ಮಸೀದಿಗಳಿಗಾಗಿ ಹೋರಾಟಕ್ಕಿಳಿದಿರುವುದು 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಬೇಕು' ಎನ್ನುವಂತಾಗುತ್ತಿದೆ. ನಮ್ಮಲ್ಲೇ ಬಿದ್ದಿರುವ ಸತ್ತ ಕತ್ತೆಯನ್ನು ಹೊತ್ತು ಹಾಕದ ಮಹಾನುಭಾವರು ಅಯೋಧ್ಯೆಯ ಹೆಸರಿನ ಗಾಳಿ ಬಿಟ್ಟು ಜನರನ್ನು ಪ್ರಚೋದಿಸಿ ದುರ್ಮರಣಕ್ಕೆ ಗುರಿ ಮಾಡುತ್ತಿರುವುದು ನಾಚಿಗೆಗೇಡಿನ ಸಂಗತಿ. ಇಂಥವರನ್ನು

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ
ಸಿರಿಗೆರೆ-577 541, ಚಿತ್ರದುರ್ಗ ಜಿಲ್ಲೆ

ುರಿತೇ ೮೦೦ ವರ್ಷಗಳ ಹಿಂದೆ ಬಸವಣ್ಣನವರು ಆಡಿರುವ ನುಡಿಗಳು ಎಲ್ಲರ ಕಣ್ಣು ತೆರೆಸುವಂತಿವೆ.

> ಲೋಕದ ಡೊಂಕ ನೀವೇಕೆ ತಿದ್ದುವಿರಿ ?
> ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ !
> ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ !
> ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
> ನಮ್ಮ ಕೂಡಲಸಂಗಮದೇವ.

ನಮ್ಮ ಮನೆ, ಮನಸ್ಸುಗಳ ಕೊಳೆ ತೊಳೆದುಕೊಳ್ಳದೆ ಇತರರ ಸಮಸ್ಯೆಯ ನಿವಾರಣೆಗೆ ಕೈ ಹಾಕುವುದು ಸಲ್ಲದು.

ನಾಲ್ಕಾರು ತಿಂಗಳ ಹಿಂದಿನ ಘಟನೆ. ವಿಶ್ವ ಹಿಂದೂ ಪರಿಷತ್ತಿನಿಂದ ಪ್ರೇರಿತ ರಾದ ಸಾಗೇಹಳ್ಳಿಯ ಯುವಕರು ನಮ್ಮಲ್ಲಿಗೆ ಬಂದರು. "ಬುದ್ಧಿ; ಇಟ್ಟಿಗೆ ಪೂಜಿಸಿ ಹೊಸದುರ್ಗಕ್ಕೆ ಮೆರವಣಿಗೆಯಲ್ಲಿ ಕಳಿಸಬೇಕಾಗಿದೆ. ಅಲ್ಲಿಂದ ಅಯೋಧ್ಯೆಗೆ ಕಳಿಸು ತ್ತಾರಂತೆ. ತಮಗೆ ಬಿಡುವಿರುವ ದಿನ ಸೂಚಿಸಿದರೆ ತಮ್ಮ ಅಮೃತಹಸ್ತದಿಂದ ಪೂಜಿಸಿ ಕಳಿಸುತ್ತೇವೆ" ಎಂದರು. ಅವರ ಉತ್ಸಾಹಕ್ಕೆ ತಣ್ಣೀರೆರಚಿದಂತೆ "ಈ ಪಾಪದ ಕಾರ್ಯಕ್ಕೆ ನಮ್ಮ ಬೆಂಬಲ, ಒಪ್ಪಿಗೆ ಇಲ್ಲ" ಎಂದು ಕಡ್ಡಿ ಮುರಿದಂತೆ ಹೇಳಿದೆವು. ಅವರು ದಿಗಿಲು ಗೊಂಡು "ತಾವು ಹಿಂದೂಗಳಲ್ಲವೇ ? ರಾಮಮಂದಿರ ಕಟ್ಟುವುದು ತಮಗೆ ಬೇಕಾಗಿ ಲ್ಲವೇ ? ಧರ್ಮದ ಮಾರ್ಗದರ್ಶಕರಾದ ತಾವೇ ನಾಸ್ತಿಕರಂತೆ ಮಾತನಾಡಿದರೆ ಹಿಂದೂ ಧರ್ಮದ ಗತಿಯೇನು ?" ಎಂದು ಆತಂಕದಿಂದ ಕೇಳಿದರು.

"ಭಾರತದಲ್ಲಿ ಬದುಕುತ್ತಿರುವವರೆಲ್ಲರೂ ಹಿಂದೂಗಳೇ. ಧರ್ಮವಿರುವುದು ಜನತೆಯ ವೈಷಮ್ಯಗಳನ್ನು ಕಳೆದು ಅಣ್ಣ-ತಮ್ಮಂದಿರಂತೆ ಬಾಳಲು ಕಲಿಸುವುದಕ್ಕೆ. ನಿಜವಾದ ಧರ್ಮ ಮನುಷ್ಯರಲ್ಲಿ ಬಂಧುತ್ವದ ಬೆಸುಗೆ ಹಾಕಿ ಸೌಹಾರ್ದದಿಂದ ಬಾಳಲು ಕಲಿಸುವಂಥದು. ಇದಕ್ಕೆ ಹೊರತಾದುದು ಧರ್ಮವೇ ಅಲ್ಲ. ಈ ರೀತಿಯ ಸದ್ಭಾವನೆ ಗಳನ್ನು ಬೆಳೆಸಿಕೊಳ್ಳದವರು ಮಾತ್ರ ನಾಸ್ತಿಕರು."

"ಇಟ್ಟಿಗೆ ಪೂಜಿಸಿ ಮೆರವಣಿಗೆಯಲ್ಲಿ ಅಯೋಧ್ಯೆಗೆ ಕಳಿಸುವುದೆಂದರೆ ಹಿಂದೂ ಮುಸಲ್ಮಾನರಲ್ಲಿ ಒಡಕಿನ ಬೀಜ ಬಿತ್ತಿದಂತೆ. ಶಾಂತಿಯನ್ನು ಕದಡಿದಂತೆ. ಹಿಂದೂ-ಮುಸಲ್ಮಾನರೀರ್ವರೂ ಮೊದಲಿಗೆ ಭಾರತೀಯರು ಎಂಬ ಎಚ್ಚರ ಎಲ್ಲರಿಗೂ ಇರಬೇಕು. ಭಾರತೀಯರು ಭಾವೈಕ್ಯ ಬೆಳೆಸಿಕೊಂಡು ಬಾಳಬೇಕಾದುದು ತೀರಾ ಮುಖ್ಯ. ಇಟ್ಟಿಗೆ ಪೂಜಿಸಿ ರಾಮಮಂದಿರ ಕಟ್ಟಲು – ಬಾಬರಿ ಮಸೀದಿ ಕೆಡವಿ – ಪ್ರೋತ್ಸಾಹಿಸುವುದು

ಭಾವೈಕ್ಯತೆಯ ಕಲ್ಲುಗಳನ್ನು ಕಿತ್ತಂತೆ. ಹಿಂದೂ-ಮುಸಲ್ಮಾನರಲ್ಲಿ ವಿಷ ಬೀಜ ಬಿತ್ತಿದಂತೆ. ಒಂದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಬೆಣ್ಣೆ ತುಂಬುವ ಹುಂಬತನಕ್ಕೆ ನಮ್ಮಂಥವರೇ ಮುಂದಾದರೆ ನಾವು ಸಮಾಜಕ್ಕೆ ಯಾವ ಆದರ್ಶ ನೀಡಿದಂತಾಗುತ್ತದೆ? ನಮ್ಮಿಂದ ಒಳಿತು ಬಯಸಿದ ಜನತೆಗೆ ನಾವಾಗಿಯೇ ಕೇಡು ಬಗೆದಂತಾಗುವುದಿಲ್ಲವೇ ? ನಮ್ಮ ಈ ಮಾತುಗಳ ಹಿಂದಿರುವ ಜನಪರ ಕಾಳಜಿಕ ಕಳಕಳಿಯನ್ನು ನೀವು ಗಂಭೀರವಾಗಿ ಚಿಂತಿಸಿದರೆ ಇಟ್ಟಿಗೆ ಪೂಜಿಸಿ ಕಳಿಸುವುದು ಪುಣ್ಯದ ಕಾರ್ಯವೋ ? ಪಾಪದ ಕಾರ್ಯವೋ ಎಂಬ ಅರಿವು ನಿಮಗಾದೀತು" ಎಂದು ಹೇಳಿ ಆ ಯುವಕರನ್ನು ಚಿಂತನೆಗೆ ತೊಡಗಿಸಿದೆವು. ಕೊನೆಗೆ ತಾವು ತುಳಿಯುತ್ತಿರುವ ಹಾದಿ ಅಪಾಯಕಾರಿಯಾದುದು ಎಂಬ ಭಾವನೆ ತಳೆದ ಆ ಯುವಕರು ಇಟ್ಟಿಗೆಯ ಉಸಾಬರಿಯೇ ಬೇಡವೆಂದು ತೀರ್ಮಾನಿಸಿದರು.

ಇಲ್ಲಿಯ ನೇರ ನಿಷ್ಠುರದ ಮಾತುಗಳು ಭಾವುಕರಿಗೆ ನೋವುಂಟುಮಾಡಬಹುದು. ಹಾಗಂತ 'ಹತ್ತರ ಕೂಡ ಹನ್ನೊಂದು–ಪರ್ಸಿ ಕೂಡ ಗೋವಿಂದ' ಆಗುವ ಇಚ್ಛೆ ನಮಗಿಲ್ಲ. ವೈದ್ಯ ಕೊಡುವ ಮಾತ್ರೆ ಕಹಿಯಾಗಿದ್ದರೂ ರೋಗ ನಿಯಂತ್ರಿಸುವ, ವಾಸಿ ಮಾಡುವ ಶಕ್ತಿ ಅದಕ್ಕಿರುವಂತೆ ನಮ್ಮ ಕಹಿ ನುಡಿಗಳೂ ಇವೆ ಎಂದು ಭಾವಿಸಬೇಕು. ಸತ್ಯ ಬಹು ಜನರಿಗೆ ಪ್ರಿಯವಾಗಲಾರದು. ಅದನ್ನು ಪ್ರಿಯಗೊಳಿಸಲು ಹೋಗಿ ಅಪಚಾರವೆಸಗಬಾರದು ಎಂಬ ಎಚ್ಚರವೂ ಇರಬೇಕು.

ರಾಮಮಂದಿರ–ಬಾಬರಿ ಮಸೀದಿಯ ಕಾರಣದಿಂದಾಗಿ ಹಿಂದೂ-ಮುಸಲ್ಮಾನರೀರ್ವರೂ ಮತೀಯ ದಳ್ಳುರಿಯಲ್ಲಿ ಬೇಯುತ್ತಿದ್ದಾರೆ, ಮನುಷ್ಯತ್ವವನ್ನೇ ಕಳೆದು ಕೊಂಡು ರಾಕ್ಷಸರಾಗುತ್ತಿದ್ದಾರೆ. ರಾಜಕೀಯ-ಧಾರ್ಮಿಕ ನೇತಾರರು ಈ ಪ್ರಕರಣವನ್ನು ಪ್ರತಿಷ್ಠೆಯ ಪ್ರತೀಕವೆಂದು ಭಾವಿಸಿದಂತಿದೆ. ತಮ್ಮ ತೆವಲುಗಳಿಗಾಗಿ ಬಡವರನ್ನು ಬಲಿಕೊಡುತ್ತಿದ್ದಾರೆ. ಅನುಮಾನ ಅವಿಶ್ವಾಸಗಳ ಬೀಜ ಬಿತ್ತುತ್ತಿದ್ದಾರೆ. ಒಬ್ಬ ಮತ್ತೊಬ್ಬನನ್ನು ಗುಮಾನಿಯಿಂದಲೇ ನೋಡುವ ವಾತಾವರಣ ನಿರ್ಮಿಸಿದ್ದಾರೆ. ಈ ನೇತಾರರಿಗೆ ರಾಮ–ರಹೀಮರ ಮೇಲಿನ ಭಕ್ತಿಗಿಂತ ರಾಜಕೀಯ ಪ್ರಭುತ್ವ, ಧಾರ್ಮಿಕ ದಬ್ಬಾಳಿಕೆ ಪ್ರಮುಖವಾಗುತ್ತಿದೆ. ಧರ್ಮ ಶ್ರದ್ಧೆಗಿಂತ ಧರ್ಮಾಂಧತೆ, ಜಾತ್ಯಂಧತೆಗಳು ಹೆಚ್ಚುತ್ತಿವೆ, ಧರ್ಮದ ಉದ್ದೇಶ ಒಡೆಯುವುದಲ್ಲ, ಕಟ್ಟುವುದು ಎಂಬುದನ್ನೇ ಅವರು ಮರೆಯುತ್ತಿದ್ದಾರೆ.

ದೇವರಿರುವುದು ಮಂದಿರ ಮಸೀದಿಗಳಿಗಿಂತ ಹೆಚ್ಚಾಗಿ ಜೀವಿಗಳ ಹೃದಯದಲ್ಲಿ. ಹೃದಯಮಂದಿರದಲ್ಲಿ ಕಾಣದ ದೇವರನ್ನು ಸ್ಥಾವರ ಮಂದಿರ–ಮಸೀದಿಗಳಲ್ಲಿ ಕಾಣಲು ಸಾಧ್ಯವಿಲ್ಲ. ಒಂದನ್ನು ಕೆಡವಿ ಮತ್ತೊಂದನ್ನು ಕಟ್ಟಲು ಯಾವ ಧರ್ಮದಲ್ಲೂ ಅವಕಾಶವಿಲ್ಲ. ಹಿಂದೆ ಅವಿವೇಕಿಯೊಬ್ಬ ಮಂದಿರ ಕೆಡವಿ ಮಸೀದಿ ಕಟ್ಟಿಸಿದನೆಂದು ನಾವೂ

ದೇ ಕೆಲಸ ಮಾಡುವುದು ಧರ್ಮಕ್ಕೆ ಬಗೆಯುವ ದ್ರೋಹ. ಇದರಿಂದ ಧರ್ಮ
ಾಗೃತಿಯಾಗದೆ ಮುಂದಿನ ಪೀಳಿಗೆ ಮಂದಿರ ಕೆಡವಿ ಮಸೀದಿ, ಮಸೀದಿ ಕೆಡವಿ ಮಂದಿರ
ಟ್ಟುವ ವಿಧ್ವಂಸಕ ಕೃತ್ಯಗಳಲ್ಲೇ ಬಾಳು ನೂಕುವಂತೆ ಮಾಡಿದಂತಾದೀತು. ಆದಂದ
ಂದಲೇ "ಕಲ್ಲ ಮನೆಯ ಮಾಡಿ, ಕಲ್ಲ ದೇವರ ಮಾಡಿ, ಆ ಕಲ್ಲು ಕಲ್ಲ ಮೇಲೆ ಕೆಡೆದರೆ
ೇವರೆತ್ತ ಹೋದನೋ ?" ಎಂದು ಅಲ್ಲಮಪ್ರಭುದೇವರು ಮಂದಿರ-ಮಸೀದಿ ಕಟ್ಟು
ವರನ್ನು ವಿಡಂಬಿಸಬೇಕಾಯಿತು.

ಬಸವಣ್ಣನವರು ಸ್ಥಾವರ ದೇವಾಲಯದ ಬದಲು ಜಂಗಮ ದೇವಾಲಯ
ಟ್ಟಲು ಸೂಚಿಸುತ್ತಾರೆ.

ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ ಬಡವನಯ್ಯ
ಎನ್ನ ಕಾಲೇ ಕಂಭ, ದೇಹವೇ ದೇಗುಲ
ಶಿರ ಹೊನ್ನ ಕಳಸವಯ್ಯ
ಕೂಡಲ ಸಂಗಮದೇವಾ ಕೇಳಯ್ಯ
ಸ್ಥಾವರಕ್ಕಳಿವುಂಟು ; ಜಂಗಮಕ್ಕಳಿವಿಲ್ಲ.

ಅವರವರ ಧರ್ಮವನ್ನು ಯಥಾವತ್ತಾಗಿ ತಿಳಿದು ಅದರ ತತ್ವಗಳಿಗನುಗುಣವಾಗಿ ನಡೆ
ಯುವುದನ್ನು ಯಾರೂ ಪ್ರಶ್ನಿಸಲಾರರು. ಆ ರೀತಿಯ ನಡಾವಳಿಕೆ ಆಯಾ ಧರ್ಮ
ಪುರುಷರಿಗೆ ಸಲ್ಲಿಸುವ ನಿಜವಾದ ಗೌರವವೂ ಹೌದು. ಸ್ವಧರ್ಮನಿಷ್ಠೆ, ಪರಧರ್ಮ
ಸಹಿಷ್ಣುತೆ ಪ್ರತಿಯೊಬ್ಬರಲ್ಲೂ ಇರಬೇಕು. ಆದರೆ ಇಂದು ಬಹು ಜನರಿಗೆ ಸ್ವಧರ್ಮದ
ಪರಿಚಯವಾಗಲಿ, ಪರಧರ್ಮದ ಸಹಿಷ್ಣುತೆಯಾಗಲಿ ಇಲ್ಲ. ಮತ್ತೊಬ್ಬರ ಧಾರ್ಮಿಕ
ಭಾವನೆಗಳನ್ನು ಕಲಕುವುದರಲ್ಲೇ ತಮ್ಮ ಧರ್ಮದ ಹಿರಿಮೆ ಇದೆ ಎಂದು ಭಾವಿಸಿರು
ವಂತಿದೆ. ಇದು ಧರ್ಮಾಂಧತೆಯಲ್ಲದೆ ಮತ್ತೇನು ?

ಅಯೋಧ್ಯೆಯ ದುರ್ಘಟನೆಯ ಹಿನ್ನೆಲೆಯಲ್ಲಿ ಕವಿ ಸುಮತೀಂದ್ರ ನಾಡಿಗರವರು
ಬರೆದಿರುವ ಕವನದ ಕೆಲವು ಸಾಲುಗಳು ಈ ಪ್ರಕರಣದ ಹಿಂದಿರುವ ಮತಾಂಧರ ಕಣ್ಣು
ತೆರಸಬೇಕಾಗಿದೆ.

"....ಹೊಟ್ಟೆಗೆ ಬಟ್ಟೆಗೆ ಕಾಸಿಲ್ಲದ ಜನ ಒಣಗುತ್ತಿದ್ದರೆ ಬಿಸಿಲಲ್ಲಿ,
ತೊಯ್ಯುತ್ತಿದ್ದರೆ ಮಳೆಯಲ್ಲಿ, ನಡುಗುತ್ತಿದ್ದರೆ ಚಳಿಯಲ್ಲಿ
ರಾಮಗೆ ಮಂದಿರ ಕಟ್ಟುವುದಕ್ಕೆ ಧಾರವಾಡ ಶಿವಮೊಗ್ಗಗಳಲ್ಲಿ
ಲಕ್ನೋ ದೆಹಲಿ ಕಾಶಿಗಳಲ್ಲಿ ಇಟ್ಟಿಗೆ ಹೊರುವರು ನಮ್ಮ ಜನ
ಕೆಲವರು ಯಾರೋ ಇರಿಯುತ್ತಿರಲು, ಜೋಪಡಿ ಜೋಪಡಿ ಉರಿಯುತ್ತಿರಲು

ರಾಮುಗೆ ಮಂದಿರ ಕಟ್ಟುವುದಕ್ಕೆ ಬಾಬ್ರಿ ಮಸೀದಿ ಕೆಡವುದಕ್ಕೆ
ಟೊಂಕ ಕಟ್ಟುವರು ನಮ್ಮ ಜನ
ಚುನಾವಣೆಗಳ ಹಣೇಬರಹವಿದು ಮತಗಳ ಗೆಲ್ಲಲು ಮತ ಬೇಕು
ಅದಕ್ಕೆ ಮತಕ್ಕೆ 'ಜಾತಿ' 'ಧರ್ಮ' ಎನ್ನುವ ಅರ್ಥಗಳಿರಬೇಕು."

(ಕನ್ನಡ ಪ್ರಭ 4-11-1990)

ಧರ್ಮಾಧಿಕಾರಿಗಳ ಜವಾಬ್ದಾರಿ ಅತ್ಯಂತ ಗುರುತರವಾದುದು. ಜನತೆ ಧರ್ಮ ಗುರುಗಳನ್ನು ದೇವರ ಪ್ರತಿನಿಧಿಗಳೆಂದೇ ನಂಬಿರುತ್ತದೆ. ಅವರು ಹೇಳುವುದು ವೇದ ವಾಕ್ಯವೆಂದೇ ಭಾವಿಸುತ್ತಾರೆ. ನಮ್ಮ ಧರ್ಮಕ್ಕೆ ಇಂಥವರಿಂದ ಅಪಚಾರವಾಗಿದೆ ಎಂದು ಧರ್ಮಾಧಿಕಾರಿಗಳೇ ಗುಲ್ಲೆಬ್ಬಿಸಿದರೆ ಭಕ್ತರು ಅದನ್ನು ಸತ್ಯವೆಂದೇ ತಿಳಿಯು ತ್ತಾರೆ. ಧರ್ಮರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ಬಲಿಕೊಡುವ ಹುಂಬತನಕ್ಕಿಳಿಯು ತ್ತಾರೆ. ತುತ್ತು ಅನ್ನ, ಮಾನ ಮುಚ್ಚಲು ಬಟ್ಟೆಗೂ ದಿಕ್ಕಿಲ್ಲದವರು ಕಾಸಿಗೆ ಕಾಸು ಕೂಡಿಟ್ಟು ನೇತಾರರಿಗೆ ಕೊಡಲು ಮುಂದಾಗುತ್ತಾರೆ. ಧರ್ಮದ ನಿಶೆಯೇ ಅಂಥದ್ದು. ಆದುದರಿಂದ ಧರ್ಮಗುರುಗಳು ತಮ್ಮ ಭಕ್ತರನ್ನು ತಪ್ಪು ದಾರಿ ತುಳಿಸದೆ ತುತ್ತು ಕೂಳಿಗೂ ಪರದಾಡುತ್ತಿರುವ ಜಂಗಮದೇವರ ತೃಪ್ತಿಯೇ ನಿಜವಾದ ದೇವರ ಆರಾಧನೆ ಎಂದು ಆ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು. ಅದು ರಾಮು–ರಹೀಮರೀರ್ವರಿಗೂ ಪ್ರಿಯವಾದ ಕಾರ್ಯ.

ಜನತೆಗೆ ವಿವೇಕ ಹೇಳಿ ಸನ್ಮಾರ್ಗದತ್ತ ಕರೆದೊಯ್ಯುವ ಗುರುಸ್ಥಾನದಲ್ಲಿರುವ ಧರ್ಮಾಧಿಕಾರಿಗಳು ರಾಜಕಾರಣಿಗಳನ್ನೇ ಅನುಸರಿಸಿದರೆ ಏನನ್ನಬೇಕು ? ತಾಯಿಯ ಹಾಲು ನಂಜಾದಂತೆ, ಬೇಲಿಯೇ ಹೊಲ ಮೇಯ್ದಂತೆ ಆಗುತ್ತದೆ. ಧರ್ಮದಲ್ಲಿ ರಾಜಕೀಯ, ರಾಜಕೀಯದಲ್ಲಿ ಧರ್ಮ ಬೆರೆಯುತ್ತಿರುವುದರ ದುಷ್ಪರಿಣಾಮವಿದು. ನೈಜ ಧರ್ಮದ ತಳಹದಿಯ ಮೇಲೆ ರಾಜಕೀಯ ಬೆಳೆದರೆ ಚಿಂತೆಯಿಲ್ಲ. ಆದರೆ ರಾಜ ಕೀಯ ಸ್ವಾರ್ಥಕ್ಕಾಗಿ ಧರ್ಮದ ಬಳಕೆ ಮಾಡಿಕೊಂಡರೆ ಅದು ತುಂಬಾ ಅಪಾಯಕಾರಿ. ಈಗ ಆಗುತ್ತಿರುವುದು ಇದೇ.

ಇಂದು ದೇಶಕ್ಕೆ ಬೇಕಾಗಿರುವುದು ಜ್ಞಾನದೇಗುಲಗಳೇ ಹೊರತು ಘರ್ಷಣೆ, ಮಾರಣಹೋಮಗಳಿಗೆ ಅವಕಾಶವೀಯುವ ಮಂದಿರ–ಮಸೀದಿಗಳಲ್ಲ. ಎಷ್ಟೋ ಕಡೆ ವಿದ್ಯಾರ್ಥಿಗಳು ಕೂರಲು ಭದ್ರವಾದ ಶಾಲಾ ಮಂದಿರಗಳಿಲ್ಲ. ಇದ್ದರೂ ಈಗಲೋ ಆಗಲೋ ಬೀಳುವಂತಿವೆ. ಆಟದ ಮೈದಾನ, ಗ್ರಂಥಾಲಯ, ಪೀಠೋಪಕರಣ ಮುಂತಾದವುಗಳ ಕೊರತೆಯೂ ಇಲ್ಲದಿಲ್ಲ. ಇಂಥ ಸೌಲಭ್ಯಗಳನ್ನು ಒದಗಿಸುವತ್ತ ನಾಯಕರು ಗಮನ ಹರಿಸಬೇಕು. ರಾಮುಮಂದಿರ–ಬಾಬರಿ ಮಸೀದಿ ಹೆಸರಿನಲ್ಲಿ

ಸಂಗ್ರಹಿಸಿರುವ ಕೋಟಿಗಟ್ಟಲೆ ಹಣವನ್ನು ಇಂಥ ಸತ್ಕಾರ್ಯಗಳಿಗೆ ಸದ್ಬಳಕೆ ಮಾಡುವ ಸದ್ಬುದ್ಧಿ ರಾಜಕೀಯ-ಧಾರ್ಮಿಕ ನೇತಾರರಿಗೆ ಬಂದರೆ ಅವರಿಗೆ ಸದ್ಗತಿಯಾದರೂ ದೊರೆತೀತು. ಇದರಿಂದ ರಾಮ-ರಹೀಮರ ಆತ್ಮಗಳು ಸಂತೃಪ್ತಿಗೊಂಡು ನಾಡು ನೆಮ್ಮದಿಯಿಂದಿರಲು ಸಾಧ್ಯವಾದೀತು.

ಅಯೋಧ್ಯೆಯ ವಿಚಾರದಲ್ಲಿ ಇಷ್ಟೊಂದು ತಲೆ ಕೆಡಿಸಿಕೊಳ್ಳದೆ ರಾಜಕೀಯ ಮಹಾನುಭಾವರು ತಮ್ಮಷ್ಟಕ್ಕೆ ತಾವಿದ್ದರೆ ನಿಜಕ್ಕೂ ಅವರು ಜನತೆಗೆ ಉಪಕಾರ ಮಾಡಿದಂತೆಯೇ. ಅಂತೆಯೇ ಧಾರ್ಮಿಕ ನೇತಾರರು ಹಮ್ಮು ಬಿಮ್ಮುಗಳನ್ನು ಬಿಟ್ಟು ಶಾಂತಿಯುತ ಸಂಧಾನದ ಮೂಲಕ ಈ ಸಮಸ್ಯೆಗೆ ಪರಿಹಾರ ಹುಡುಕುವ ತೆರೆದ ಮನಸ್ಸುಳ್ಳವರಾಗಬೇಕು. ಆವೇಶ, ಹಠಂಬತನ, ಮತಾಂಧತೆಗಳು ಮಧ್ಯೆ ನುಸುಳ ದಂತೆ ಎಚ್ಚರಿಕೆವಹಿಸಬೇಕು. ಹಳೆಯ ಗಾಯವನ್ನೇ ಕೆರೆದು ವ್ರಣ ದೊಡ್ಡದು ಮಾಡು ವುದು ಯಾರಿಗೂ ಬೇಡ. ದೇವರು ಸರ್ವ ಕತೆಯಲ್ಲೂ ಇರುವಾಗ ಬಾಬರಿ ಮಸೀದಿ ಕೆಡವಿ ಅಲ್ಲೇ ರಾಮಮಂದಿರ ಕಟ್ಟುವ ಹಟ ಚಟಗಳನ್ನು ಕೈಬಿಡಬೇಕು.

ಯಾರಿಗೂ ಕಾಣದಂತೆ ಬಾಳೆಯ ಹಣ್ಣನ್ನು ತಿಂದುಬರಲು ತಮ್ಮ ಶಿಷ್ಯರಿಗೆ ಆದೇಶವೀಯುತ್ತಾರೆ ಗುರುಗಳು. ಕನಕದಾಸರು ಮಾತ್ರ ಹಣ್ಣು ತಿನ್ನದೆ ವಾಪಸ್ ಬರುತ್ತಾರೆ. ನೀನೇಕೆ ಹಣ್ಣು ತಿಂದಿಲ್ಲ ಎಂದಾಗ ಎಲ್ಲೆಡೆಯೂ ದೇವರು ಇರುವಾಗ ಆ ದೇವರಿಗೆ ಕಾಣದಂತೆ ತಿನ್ನಲು ಹೇಗೆ ಸಾಧ್ಯ ಎಂದು ಕೇಳುತ್ತಾರೆ. ಈ ಕಥೆ ಬಾಬರಿ ಮಸೀದಿಯಿರುವ ಸ್ಥಳದಲ್ಲೇ ರಾಮಮಂದಿರ ಕಟ್ಟಬೇಕೆನ್ನುವವರ ಕಣ್ಣು ತೆರೆಸಬೇಕಾ ಗಿದೆ. ಒಂದರ್ಥದಲ್ಲಿ ರಾಮಮಂದಿರದ ಅವಶ್ಯಕತೆಯೇ ಇಲ್ಲ. ಆದರ ಮೇಲೂ ತಮಗೆ ಮಂದಿರ ನಿರ್ಮಾಣ ಆಗಲೇಬೇಕು ಎಂಬ ಭಾವನೆ ಇದ್ದಲ್ಲಿ ವಿವಾದಗ್ರಸ್ಥ ಸ್ಥಳ ವನ್ನು ಮುಟ್ಟದೆ ಅಯೋಧ್ಯೆಯ ಬೇರೊಂದು ವಿಶಾಲ ಸ್ಥಳದಲ್ಲಿ ಬೇಕಾದ ವಿನ್ಯಾಸದಲ್ಲಿ ಕಟ್ಟಿಸಬಹುದು. ಆಗ ಹಿಂದೂ-ಮುಸಲ್ಮಾನರಲ್ಲಿ ಸೌಹಾರ್ದತೆ ಮೂಡಿ ಸಂತೋಷ ದಿಂದ ಬಾಳಲು ದಾರಿ ಮಾಡಿಕೊಟ್ಟಂತಾಗುತ್ತದೆ.

ಮುಸಲ್ಮಾನ್ ಬಾಂಧವರಿಗೆ ಕೆಲವು ಕಿವಿಮಾತುಗಳು : ನಾವೆಲ್ಲ ಬದುಕುತ್ತಿರು ವುದು ಭಾರತಾಂಬೆಯ ಹಾಲುಂಡು; ಹಾಲುಂಡ ಮಾತೆಗೆ ಯಾರೂ ಕೇಡು ಬಯಸು ವುದಿಲ್ಲ. ಸ್ವಾತಂತ್ರ್ಯಪೂರ್ವದಲ್ಲಿ ಈ ಮಾತೆಯ ರಕ್ಷಣೆಗಾಗಿ ಹಿಂದೂಗಳಂತೆ ಅನೇಕ ಮುಸಲ್ಮಾನ್ ಬಾಂಧವರು ಹೋರಾಡಿ ಪ್ರಾಣ ತೆತ್ತಿದ್ದಾರೆ. ಅವರಿಗೆ ಜಾತಿಗಿಂತ ಭಾರತಾಂಬೆಯನ್ನು ಆಂಗ್ಲರ ಆಡಳಿತದ ಕಪಿಮುಷ್ಟಿಯಿಂದ ಮುಕ್ತಗೊಳಿಸಬೇಕೆಂಬುದೇ ಪ್ರಮುಖ ಉದ್ದೇಶವಾಗಿತ್ತು. ಇಂಥ ಹಿರಿಯರ ಆದರ್ಶ ನಿಮ್ಮ ಕಣ್ಮುಂದಿರಲಿ. ನಾವು ಭಾರತಾಂಬೆಯ ಮಕ್ಕಳು ಎಂಬ ಮಮತೆಯಿರಲಿ. ಹಿಂದಿನದನ್ನು ಕೆದಕದೆ

ಇತಿಹಾಸದಿಂದ ಪಾಠ ಕಲಿತು ಹಿಂದೂ-ಮುಸಲ್ಮಾನ್ ಎಂಬ ಮತೀಯ ಚೌಕಟ್ಟಿನಿಂದ ಹೊರಬಂದು ವಿಶ್ವಾಸದಿಂದ ಎಲ್ಲರೊಂದಿಗೆ ಬೆರೆತು ಬಾಳುವ ಸಂಕಲ್ಪ ತೊಡಬೇಕು.

ಇಸ್ಲಾಂ ಧರ್ಮ ಸಾರುವುದು ಶಾಂತಿಯ ಸಂದೇಶವನ್ನೇ. ಮಸೀದಿ ಮುಂದೆ ಯಾವುದೇ ಉತ್ಸವ ಬಂದರೆ ಅದನ್ನು ಗೌರವಿಸುವ ಹೃದಯವಂತಿಕೆ ಬೆಳೆಸಿಕೊಳ್ಳಿರಿ. ಮಸೀದಿ ಮುಂದೆ ವಾಲಗ ಊದಬಾರದು, ಮದ್ದು ಸುಡಬಾರದು, ಜಯಘೋಷ ಹಾಕಬಾರದು, ಉತ್ಸವ ಬರಬಾರದು ಎನ್ನುವ ನೀವು ಪ್ರತಿನಿತ್ಯ ಮೈಕ್‌ನಲ್ಲಿ ದೊಡ್ಡದಾಗಿ "ಅಲ್ಲಾ ಹೋ ಅಕ್ಬರ್...." ಎಂದು ಹೇಳುವುದು ಎಷ್ಟು ಸಹ್ಯ. ಇದು ಇತರ ಧರ್ಮೀಯರ ಧಾರ್ಮಿಕ ಭಾವನೆಗಳಿಗೆ ಪೆಟ್ಟು ಕೊಟ್ಟಂತಾಗುವುದಿಲ್ಲವೇ ? ಮೇಲಾಗಿ ಪ್ರಾರ್ಥನೆ ಮನದ ಮಲಿನತೆ ಕಳೆದುಕೊಳ್ಳಲು ಭಕ್ತ ತನ್ನ ಅಂತರಂಗದಲ್ಲೇ ಮಾಡಬೇಕಾಗಿರುವ ಪವಿತ್ರ ಕ್ರಿಯೆ. ಇಂಥ ಪವಿತ್ರ ಪ್ರಾರ್ಥನೆಯ ಪಾವಿತ್ರತೆ ಮಸೀದಿಯ ಮೇಲೆ ಮೈಕ್‌ನಲ್ಲಿ ಹೇಳಿಸುವುದರಿಂದ ಉಳಿಯಲಾರದು. ಹಾಗೆಯೇ ಭಾರತದ ಸಂವಿಧಾನದ ಎಲ್ಲ ನಿಯಮಾವಳಿಗೂ ಭಾರತೀಯರೇ ಆಗಿರುವ ನೀವೂ ಬದ್ಧರಾಗಿರಬೇಕಾದ್ದು ಧರ್ಮ. ಇದು ಭಾರತೀಯರ ಸಂಘಟನೆಯ ದೃಷ್ಟಿಯಿಂದ ಬಹು ಮುಖ್ಯ. ಇಂಥ ಭಾವನೆಗಳು ಬೆಳೆದಲ್ಲಿ ಈ ನೆಲದಲ್ಲಿ ಶಾಂತಿಯಿಂದ ಎಲ್ಲರೂ ಬದುಕಲು ಸಾಧ್ಯ.

ತಾಯಿ

ಹುಟ್ಟಿಸಿದ ತಾಯಿ
ಹುಟ್ಟಿಸುವ ಆಟ
ನಮ್ಮಲ್ಲಿ ಹುರುಪು ಬಿಟ್ಟು

ನಗುತಾಳೆ ನೋಡಿ
ನಗಿಸುವಳು ಜೋಡಿ
ನಗಲೆಲ್ಲ ಕುಣಿಸಿ ಹೊಡೆಸಿ

ಬರಿಹೊಟ್ಟೆ ಪಾಡು
ಚಿರಮನದ ಹಾಡು
ಕೂಡಿಟ್ಟು ಹಾಡುತಿಹಳು

—ಶ್ರೀಧರ ಪಿಸ್ಸೆ

ಶ್ರೀಧರ ಪಿಸ್ಸೆ, ಬಸವೇಶ್ವರನಗರ, ಬೆಂಗಳೂರು

'ಹಳೆಯ ದೇವರುಗಳೆಲ್ಲಾ ಸತ್ತು....'

(ಧರ್ಮ ಮತ್ತು ಸಾಮರಸ್ಯ : ವಸಾಹತುಶಾಹಿ ಅನುಭವ)

—ನಟರಾಜ್ ಹುಳಿಯಾರ್

–1–

1949ನೇ ಇಸವಿಯ ಒಂದು ಸಂಜೆ. ಬಾಬ್ರಿ ಮಸೀದಿಯ ಉಸ್ತುವಾರಿಯಲ್ಲಿ ...ರ್ವಾತ ಮಸೀದಿಯ ಒಳಹೊಕ್ಕು ನೋಡುತ್ತಾನೆ : ತಾವು ಪ್ರತಿದಿನ ಕೂತು ನಮಾಜು ಮಾಡುವ ಜಾಗದಲ್ಲಿ ಯಾವುದೋ ಮಾಯದಲ್ಲಿ ರಾಮನ ವಿಗ್ರಹಗಳು ಬಂದುಬಿಟ್ಟಿವೆ. ವಿಗ್ರಹಪೂಜೆಯನ್ನೇ ವಿರೋಧಿಸುವ ಧರ್ಮದ ಅನುಯಾಯಿಗೆ ಹೀಗೆ ಪ್ರತ್ಯಕ್ಷವಾದ ಕಲ್ಲುದೇವರುಗಳನ್ನು ಕಂಡು ನಿಂತ ನೆಲವೇ ಕುಸಿದ ಅನುಭವವಾಗಿರಬೇಕು. ಆದರೆ, ಈಗ ನನ್ನೆದುರು ಇರುವ ಪ್ರಶ್ನೆಗಳು ಇವು : ಆ ಸಂಜೆ ಅಲ್ಲಿ ವಿಗ್ರಹಗಳನ್ನು ತಂದಿಟ್ಟ 'ಹಿಂದೂ ಮನಸ್ಸಿ'ಗೆ ಇಂಥ ಪ್ರೇರಣೆ ಏಕಾಏಕಿ ಎಲ್ಲಿಂದ ಹುಟ್ಟಿತು ? ಇದು ಪ್ರತೀಕಾರವೆ ? ವಸಾಹತುಶಾಹಿಯ ಪ್ರವೇಶಕ್ಕೆ ಮುನ್ನ ಒಟ್ಟಿಗೇ ಬದುಕಿದ ಎರಡು ಧರ್ಮಗಳ ನಡುವೆ ಕಳೆದೆರಡು ಶತಮಾನಗಳಲ್ಲಿ ಇಂಥ ಹಗೆತನ ಹುಟ್ಟಿದ್ದು ಹೇಗೆ ? ಮುಸ್ಲಿಮರ ಆಕ್ರಮಣದ ನಂತರದ ಹಲವು ಶತಮಾನಗಳು ಇಂಡಿಯಾದಲ್ಲಿ ಕಂಡ ಮತೀಯ ಸಾಮರಸ್ಯ ವಸಾಹತುಶಾಹಿ ಸಂದರ್ಭದಲ್ಲಿ ತಳೆದ ಸ್ವರೂಪವನ್ನು ಅರ್ಥಮಾಡಿಕೊಳ್ಳುವ, ಹಾಗೂ ಈ ಹೊತ್ತಿನ ಕೋಮುವಾದದ ಬೇರುಗಳನ್ನು ವಸಾಹತುಶಾಹಿ ಘಟ್ಟದಲ್ಲಿ ಹುಡುಕುವ ಪ್ರಯತ್ನ ನನ್ನದು.

ಹಾಗಾದರೆ ಆ ಸಂಜೆ ಮಸೀದಿಯಲ್ಲಿ ರಾಮನ ವಿಗ್ರಹಗಳನ್ನು 'ಪ್ರತಿಷ್ಠಾಪಿಸಿದ' ಹಿಂದೂವಿನ ಧರ್ಮದ ಕಲ್ಪನೆ ಏನು? ಪರಂಪರಾನುಗತವಾಗಿ ಅವನಲ್ಲಿ ಹರಿದುಬಂದ ನಂಬಿಕೆ (faith) ಯಾಗಿದ್ದ ಧರ್ಮ ಇದ್ದಕ್ಕಿದ್ದಂತೆ ಅವನಿಗೆ ರಾಜಕೀಯ ಸಾಧನ ಹೇಗಾಯಿತು ? ಮಸೀದಿಯಲ್ಲಿ ವಿಗ್ರಹ ತಂದಿಟ್ಟು ಧರ್ಮ ಸಂಸ್ಥಾಪನೆ ಮಾಡಬಹುದೆಂಬ ಸ್ಪರ್ಧಾತ್ಮಕ ಒತ್ತಡ ಎಲ್ಲಿಂದ ಹುಟ್ಟಿತು? ಈ ಬೆಳವಣಿಗೆಗಳನ್ನು ಅರ್ಥಮಾಡಿಕೊಳ್ಳಲು ನಾನಿಲ್ಲಿ ಆಶಿಶ್ ನಂದಿಯ ಮೊರೆ ಹೋಗುತ್ತೇನೆ. ಆಶಿಶ್ ನಂದಿ ತನ್ನ 'ಪಾಲಿಟಿಕ್ಸ್ ಆಫ್ ಸೆಕ್ಯುಲರಿಸಂ' ಲೇಖನದಲ್ಲಿ ಪಶ್ಚಿಮ ಏಷಿಯಾದಲ್ಲಿ ಧರ್ಮವು 'ನಂಬಿಕೆ' ಮತ್ತು 'ಐಡಿಯಾಲಜಿ'–ಹೀಗೆ ಎರಡು ಹೋಳಾದದ್ದರ ಕುರಿತು ಹೇಳುತ್ತಾನೆ. ಆಂದರೆ 'ಬದುಕುವ ಬಗೆ'ಯಾಗಿದ್ದ ಧರ್ಮ ವಸಾಹತುಶಾಹಿ ಘಟ್ಟದಲ್ಲಿ ಐಡಿಯಾಲಜಿಯಾಗಿ ಬಿಡುತ್ತದೆ. ಧರ್ಮ ಐಡಿಯಾಲಜಿಯಾಗುವುದೆಂದರೇನೆಂಬುದನ್ನು ನಂದಿಯೇ

ನಟರಾಜ್ ಹುಳಿಯಾರ್, ಇಂಗ್ಲಿಷ್ ಅಧ್ಯಾಪಕ, ಎನ್. ಎಂ. ಕೆ. ಆರ್. ವಿ. ಮಹಿಳಾ ಜೂನಿಯರ್ ಕಾಲೇಜು, ಜಯನಗರ, ಬೆಂಗಳೂರು–11

ವಿವರಿಸುತ್ತಾನೆ :.... By ideology I mean religion as a sub-national, national or cross-national identifier of populations contesting for or protecting non-religious, usually political or socioeconomic interests. ಈ ಅರ್ಥದಲ್ಲೇ ಜಮಾತ್ ಎ-ಇಸ್ಲಾಮಿಗೆ ಧರ್ಮ ಎನ್ನುವುದು ಒಂದು ಐಡಿಯಾಲಜಿ ಮಾತ್ರ. ನಾಸ್ತಿಕನಾದ ಜಿನ್ನಾಗೆ ಇಸ್ಲಾಂ ಎನ್ನುವುದು ಧರ್ಮವಾಗಿರುವುದಿಲ್ಲ ; ಬದಲಿಗೆ ಬರೇ ರಾಜಕೀಯ ಸಾಧನ ಅಥವಾ ಐಡಿಯಾಲಜಿಯಾಗಿರುತ್ತದೆ. ಅದೇ ರೀತಿಯಲ್ಲಿ ನಾಸ್ತಿಕನಾದ ಸಾವರ್ಕರ್‌ಗೆ ಹಿಂದೂ ಧರ್ಮ ಕೂಡ. ಸಾವರ್ಕರ್ ಹಾಗೂ ಜಿನ್ನಾ ಇಬ್ಬರಿಗೂ ಧರ್ಮ ಎನ್ನುವುದು ಕಬೀರ, ಶರೀಫ, ಬಸವಣ್ಣ ಇವರ ದೃಷ್ಟಿಯಲ್ಲಿದ್ದ ಹಾಗೆ 'ಜನರ ಧರ್ಮ' ವಾಗಿರಲಿಲ್ಲ. ಬದಲಿಗೆ, ಉಳಿಸಿಕೊಳ್ಳಬೇಕಾದ ಅಥವಾ ಕಾಯ್ದುಕೊಳ್ಳಬೇಕಾದ 'ಪಾರ್ಟಿ' ಮಾತ್ರವಾಗಿತ್ತು. ಆಧುನೀಕರಣದ ಈ ಘಟ್ಟದಲ್ಲಿ ಧರ್ಮದ ಮೂಲ ಅರ್ಥ ಮಾಯವಾಗುವುದರ ಜೊತೆಗೇ ಧರ್ಮಕ್ಕೂ ನೈತಿಕತೆಗೂ ಇದ್ದ ನಂಟು ಸಡಿಲಗೊಳ್ಳ ತೊಡಗಿತು. 'ಧರ್ಮ ಅಂದರೆ ನಡವಳಿಕೆ' ಎಂದು ಸರಳವಾಗಿ ಧರ್ಮವನ್ನು ಅರ್ಥೈಸುವ ಸಾಮಾನ್ಯ ಜನರನ್ನು ದೇವಸ್ಥಾನ ಅಥವಾ ಮಸೀದಿ ಕೆಡುವುವುದರ ಬಗ್ಗೆ ಅಭಿಪ್ರಾಯ ಕೇಳಿನೋಡಿ ; "ಅದು ಧರ್ಮ ಅಲ್ಲ, ಬಿಡಿ" ಅನ್ನುತ್ತಾರೆ. ಆದರೆ ಹಿಂದೂ ಧರ್ಮ ಪ್ರತಿಷ್ಠಾಪನೆಗಾಗಿ ಮಸೀದಿಯಲ್ಲಿ ವಿಗ್ರಹ ತಂದಿಟ್ಟವನಲ್ಲಿ ತನ್ನ ಹಿರಿಯರು ಹೇಳಿಕೊಟ್ಟಿದ್ದ ನೈತಿಕತೆ ಮಾಯವಾಗಿತ್ತು ; ಹಳೆಯ ನೈತಿಕತೆಯ ಬದಲಿಗೆ ಹೊಸ ನೈತಿಕತೆಯ ಸುಳಿವಿನ್ನೂ ಇರಲಿಲ್ಲ. ಅದು ಹಳೆಯ ದೇವರುಗಳೆಲ್ಲಾ ಸತ್ತು, ಹೊಸ ದೇವರುಗಳಿನ್ನೂ ಹುಟ್ಟದ ಕಾಲ.

ಎಲ್ಲ ವಸಾಹತು ಜಗತ್ತುಗಳಲ್ಲೂ ಇಂಥದೇ ಸಂಕ್ರಮಣ ಸ್ಥಿತಿಯ ಗೊಂದಲ.

– 2 –

ವಸಾಹತುಶಾಹಿ ಎನ್ನುವುದು ಇಂಡಿಯಾಕ್ಕೆ ಕಾಲಿಡುವ ಮುನ್ನ ಈ ಎರಡೂ ಧರ್ಮಗಳು ಯುಟೋಪಿಯನ್ ಜಗತ್ತಿನ ಮಾದರಿಯಲ್ಲಿ ಅನ್ಯೋನ್ಯವಾಗಿದ್ದವು ಎಂಬ ಭೂತದ ಆದರ್ಶೀಕರಣದ ಮಾತನ್ನೇನೂ ನಾನಿಲ್ಲಿ ಆಡುತ್ತಿಲ್ಲ. ಇತಿಹಾಸದುದ್ದಕ್ಕೂ ಧರ್ಮಗಳು ಪರಸ್ಪರ ಕಾಳಗಕ್ಕಿಳಿದ ಉದಾಹರಣೆಗಳಿವೆ. ಆದರೆ ಇತರ ಧರ್ಮಗಳ ಮೇಲಿನ ಹಿಂಸೆ ನ್ಯಾಯವಾದದ್ದು ಎಂಬ ಈ ಹೊತ್ತಿನ ಆಧುನಿಕ ತರ್ಕ ಆ ಘಟ್ಟದಲ್ಲಿ ಎರಡೂ ಧರ್ಮದ ಬಹುಸಂಖ್ಯಾತರಲ್ಲಿ ಇನ್ನೂ ಹುಟ್ಟಿರಲಿಲ್ಲ. ಅಂದರೆ ಒಂದು ಬಗೆಯ ಸಮುದಾಯ ಪ್ರಜ್ಞೆಯಲ್ಲಿ ಬದುಕುತ್ತಿದ್ದ ಸಮಾಜದಲ್ಲಿ ಕೋಮುವಾದೀ ಪ್ರಜ್ಞೆ ತನ್ನ ಕರಾಳಮುಖವನ್ನಿನ್ನೂ ತೋರಿಸಿರಲಿಲ್ಲ. ರೋಮಿಲಾ ಥಾಪರ್ ಅವರು

ಪುರಾತನ ಹಾಗೂ ಮಿಡೀವಲ್ ಭಾರತದಲ್ಲಿ ಕೋಮುವಾದಿ ಐಡೆಂಟಿಟಿ ಇರಲಿಲ್ಲ ಎಂಬುದನ್ನು ಉದಾಹರಣೆ ಸಹಿತ ತೋರಿಸುತ್ತಾರೆ. ಬಿಪಿನ್‌ಚಂದ್ರ ಅವರ ವಾದ ಕೂಡ ಅದೇ : ಈ ಕೋಮುವಾದ ಎನ್ನುವುದು ಕಳೆದ ನೂರು ವರ್ಷಗಳ ಬೆಳವಣಿಗೆ.

ಈ ಎಲ್ಲ ವಾದಗಳು ಒಂದನ್ನು ಸ್ಪಷ್ಟವಾಗಿ ಹೇಳುತ್ತವೆ: ಮತೀಯ ಸಾಮರಸ್ಯ ವನ್ನು ಒಡೆಯುವಲ್ಲಿ ಭಾರತಕ್ಕೆ ಪಶ್ಚಿಮ ಕೊಟ್ಟ ಹಲವು ಪರಿಕಲ್ಪನೆಗಳ ಪಾಲೂ ಇದೆ. ಹದಿನೇಟು, ಹತ್ತೊಂಭತ್ತನೇ ಶತಮಾನದಲ್ಲಿ ಪಶ್ಚಿಮದ ಪ್ರೇರಣೆಯಿಂದಾಗಿ ಭಾರತದಲ್ಲಿ ನಡೆದ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣಾವಾದೀ ಚಳವಳಿಗಳಿಂದಾಗಿ ಭಾರ ತೀಯರು ನೋಡುವ ಕ್ರಮದಲ್ಲಿ ಉಂಟಾದ ಒಂದು ಬಹುಮುಖ್ಯವಾದ ಪಲ್ಲಟ ಕುರಿತು ಆಶಿಶ್‌ನಂದಿ ತನ್ನ 'ದಿ ಇಂಟಿಮೇಟ್ ಎನಿಮಿ' ಪುಸ್ತಕದಲ್ಲಿ ಹೇಳುತ್ತಾರೆ. ವಸಾಹತು ಶಾಹಿ ಆಲೋಚನಕ್ರಮದಿಂದಾಗಿ ನಿಜವಾದ 'ಭಾರತೀಯತ್ವ' ಎಂದರೆ 'ಕ್ಷತ್ರಿಯತ್ವ' ಎಂಬ ನಿಲುವು ಹುಟ್ಟುತ್ತದೆ. ಹೀಗೆ ಪಶ್ಚಿಮ ಕೊಟ್ಟ ಹೊಸ ನೋಟದಿಂದಾಗಿ 'ಪುರುಷತ್ವ'ದ ಆಧುನಿಕ ಮುಖದ ವಿಜೃಂಭಣೆ ಆರಂಭವಾಗುತ್ತದೆ. ಈ ಆಧುನಿಕ ನೋಟಕ್ರಮದ 'ಪುರುಷತ್ವ'ದ ಹಲವು ಮುಖಗಳೆಂದರೆ : achievement, control, competetion ಮತ್ತು power. ಪಶ್ಚಿಮದಲ್ಲಿ ಹೇಗೋ ಹಾಗೆ ಇಂಡಿಯಾದಲ್ಲಿ ಕೂಡ ಇವೇ ಆರಾಧನೀಯ ಮೌಲ್ಯಗಳಾಗಿ ರಾರಾಜಿಸಲಾರಂಭಿಸುತ್ತವೆ. ಇದು ನಂದಿಯ ವಾದದ ಸಾರಾಂಶ. ಈ 'ಕ್ಷತ್ರಿಯತ್ವ'ದ ಪುರುಷ ದುರಹಂಕಾರದ ಕಣ್ಣಲ್ಲಿ ಭಾರತದ ಆದರ್ಶಪುರುಷ ಅಶೋಕನಲ್ಲ; ಶಿವಾಜಿ. ತಿಲಕರ 'ಗಂಡು' ಆವೇಶದೆದುರು ಗಾಂಧಿ 'ಹೆಣ್ಣಿಗ'ನಾಗಿ ಕಾಣುತ್ತಾನೆ. ಚರ್ಚ್, ಮಸೀದಿ, ಗುಡಿ ಎಲ್ಲದರಲ್ಲೂ ಪಗಡೆ ಕಾಯಿಯಂತೆ ದಾಟಿ ಹಣ್ಣಾಗಬಯಸಿದ್ದ ಪರಮಹಂಸರಿಗಿಂತ ಆಧುನಿಕ ಪರಿಭಾಷೆಯನ್ನು ಬಳಸುವ ವಿವೇಕಾನಂದ ಆಕರ್ಷಕವಾಗಿಬಿಡುತ್ತಾನೆ.

ವಸಾಹತೀಕರಣ ಘಟ್ಟದಲ್ಲುಂಟಾದ ಈ ಮೌಲ್ಯ ಪಲ್ಲಟಕ್ಕೂ ಅದು ಉದ್ಘಾಟಿ ಸಿದ ಕೋಮುವಾದಕ್ಕೂ ಇರುವ ಸಂಬಂಧವನ್ನು ಬಿಡಿಸಿ ಹೇಳಬೇಕಾಗಿಲ್ಲ. ಈ ಹೊಸ ಮೌಲ್ಯಗಳ ಲೋಕದಲ್ಲಿ 'ಸಹನಾಭವತು ಸಹನೌಭುನಕ್ತು'ವಿನ ಉದಾತ್ತತೆಯ ಬದಲಿಗೆ ಕ್ಷತ್ರಿಯ ಆವೇಶದ 'ಎದ್ದೇಳು, ಕೊಚ್ಚು, ಕಡಿ' ಎನ್ನುವುದು ಆದರ್ಶಮಂತ್ರವಾಗು ತ್ತದೆ. ಹಿಂದೂಗಳ 'ಉದ್ಧಾರ'ಕ್ಕಾಗಿ ಗಾಂಧಿಯನ್ನು ಕೊಲೆಮಾಡಿದ ಗೋಡ್ಸೆಯ ಪೌರುಷವನ್ನು ಉಗ್ರವಾದಿ ಹಿಂದೂಗಳು ಕೊಂಡಾಡುತ್ತಾರೆ. ರಾಕೆಟ್ಟುಗಳ ಯುಗದಲ್ಲಿ ಡನ್‌ಲಪ್ ಟೈರುಗಳ ರಥವನ್ನೇರಿ ಮುಸ್ಲಿಮರ ವಿರುದ್ಧ ಬೆಂಕಿ ಕಾರುವ ಅಡ್ವಾನಿ ರಾಷ್ಟ್ರ ನಾಯಕನಾಗಿಬಿಡುತ್ತಾನೆ.

ಅಂದು ಉದ್ಘಾಟನೆಗೊಂಡ ಕೋಮುವಾದದ ಹಿನ್ನೆಲೆಯಲ್ಲಿ ವಸಾಹತೀಕರಣ ಪ್ರಕ್ರಿಯೆಯಲ್ಲಿ ಈ ಸಂಸ್ಕೃತಿಯಲ್ಲಿ ಹುಟ್ಟಿದ ಪುನರುತ್ಥಾನವಾದದ ಪಾಲೂ ಇದೆ. ಹೀಗೆ ಹುಟ್ಟಿದ ಪುನರುತ್ಥಾನವಾದಕ್ಕೆ ಎರಡು ಕಾರಣಗಳಿದ್ದವು: ಒಂದು, ಪರಕೀಯ ಸಂಸ್ಕೃತಿಯೊಂದು ಭಾರತೀಯ ಸಂಸ್ಕೃತಿಯಲ್ಲಿ ಕೀಳರಿಮೆಯ ಭಾವನೆ ಹುಟ್ಟು ಹಾಕಿದ್ದು. ಎರಡು, ಈ ಸಂಸ್ಕೃತಿಯಲ್ಲಿ ದಿವ್ಯವಾದದ್ದೊಂದು ಕಳೆದುಹೋಗಿದೆ; ಅದನ್ನು ಮರಳಿ ಪಡೆಯಬೇಕೆಂಬ ಪ್ರೇರಣೆ, ಮುಖ್ಯವಾಗಿ, ಪಾಶ್ಚಾತ್ಯ ವಿದ್ಯಾಭ್ಯಾಸ ಪಡೆದವರಲ್ಲಿ ಹುಟ್ಟಿದ್ದು. ಇಂಥ ಪುನರುತ್ಥಾನವಾದದ ಕಲ್ಪನೆ ಹಿಂದೂ–ಮುಸ್ಲಿಂ ಕೋಮುಸಾಮರಸ್ಯವನ್ನು ನಾಶಮಾಡಿದ್ದರ ಕಥೆಯಲ್ಲಿ ವಸಾಹತುಶಾಹಿ ಇತಿಹಾಸಕಾರರ ಪಾಲೂ ಸಾಕಷ್ಟಿರುವುದನ್ನು ಸಯ್ಯದ್ ಮುಹಮ್ಮದ್ ಎಂಬ ಪತ್ರಕರ್ತ ತಮ್ಮ 'ಹಿಂದೂ-ಮುಸ್ಲಿಂ: ಕಲ್ಚರಲ್ ಅಕಾರ್ಡ್' ಪುಸ್ತಕದಲ್ಲಿ ಚರ್ಚಿಸುತ್ತಾರೆ: ಕಲೋನಿಯಲ್ ಇತಿಹಾಸಕಾರರಾದ ವಿಲಿಯಂ ಜೋನ್ಸ್, ಹೊರೇಸ್ ಹೇಮನ್, ವಿಲ್ಸನ್‌ರಂಥವರು ಮಾಡಿದ ಕೆಲಸವೆಂದರೆ ಕಳೆದ ಶತಮಾನದ ಗ್ರಸ್ತ ಭಾರತಕ್ಕೆ ಪ್ರತಿಯಾಗಿ ಪುರಾತನ ಭಾರತದ ಅದ್ಭುತ ಚಿತ್ರಗಳನ್ನು ತೆರೆದಿಟ್ಟದ್ದು. ಈ ಪುರಾತನ ಭಾರತದ ಅತಿರಂಜಿತ ಚಿತ್ರಗಳು ಸಹಜವಾಗಿಯೇ ಹಿಂದೂಮನಸ್ಸಿನಲ್ಲಿ ಮತೀಯ ಭಾವನೆಗಳನ್ನು ಕೆರಳಿಸಿಬಿಟ್ಟವು. ಭಾರತಕ್ಕೊಂದು ಸರ್ವಶ್ರೇಷ್ಠ ನಾಗರಿಕತೆಯಿತ್ತು; ಅದನ್ನು ನಾಶಮಾಡಿದ ಖಳನಾಯಕರು ಮುಸ್ಲಿಮರೇ ಎಂಬ ಭಾವನೆ ಹುಟ್ಟಿದ್ದು ಆಗ. ಹಾಗೆ ನೋಡಿದರೆ ಇಂಡಿಯಾದ ಕಲೆ, ವಾಸ್ತುಶಿಲ್ಪ ತನ್ನ ಕಡೆಗಾಲ ಕಂಡಿದ್ದು ಕಲೋನಿಯಲ್ ಯುಗದಲ್ಲಿಯೇ. ದುರಹಂಕಾರಿ ಮುಸ್ಲಿಂ ರಾಜರುಗಳು ಇಲ್ಲಿ ವಿಗ್ರಹಗಳನ್ನು, ಗುಡಿಗಳನ್ನು ಒಡೆದು ಹಾಕಿದ್ದರೂ ಇಂಡಿಯಾದ ಕಲೆ, ವಾಸ್ತುಶಿಲ್ಪ, ಸಂಗೀತಕ್ಕೆ ಹೊಸ ಆಯಾಮ ದಕ್ಕಿದ್ದು ಮುಸ್ಲಿಂ ಆಳ್ವಿಕೆಯ ಮಿಡೀವಲ್ ಯುಗದಲ್ಲೇ. ಇಂಡೊ-ಇಸ್ಲಾಂ ಕಲೆಯ ಹೊಸ ಪ್ರಾಕಾರವೇ ಬೆಳೆದಿದ್ದು ಕೂಡ ಆ ಘಟ್ಟದಲ್ಲೇ.

ಆದರೆ ಈ ಆಧುನಿಕ ಯುಗದ ಪುನರುತ್ಥಾನವಾದಿಗಳ ಕಣ್ಣು ಯುದ್ಧಕಾಲದಲ್ಲಿ ಮುರಿದುಬಿದ್ದ ಗುಡಿಗಳ ಮೇಲೆ ಮಾತ್ರ ಇರುತ್ತದೆ. ಆದರೆ ಇಲ್ಲಿದ್ದ ದೇವರುಗಳಲ್ಲಿನ ನಂಬಿಕೆಯನ್ನೇ ಮಂಗಮಾಯ ಮಾಡಿದ ಆಧುನಿಕ ಪಶ್ಚಿಮದ ಕಡೆಗೆ ಈ ಮತೀಯ ಕಣ್ಣುಗಳು ಹೊರಳಿ ಕೂಡ ನೋಡುವುದಿಲ್ಲ. ಇದರ ಜೊತೆಗೇ ಈ ಅಬ್ಬರದ ಪುನರುತ್ಥಾನವಾದ ಕೂಡ ಎಲಿಯಟ್ ಮಾದರಿಯ, ಅಡಿಗರ ಕಾವ್ಯದ ಮಾದರಿಯ, ಕಂಬಾರರ ಮಾದರಿಯ ಪುನರುತ್ಥಾನವಾದ ಅಲ್ಲ. ಯಾಕೆಂದರೆ ಪುನರುತ್ಥಾನವಾಗಬೇಕಾದ ಇಂಡಿಯಾದ ಭೂತದಲ್ಲಿ ಈ ಹೊಸ ಪುನರುತ್ಥಾನವಾದಿಗಳಿಗೆ ಕಾಣುವುದು ಒಂದು

ೇದುಹೋದ ಕೋಹಿನೂರ್ ವಜ್ರ ಅಥವಾ ಒಂದು ಅಯೋಧ್ಯೆಯ ಮಂದಿರ. ಆದರೆ ಪ್ಪಿತಪ್ಪಿ ಕೂಡ ಈ ಕಣ್ಣುಗಳಲ್ಲಿ ದೇಸೀ ಇಂಡಿಯಾ ಸುಳಿಯುವುದಿಲ್ಲ. ಅಂದರೆ ತೀಯ ಮೂಲರೂಪಿವಾದದಲ್ಲೂ ಇದು ಭಾರತೀಯ ಮೂಲರೂಪವಲ್ಲ! ಆಶಿಶ್ ಂದಿ ಆರೆಸ್ಸೆಸ್ಸಿನ ದೊಗಳೆ ಚಡ್ಡಿ ಹಾಗೂ ಕರಿಯ ಟೋಪಿಯ ಯೂನಿಫಾರ್ಮ್ ವೇಷದ ರಿತು ಹೇಳುತ್ತಾನೆ: 'ಆ ದಿರಿಸು ಕೂಡ ಬ್ರಿಟಿಷ್ ಪೋಲೀಸರ ದೊಗಳೆ ಕಾಖಿಚಡ್ಡಿ ಯನ್ನು ಅನುಕರಿಸಿ ಹುಟ್ಟಿದ್ದು.' ದೊಣ್ಣೆ ಹಿಡಿದು ಧರ್ಮ ಸಂಸ್ಥಾಪನೆ ಮಾಡ ೇಕೆಂಬ ಹಠ ಇಂಡಿಯಾದ ಯಾವ ದೊಡ್ಡ ಸಂತನಿಗೂ, ಚಿಂತಕನಿಗೂ ಇರಲಿಲ್ಲ ಎನ್ನು ದನ್ನು ನೆನೆಸಿಕೊಂಡರೆ ಈ ಮೂಲರೂಪೀವಾದ ಅನ್ನುವುದು ಇಂಡಿಯಾದ ಕೂಸಲ್ಲ. ದಲಿಗೆ, ನಂದಿ ಗುರುತಿಸುವಂತೆ 'ಪಶ್ಚಿಮದ ಅನೈತಿಕ ಕೂಸು' ಎಂಬುದು ಗೊತ್ತಾಗು ದೆ. ಈ ಕೂಸಿನ ಅವಳಿ ಶಿಶುವೇ ಮುಸ್ಲಿಂ ಮೂಲರೂಪೀವಾದ. ಒಂದಾನೊಂದು ಲದ ತಮ್ಮ ಹಿಂದೂ ಸುವರ್ಣಯುಗ ಕುರಿತು ಹಿಂದೂಗಳು ತೇಲುಗಣ್ಣಾಗಿ ಅಬ್ಬರಿಸ ಾರಂಭಿಸಿದೊಡನೆ ಮುಸ್ಲಿಮರು ತಮ್ಮ ಅರಬ್ ಕಾಲದ ವೈಭವದ ಬಗೆಗೆ ಆಲಾಪಿಸ ೊಡಗುತ್ತಾರೆ. ಧರ್ಮ ಧರ್ಮಗಳು ಬೆರೆತು, ಧರ್ಮಗಳಿಂದ ಸ್ವೀಕರಿಸಿ ಅರಳಬೇಕಾದ ಮನಸ್ಸುಗಳು ತಂತಮ್ಮ ಧರ್ಮದ ಬಗೆಗೆ 'ಮಡಿ' ಭಾವನೆಯನ್ನು ತಳೆಯಲಾರಂಭಿಸು ವೆ. ಧರ್ಮಗಳ ಸಂಶ್ಲೇಷಣೆಯನ್ನು 'ಕಲಬೆರಕೆ' ಎಂದು ಕರೆದು ವ್ಯಗ್ರವಾಗುತ್ತವೆ. ಂತಮ್ಮ ಧರ್ಮಗಳನ್ನು ಉಳಿಸಿಕೊಳ್ಳಬೇಕೆಂಬ ಹುಮ್ಮಸ್ಸಿನಲ್ಲಿ ಮಸೀದಿ, ಗುಡಿಗಳ ಡುವೆ ಬೇಲಿಹಾಕುವ ಹಾಸ್ಯಾಸ್ಪದ ಕ್ರಿಯೆಯನ್ನಾರಂಭಿಸುತ್ತವೆ.

– 4 –

ಕಲೋನಿಯಲ್ ದಬ್ಬಾಳಿಕೆಗೆ ಉತ್ತರವಾಗಿ ಹುಟ್ಟಿದ 'ರಾಷ್ಟ್ರೀಯತೆ'ಯ ಕಲ್ಪನೆಯ ಜೊತೆಗೇ ಒಂದು ರಾಷ್ಟ್ರ, ಒಂದು ಸಂಸ್ಕೃತಿ, ಒಂದು ಭಾಷೆ ಎಂಬ ಕಲ್ಪನೆ 'ಏಕತೆ'ಯ ಹೆಸರಿನಲ್ಲಿ ಹುಟ್ಟಿಕೊಂಡಿತು. ಬಿಪಿನ್ ಚಂದ್ರ ಗುರುತಿಸುವಂತೆ ಈ ರಾಷ್ಟ್ರೀಯತೆಯ ಜೊತೆಗೇ 'ಹಿಂದೂ ರಾಷ್ಟ್ರೀಯತೆ' ಕೂಡ ಬೆಳೆಯಲಾರಂಭಿಸಿದ್ದು; ತಮ್ಮ ಹೊಸ ಐಡೆಂಟಿಟಿಗಾಗಿ ಹುಡುಕಾಟ ಆರಂಭಿಸಿದ್ದ ಆ ಘಟ್ಟದಲ್ಲಿ, 'ರಾಷ್ಟ್ರೀಯತೆ'ಯ ಕಲ್ಪನೆಗೆ ಸರಕೀಯರಾದ ಭಾರತೀಯರು ಸುಲಭವಾಗಿ ತಮ್ಮ ಹಳೆಯ ಐಡೆಂಟಿಟಿಗಳಿಗೆ ಮರಳಿ ಬಿಟ್ಟರು. ಐಡೆಂಟಿಟಿಯ ಹುಡುಕಾಟದಲ್ಲಿ ತಮ್ಮ ಧರ್ಮ, ಜಾತಿ, ಭಾಷೆ ಪ್ರಾಂತ್ಯ ನನ್ನುಳಿಸಿಕೊಳ್ಳುವುದೇ 'ರಾಷ್ಟ್ರೀಯತೆ'ಯಾಗಿ ಅವರಿಗೆ ಗೋಚರವಾಗಲಾರಂಭಿಸಿತು. ರಾಷ್ಟ್ರೀಯತಾವಾದದ ಜೊತೆಗೇ 'ಮತೀಯವಾದ' ಕೂಡ ಹುಟ್ಟಿದ್ದು ಹೀಗೆ. ಇದರ ಜೊತೆಗೇ 'ರಾಷ್ಟ್ರಪ್ರಭುತ್ವ'ದ ಕಲ್ಪನೆ ಕೂಡ ಹೇಗೆ ಮತೀಯವಾದವನ್ನು ಬೆಳೆಸಿತು ಎಂಬುದನ್ನು ರಜನಿ ಕೊಠಾರಿ ಚರ್ಚಿಸುತ್ತಾರೆ. ರಾಷ್ಟ್ರಪ್ರಭುತ್ವದ ಕೇಂದ್ರೀಕೃತ

ವ್ಯವಸ್ಥೆಯಲ್ಲಿ ವಿಭಿನ್ನ ಐಡೆಂಟಿಟಿಗಳಿಗೆ ಅಸ್ತಿತ್ವವೇ ಇರುವುದಿಲ್ಲ. ಆಳುವ ವರ್ಗದ ಸಂಸ್ಕೃತಿಯ ಹೇರಿಕೆ ಆರಂಭವಾಗುವುದು ಈ ಘಟ್ಟದಲ್ಲೇ. ಆಗ homogeneityಯ ಅಬ್ಬರದಲ್ಲಿ ವೈವಿಧ್ಯತೆಗಳು ನಾಶವಾಗಲಾರಂಭಿಸುತ್ತವೆ. ಈ ಹಿನ್ನೆಲೆಯಲ್ಲೇ ಹಿಂದೂ ರಾಷ್ಟ್ರೀಯವಾದದ ಹಲವು ಉಗ್ರಮುಖಗಳನ್ನು ನಾವು ಅರಿಯಬೇಕಾಗಿರುವುದು. ಮುಸ್ಲಿಮರ ಭಾಷೆಯೇ ಅಲ್ಲದ ಉರ್ದುವಿಗೆ ಬಂದಂಥ ವಿರೋಧ, ಪಂಜಾಬ್ ಸ್ವತಂತ್ರ ರಾಜ್ಯವಾಗುವ ಘಟ್ಟದಲ್ಲಿ ಹಿಂದೂಗಳು ನಡೆಸಿದ ಹಿಂಸೆ, ಶಿವಸೇನೆಯೆಂಬ ಹಿಂದೂ ಉಗ್ರವಾದಿ ಪಕ್ಷ ಮುಂಬಯಿ ಕನ್ನಡಿಗರ ಮೇಲೆ ನಡೆಸುವ ದಬ್ಬಾಳಿಕೆ ಇವೆಲ್ಲಾ ಈ ಹಿಂದೂ ರಾಷ್ಟ್ರೀಯತಾವಾದ ತಂದುಕೊಟ್ಟ ಬಹುಸಂಖ್ಯಾತ ಸಂರಚನಕಾರದ ಫಲ. ಫ್ರಾಂಟ್ಜ್ ಫ್ಯಾನನ್, ಮನೋನಿ ಮುಂತಾದ ವಸಾಹತುಶಾಹಿ ಚಿಂತಕರು ತಮ್ಮ ಥೀಸಿಸ್ಸುಗಳಲ್ಲಿ ತೋರಿಸಿರುವಂತೆ ಇಂಡಿಯಾದಲ್ಲಿ ಕೂಡ ವಸಾಹತುಕಾರ (the colonizer) ವಸಾಹತೀಕರಣಗೊಂಡವ (the colonized) ನಿಗೆ ಮಾಡಿದ್ದನ್ನೇ ಬಹುಸಂಖ್ಯಾತರು ಅಲ್ಪಸಂಖ್ಯಾತರಿಗೆ ಮಾಡಲಾರಂಭಿಸುತ್ತಾರೆ. ಸರಳ ಸೈಕಾಲಜಿಯ ಸೂತ್ರವನ್ನು ಹಿಡಿದು ಹೇಳುವುದಾದರೆ ಈ ಬಹುಸಂಖ್ಯಾತರ ಯಜಮಾನಿಕೆಯ ದರ್ಪ ಪಶ್ಚಿಮದ ಯಜಮಾನಿಕೆಯ ಫಲವಾದ ಕೀಳರಿಮೆಯಿಂದ ಹುಟ್ಟಿರಬಹುದಾದದ್ದು. ಆದರೆ ಈ ರೋಗಗ್ರಸ್ತ ಮನಸ್ಸಿನ ಹಿಂದೂರಾಷ್ಟ್ರೀಯತಾವಾದ ಯಾಕೆ ಭಯಾನಕವಾದದ್ದೆಂದರೆ ಈ ಬಗೆಯ ಏಕರಾಷ್ಟ್ರದ ಕಲ್ಪನೆಯಲ್ಲಿ ಮುಸ್ಲಿಮರೂ ಸೇರಿದಂತೆ ಎಲ್ಲ ಕೆಳಜಾತಿಗಳು, ಮೈನಾರಿಟಿಪಂಗಡಗಳು ನಾಶವಾಗುತ್ತವೆ. ಈ 'ಹೊಸ ಪುರೋಹಿತ'ರನ್ನು ನೆಚ್ಚಿಕೊಂಡರೆ 'ಪೂರ್ವ ಮೀಮಾಂಸೆ'ಗಳನ್ನು ಬಗೆಯುವುದಿರಲಿ, ಅವು ಗೋಚರ ಕೂಡ ಆಗಲಾರವು.

– 5 –

ಈ ವಸಾಹತೋತ್ತರ ಜಗತ್ತಿನ ಗೊಂದಲಿಗ ಹಿಂದೂ ಮನಸ್ಸು ಎಷ್ಟು ಅಪಾಯಕಾರಿಯಾಗಿದೆಯೆಂದರೆ ಹೊಸ ಐತಿಹಾಸಿಕ ಪ್ರಜ್ಞೆಯಿಂದ ಅದು ಮಿಥಿಕಲ್ ಜಗತ್ತಿನ ರಾಮನನ್ನು ಚಾರಿತ್ರಿಕ ಸ್ಥಳದಲ್ಲಿಡಲು ಹೊರಡುತ್ತಾ ಚರಿತ್ರೆಯ ತಪ್ಪನ್ನು ಸರಿಪಡಿಸುತ್ತೇನೆಂದು ಬೊಬ್ಬೆ ಹೊಡೆಯುತ್ತದೆ. ಆದರೆ ಚರಿತ್ರೆಯ ತಪ್ಪನ್ನು ಸರಿಪಡಿಸಲು ಹಿಂದುಳಿದವರಿಗೆ ಮೀಸಲಾತಿ ಕೊಟ್ಟರೆ ಚರಿತ್ರೆಯ ನಡಿಗೆಯನ್ನೇ ಅರಿಯಲು ನಿರಾಕರಿಸುತ್ತದೆ. ಈ ಮನಸ್ಸು mythಅನ್ನು historify ಮಾಡುತ್ತಿದೆ ; History ಯನ್ನು mytify ಮಾಡುತ್ತಿದೆ. ಅದರ ಜೊತೆಗೇ ಆಶಿಶ್‌ನಂದಿ ಹೇಳುವಂತೆ ಪಶ್ಚಿಮದಿಂದ monolithic ಧರ್ಮದ ಕಲ್ಪನೆಯನ್ನು ಆಮದು ಮಾಡಿಕೊಂಡು ಒಬ್ಬ ರಾಮನನ್ನು ಸೃಷ್ಟಿಸುತ್ತದೆ. 'ದೇವನೊಬ್ಬ ನಾಮ ಹಲವು' ಎಂಬ ಭಾರತೀಯ ದೃಷ್ಟಿಕೋನಕ್ಕೂ ಈ ಹೊತ್ತಿನ ಏಕರಾಮನ ಕಲ್ಪನೆಗೂ ನಡುವೆ ಇರುವ ವ್ಯತ್ಯಾಸ ಗಮನಿಸಿದರೆ ಈವತ್ತು

ೇಳಲಾಗುತ್ತಿರುವ ಹಿಂದೂಯಿಸಂ ಕೂಡ ಇಂಡಿಯಾದ ಮೂಲರೂಪೀ ಹಿಂದೂಯಿಸಂ ಅಲ್ಲ ಎಂಬುದು ಅರಿವಾಗುತ್ತದೆ. ಈ ಹಿನ್ನೆಲೆಯಲ್ಲಿ ಹಿಂದೂಧರ್ಮವನ್ನು ಉಳಿಸಿಕೊಳ್ಳಬಹುದೆಂಬ ಭ್ರಮೆಯಲ್ಲಿ ಉಗ್ರವಾದಿಗಳಂತೆ ಅಧ್ವಾನಿಯ ರಥದ ಹಿಂದೆ ಹೊರಟಿರುವ **ಗೌಡರು**, ಜಾಟ್‌ಗಳು, **ಕುರುಬರು**, ರೆಡ್ಡಿಗಳು, ಕೆಲವೆಡೆ ದಲಿತರು ಕೂಡ, **ಒಂದು** ಭೀಕರ ಅಪಾಯವನ್ನು ಅರಿಯಬೇಕಾಗಿದೆ: ಈ ಬ್ರಾಹ್ಮಣರು ಹಾಗೂ ನಿಯೋಬ್ರಾಹ್ಮಣರು ಸೇರಿ ಒಬ್ಬ ರಾಮನನ್ನು ಅಯೋಧ್ಯೆಯಲ್ಲಿ ಪ್ರತಿಷ್ಠಾಪಿಸಿದ **ತಕ್ಷಣ** ಇಂಡಿಯಾದ ಸಹಸ್ರಾರು ಜಾತಿಗಳ ಲೋಕದರ್ಶನದಲ್ಲಿದ್ದ ಲಕ್ಷಾಂತರ ರಾಮರುಗಳು **ಇಲ್ಲ**ವಾಗುತ್ತಾರೆ. ವಾಲ್ಮೀಕಿಯಿಂದ ಹೆಳವನಕಟ್ಟೆ ಗಿರಿಯಮ್ಮನ ಅನೇಕ ದೇಸೀ **ಪ್ರತಿಭೆ**ಗಳ ಮೂಸೆಯಲ್ಲಿ ಹುಟ್ಟಿದ ಹಲವು ಬಗೆಯ ಸಂಕೇತಗಳಾದ ರಾಮರುಗಳು **ಏಕಾ**ಏಕಿ ಮಾಯವಾಗುತ್ತಾರೆ. ರಾಮರಾಜ್ಯದ ರೂಪಕವೇ ನಗೆಪಾಟಲಾಗಿ, **ಚಿತ್ತ ಹುತ್ತ**ಗಟ್ಟಿ ಕೆತ್ತಿದ್ದ ಆ ಪುರುಷೋತ್ತಮನ ರೂಪುರೇಖೆ ಕಾಣದಾಗಿ ಇಂಗ್ಲಿಷ್ **ವಾಸ್ತುಶಿ**ಲ್ಪದ ಕೊಡುಗೆಯಾದ ಹೊಸ 'ಟೆಂಪಲ್ಲಿ'ನ 'ಕಟ್ಟಡ' ಅಸ್ತಿತ್ವಕ್ಕೆ ಬರುತ್ತದೆ. **ಆದ್ದರಿಂ**ದಲೇ ಈ ಮತೀಯವಾದ ಭಾರತದ ಎಲ್ಲ ಕೆಳಜಾತಿಗಳಿಗೂ ಹಾಗೂ ಕ್ರಿಶ್ಚಿಯನ್, **ಸಿಖ್ಖರಿ**ಗೂ ಆತಂಕಕಾರಿಯಾಗಿದೆ. 'ನಾವೆಲ್ಲ ಹಿಂದೂ ನಾವೆಲ್ಲ ಒಂದು' ಎಂಬ ಅಬ್ಬರದ ಸ್ಲೋಗನ್ನೇ ಮಾನವ ವಿರೋಧಿ. ಯಾಕೆಂದರೆ ನಾವೆಲ್ಲ ಮೂಲತಃ ಬೇರೆ ಬೇರೆ. ಆ ವೈವಿಧ್ಯತೆಯನ್ನುಳಿಸಿಕೊಂಡೇ ನಾವು ಒಟ್ಟಾಗಿರಬಲ್ಲೆವು. 'ಸರ್ವೇಜನೋ ಸುಖಿನೋ ಭವಂತು' ಎಂಬ **ಉದಾತ್ತ** ವೇದಿಕ್ ಕಲ್ಪನೆಯಲ್ಲಿ ಕೇವಲ ಮೇಲು ಜಾತಿಯ ಹಿಂದೂಗಳು ಮಾತ್ರ ಇರಲಿಲ್ಲ.

– 6 –

ಹಾಗಾದರೆ ಈ ಹೊತ್ತಿನ 'ಮತೀಯವಾದ'ಕ್ಕೆ ಪಶ್ಚಿಮ ಕೊಟ್ಟ 'ಸೆಕ್ಯುಲರಿಸಂ' ಉತ್ತರವೆ? **ಇಂಡಿ**ಯಾದಲ್ಲಿ ಈವತ್ತು ರಾಜಕೀಯವನ್ನೂ ಧರ್ಮವನ್ನೂ ಬೇರ್ಪಡಿಸಬಹುದೆ? **ಗುರುದ್ವಾ**ರ, ಮಸೀದಿ, ಗುಡಿಗಳನ್ನು ಮುಚ್ಚಿ ಹೊಸ ರಾಜಕೀಯವನ್ನು ಆರಂಭಿಸಬಹುದೆ?

— ಇವು ನನ್ನೆದುರಿಗಿರುವ ಪ್ರಶ್ನೆಗಳು.

ಪಶ್ಚಿಮ ಕೊಟ್ಟ ಸೆಕ್ಯುಲರಿಸಂ ಇಂಡಿಯಾದಲ್ಲಿ ಸೋತದ್ದಕ್ಕೆ ಕಾರಣಗಳನ್ನು ಹುಡುಕಿದರೆ ಈ ಪ್ರಶ್ನೆಗಳಿಗೆ ಉತ್ತರಗಳು ಹೊಳೆಯಬಹುದು. ಆಶಿಸ್‌ನಂದಿ ಸೂಚಿಸುವಂತೆ ಪಶ್ಚಿಮದ ಸೆಕ್ಯುಲರಿಸಂನಲ್ಲಿ ಧರ್ಮ ಯಾವಾಗಲೂ ಖಾಸಗಿಯಾಗಿರುತ್ತದೆ. ಸಾರ್ವಜನಿಕ ಬದುಕಿನಲ್ಲಿ ಅದು ಪ್ರವೇಶಿಸುವಂತಿಲ್ಲ. 'ಮೊದಲು ಭಾರತೀಯ ನಂತರ ಸಿಖ್ ಅಥವಾ ಹಿಂದೂ' ಎಂದು ಇಬ್ಭಾಗಿಸುವ ಪಶ್ಚಿಮದ ಕಲ್ಪನೆ ಇಲ್ಲಿ ಸೋಲಲು

ಕಾರಣ ಪ್ರಾಯಶಃ ಸಾಂಪ್ರದಾಯಿಕ ಇಂಡಿಯಾದಲ್ಲಿ ರಾಜಕೀಯ ಹಾಗೂ ಧರ್ಮ ಎರಡೂ ಬೇರೆಯಾಗಿರಲಿಲ್ಲ ಎಂಬುದೇ. 'ರಾಜಧರ್ಮ' ಎಂಬ ಪದವನ್ನೇ ಗಮನಿಸಿ. ರಾಜ್ಯವನ್ನಾಳುವುದು ರಾಜಕೀಯ ಕ್ರಿಯೆ ಮಾತ್ರ ಆಗಿರಲಿಲ್ಲ; ಅದು ಧಾರ್ಮಿಕ ಕ್ರಿಯೆ ಕೂಡ ಆಗಿತ್ತು. ಬಸವಣ್ಣನಿಗೆ ಹೊಸ ಸಮಾಜ ಕಟ್ಟುವ ರಾಜಕೀಯ ಕ್ರಿಯೆ ಹಾಗೂ ಧಾರ್ಮಿಕ ಕ್ರಿಯೆ ಎರಡೂ ಬೇರೆ ಬೇರೆ ಅನಿಸಿರಲಿಲ್ಲ. ಗಾಂಧಿ ಕೂಡ ಧರ್ಮ ಮತ್ತು ರಾಜಕೀಯವನ್ನು ಬೇರೆ ಇಟ್ಟು ನೋಡಿದವರಲ್ಲ. ಆದ್ದರಿಂದ, ಪ್ರಾಯಶಃ ಈವತ್ತಿನ ಇಂಡಿಯಾದ ಸೆಕ್ಯುಲರ್ ಕ್ಷೋಭೆ ಜನರ ದೃಷ್ಟಿಯಿಂದ, ಧರ್ಮವನ್ನುಳಿಸಿಕೊಂಡೂ ಜಾತ್ಯಾತೀತರಾಗುವ ಬಗೆಯನ್ನು ಹುಡುಕುವುದೇ ಈವತ್ತಿನ ನಿಜವಾದ ಸವಾಲು ಎನಿಸುತ್ತದೆ. ಮಿಡೀವಲ್ ಇಂಡಿಯಾದಲ್ಲಿ ಜುದಾಯಿಸಂ,ಇಸ್ಲಾಂ, ಹಿಂದೂಯಿಸಂ ಎಲ್ಲ ಒಟ್ಟಿಗೇ ಬದುಕಬಹುದಾದರೆ ಆಧುನಿಕ ಭಾರತದಲ್ಲಿ ಅದು ಆಗದೇ ಹೋಗುವುದಕ್ಕೆ ಕಾರಣವೇನಿರಬಹುದು ? ಆದ್ದರಿಂದಲೇ ಆಶಿಶ್‌ನಂದಿ ಸೂಚಿಸುವಂತೆ ಈವತ್ತಿನ ಇಂಡಿಯಾ ತನ್ನ non-modern ಇಂಡಿಯಾದಿಂದಲೇ ಸಹಬಾಳ್ವೆಯ ಪಾಠ ಕಲಿಯಬೇಕಾಗಿದೆ. ಬಸವಣ್ಣ, ಕಬೀರ, ಷರೀಫ, ಗಾಂಧಿ ಇವರೆಲ್ಲಾ ಆಳವಾದ ಧಾರ್ಮಿಕ ನಿಷ್ಠೆಯನ್ನಿಟ್ಟುಕೊಂಡೇ ಜಾತ್ಯಾತೀತರಾಗಿದ್ದವರು. ರೇಮಾಂಡೋ ಪಣಿಕ್ಕರ್ ಹೇಳುತ್ತಾರೆ: 'ನಿಜವಾದ ಮಿಸ್ಟಿಕ್‌ಗೇ ನಿಜವಾದ ಸೆಕ್ಯುಲರ್ ಮನುಷ್ಯನೊಬ್ಬ ಚೆನ್ನಾಗಿ ಅರ್ಥವಾಗುವುದು.' ಒಬ್ಬ ರಸೆಲ್. ಒಬ್ಬ ಷರೀಫ ಅಥವಾ ಒಬ್ಬ ತುಕಾರಾಮನ ನಡುವೆ ಬಾಬ್ರಿ ಮಸೀದಿ-ರಾಮಜನ್ಮಭೂಮಿಯ ವಿವಾದವೇ ಇರುವುದಿಲ್ಲ. ಅದು ಹುಟ್ಟುವುದೇನಿದ್ದರೂ ಸುಳ್ಳುಧಾರ್ಮಿಕರು ಹಾಗೂ ಸುಳ್ಳುಜಾತ್ಯಾತೀತರುಗಳಲ್ಲಿ ಮಾತ್ರ.

ಇಷ್ಟೆಲ್ಲಾ ವಸಾಹತುಶಾಹಿಯ ಪಳಿಯುಳಿಕೆಗಳನ್ನು ಕುರಿತು ಏಕಮುಖೀ ಆಕ್ಷೇಪಣೆಯ ಧಾಟಿ ಈ ಪ್ರಬಂಧದುದ್ದಕ್ಕೂ ಹರಿದಿದ್ದರೂ ಮತ್ತೆ ಮತ್ತೆ ಕೋಮುಸಾಮರಸ್ಯಕ್ಕಾಗಿ ವಸಾಹತುಶಾಹಿ ಕೊಟ್ಟ ಸಂಸ್ಥೆಗಳನ್ನೇ ಮೊರೆಹೋಗಬೇಕಾಗಿರುವುದು ಎಂಥ ವಿರೋಧಾಭಾಸ! ಈ ಸಮಸ್ಯೆಯ ಪರಿಹಾರಕ್ಕಾಗಿ ಮತ್ತೆ ಮತ್ತೆ ನನ್ನ ಕಣ್ಣೆದುರು ಸುಳಿಯುವುದು ಪೋಲೀಸು ಹಾಗೂ ಕೋರ್ಟು ಎಂಬ ವಸಾಹತುಶಾಹಿ ಸಂಸ್ಥೆಗಳೇ. ಈ ವ್ಯಾಜ್ಯವನ್ನು ಸುಪ್ರೀಂ ಕೋರ್ಟಾದರೂ ಶಾಂತರೀತಿಯಿಂದ ಬಗೆಹರಿಸಲಿ, ಎಂದು ನಾನು ಒಮ್ಮೆ ಹಾರೈಸಿದಾಗ ಗೆಳೆಯರೊಬ್ಬರು : "....ಅಂದರೆ ಈ ಹಿಂದೂಗಳೂ ಮುಸ್ಲಿಮರೂ ಒಟ್ಟಿಗೇ ಕೂತು ಈ ಸಮಸ್ಯೆ ಬಗೆಹರಿಸಿಕೊಳ್ಳುವ ಶಕ್ತಿ ಈ ಸಂಸ್ಕೃತಿಯಲ್ಲಿ ಕಳೆದುಹೋಗಿಯೇ ಬಿಟ್ಟಿದೆಯೆ ? ಇದೆಂಥ ದುರಂತ...." ಎಂದಿದ್ದರು. ಈ ಉದ್ಗಾರದ ಹಿನ್ನೆಲೆಯಲ್ಲೇ ನನಗೂ ಅನಿಸಿತು : ಪಶ್ಚಿಮ ಕೊಟ್ಟ ಡೆಮಾಕ್ರಸಿಯ ಚೌಕಟ್ಟಿನಲ್ಲೇ ಬಿ.ಜೆ.ಪಿ.ಯಂಥ, ಜಮಾತ್-ಎ-ಇಸ್ಲಾಮಿನಂಥ ಕೋಮುವಾದಿ ಪಕ್ಷಗಳು ಮಣ್ಣಾಗಿ

ಶೂದ್ರ

ೀಗಲಿ ಎಂದು ವಸಾಹತೀಕರಣದ ವಿರೋಧಿಗಳು ಕೂಡ ಹಾರೈಸಬೇಕಾಗಿರುವುದು
ುರುವ ವಿರೋಧಾಭಾಸದ ಘಟ್ಟದ ಫಲಶ್ರುತಿಯೇ ಅಲ್ಲವೆ ?

(1991ರ ಜನವರಿ 5–6ರಂದು ಜಾಗೃತ ಸಾಹಿತ್ಯ ವೇದಿಕೆ ನಡೆಸಿದ
ಮರಸ್ಯ : ಒಂದು ಸಾಂಸ್ಕೃತಿಕ ಸಂವಾದ' ವಿಚಾರ ಸಂಕಿರಣದಲ್ಲಿ ಮಂಡಿಸಲಾದ
ಬಂಧ.)

ಗ್ರಂಥಋಣ :

ಆಶಿಶ್‌ನಂದಿ: ದಿ ಇಂಟಿಮೇಟ್ ಎನಿಮಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1983, ನ್ಯೂಡೆಲ್ಲಿ.

ಆಶಿಶ್‌ನಂದಿ : 'ಪಾಲಿಟಿಕ್ಸ್ ಆಫ್ ಸೆಕ್ಯುಲರಿಸಂ', ಆಲ್ಟರ್‌ನೇಟಿವ್ಸ್, XXII, 1988.

ಸಯ್ಯದ್ ಮಹ್ಮದ್ : ಹಿಂದೂ–ಮುಸ್ಲಿಂ : ಕಲ್ಚರಲ್ ಅಕಾರ್ಡ್. 1948, ನ್ಯೂಡೆಲ್ಲಿ.

ಬಿಪಿನ್‌ಚಂದ್ರ : ಲೇಖನ : 'ಹಿಸ್ಟೋರಿಯನ್ಸ್ ಆಫ್ ಮಾಡರ್ನ್ ಇಂಡಿಯಾ ಅಂಡ್ ಕಮ್ಯುನಲಿಸಂ'– ಕಮ್ಯುನಲಿಸಂ ಅಂಡ್ ರೈಟಿಂಗ್ ಆಫ್ ಇಂಡಿಯನ್ ಹಿಸ್ಟರಿ, ಪೀಪಲ್ ಪಬ್ಲಿಷಿಂಗ್ ಹೌಸ್, 1987, ನ್ಯೂಡೆಲ್ಲಿ.

ರೊಮಿಲಾ ಥಾಪರ್: 'ಕಮ್ಯುನಲಿಸಂ ಅಂಡ್ ದಿ ರೈಟಿಂಗ್ ಆಫ್ ಏನ್ಷಿಯಂಟ್ ಹಿಸ್ಟರಿ' – ಕಮ್ಯುನಲಿಸಂ ಅಂಡ್ ರೈಟಿಂಗ್ ಆಫ್ ಇಂಡಿಯನ್ ಹಿಸ್ಟರಿ, 1987, ನ್ಯೂಡೆಲ್ಲಿ.

—o—

ಂದು ಪ್ರತಿಕ್ರಿಯೆ :

ಸಾಮರಸ್ಯ–91 ವಿಚಾರ ಸಂಕಿರಣದಲ್ಲಿ ನಟರಾಜ್ ಹುಳಿಯಾರ್ ಮಂಡಿಸಿದ
ಬಂಧ '**ಧರ್ಮ** ಮತ್ತು ಸಾಮರಸ್ಯ : ವಸಾಹತುಶಾಹಿ ಅನುಭವ' ನನ್ನಲ್ಲಿ ಎರಡು
ುಖ್ಯ **ಪ್ರಶ್ನೆಗಳನ್ನು** ಹುಟ್ಟುಹಾಕಿದೆ. ಮುಂದೊಮ್ಮೆ ಇವನ್ನು ದೀರ್ಘವಾಗಿ
ರ್ಚಿಸಲಿರುವ **ನಾನು** ಈ ನಿಟ್ಟಿನಲ್ಲಿ ಚಿಂತಿಸುವವರ ಪ್ರತಿಕ್ರಿಯೆಗಾಗಿ ಈ ಪ್ರಶ್ನೆಗಳನ್ನು
ಾತ್ರ **ಮುಂದಿಡುತ್ತೇನೆ** :

ಒಂದು : ವಸಾಹತುಶಾಹಿ ಘಟ್ಟದಲ್ಲಿ ದೇಸೀ ಪರಂಪರೆಯೊಂದರಲ್ಲಿ ಹುಟ್ಟಿದ ಘರ್ಷಣೆಗಳನ್ನು ಇಂಪೀರಿಯಲಿಸಮ್ಮಿನ ಸ್ವರೂಪವನ್ನು ಚರ್ಚಿಸದೆ ಅರ್ಥೈಸಿಕೊಳ್ಳುವುದು ಸಾಧ್ಯವೆ? ಯಾಕೆಂದರೆ ಕಲೋನಿಯಲಿಸಂ, ಇಂಪೀರಿಯಲಿಸಮ್ಮಿನ ಒಂದು ಮುಖ ಮಾತ್ರ. ಹೀಗಾಗಿಯೇ ಈ ಘರ್ಷಣೆಗಳನ್ನು ವಸಾಹತು ಅನುಭವವನ್ನಾಗಿ ಮಾತ್ರ ನೋಡಿದರೆ ಇಂಪೀರಿಯಲಿಸಮ್ಮಿನ ಬೇರುಗಳ ಆಳವೇ ಅರಿವಾಗುವುದಿಲ್ಲ. ಇಂಪೀರಿಯಲಿಸಮ್ಮಿನ ಪ್ರಭಾವ ಎಂಥದ್ದೆಂದರೆ ಅದು ಕೇವಲ ವಸಾಹತು ಹಾಗೂ ವಸಾಹತೀಕರಣಗೊಂಡವರ ಅಸ್ತಿತ್ವಕ್ಕೆ ಮಾತ್ರ ಸೀಮಿತವಾದುದಲ್ಲ. ಆದ್ದರಿಂದಲೇ ನನಗನ್ನಿಸುವುದು : ಈವತ್ತಿನ ಸಮಸ್ಯೆಗಳನ್ನು ವಸಾಹತುಶಾಹಿ ಅನುಭವವನ್ನಾಗಿ ಮಾತ್ರ ನೋಡಲಾಗುವುದಿಲ್ಲ. ಇಂಡಿಯಾವನ್ನು ಇಂಗ್ಲೆಂಡು ಒಂದು ವಸಾಹತುವನ್ನಾಗಿ ಮಾಡಿಕೊಳ್ಳದಿದ್ದರೂ ಈ ಸಮಸ್ಯೆಗಳು ಹುಟ್ಟಿಯೇ ಇರುತ್ತಿದ್ದವು.

ಎರಡನೆಯದೆಂದರೆ 'ರಾಷ್ಟ್ರಪ್ರಭುತ್ವ'ವನ್ನು (ರಾಜಕೀಯ ದೃಷ್ಟಿಯಿಂದ) ಮತ್ತು ಕೋರ್ಟನ್ನು (ಶಾಂತಿಯ ಪ್ರಶ್ನೆ ಬಂದಾಗ) ಈ ಸಮಸ್ಯೆಯ ಪರಿಹಾರಕ್ಕಾಗಿ ಅವಲಂಬಿಸುವುದು ಸರಿಯೆ? ಹಾಗಾದರೆ ಈ ಸಂಸ್ಕೃತಿ ತನ್ನ ದಿವ್ಯಶಕ್ತಿಯನ್ನು ಸಂಪೂರ್ಣವಾಗಿ ಕಳೆದುಕೊಂಡು 'ನಾಗರಿಕ' (ಪಶ್ಚಿಮದ ಅರ್ಥದಲ್ಲಿ) ವಿಧಾನಗಳನ್ನು ಮಾತ್ರ ಅವಲಂಬಿಸಬೇಕಾದ ಸ್ಥಿತಿಯನ್ನು ಮುಟ್ಟಿದೆಯೆ? ಈ ಸನ್ನಿವೇಶದ ಕ್ರೂರ ವ್ಯಂಗ್ಯ ಎಂಥದೆಂದರೆ, 'ರಾಷ್ಟ್ರಪ್ರಭುತ್ವ' ಮತ್ತು 'ನ್ಯಾಯಾಂಗ'ಗಳು ಮಾತ್ರ ಈ ಸಮಸ್ಯೆಯನ್ನು ಪರಿಹರಿಸಬಲ್ಲವು ಎಂದು ನಂಬುವುದೆಂದರೆ, 'ಪ್ರಿಮಿಟಿವ್ ನೇಟಿವ್' ಸಂಸ್ಕೃತಿಯು ಅಜ್ಞಾನಿ ಸಂಸ್ಕೃತಿ ಮತ್ತು ಅದನ್ನು ಪಶ್ಚಿಮದ 'ನಾಗರಿಕ' ವಿಧಾನಗಳಿಂದಲೇ ಪಾರುಮಾಡಬೇಕೆಂದು ವಸಾಹತುಕಾರ ಹೇಳಿದ್ದನ್ನೇ ನಾವು ಕೂಡ ಒಪ್ಪಿಕೊಂಡಂತೆ. ಹಾಗಾದರೆ ಈ ಸಂಸ್ಕೃತಿಯೊಳಗಿದ್ದ ಜ್ಞಾನ ಎನ್ನುವುದು ಎಲ್ಲಿ ಹೋಯಿತು? ದೇಸೀ ಪರಂಪರೆಗಳಲ್ಲಿನ ಮಾನವೀಯತೆಯನ್ನು ನಾವು ಅವಲಂಬಿಸಲಾರೆವೆ?

ಇಂಪೀರಿಯಲಿಸಂ ಎನ್ನುವುದು ಮತ್ತೂ ತನ್ನ ಕೈಚಾಚದಂತೆ, ಮುಂದುವರಿಯದಂತೆ ತಡೆಯಬೇಕೆನಿಸುವವರೆಲ್ಲರೂ ಇದನ್ನು ಅರಿಯಬೇಕಾಗಿದೆ.

— ಎನ್. ಮನು ಚಕ್ರವರ್ತಿ

ಗಾಂಧಿ ಮತ್ತು ಚರಿತ್ರೆಯ ವ್ಯಂಗ್ಯ

—ಆಧುನಿಕ ಪ್ರಭುತ್ವದ ಸಂದರ್ಭದಲ್ಲಿ 'ಹಿಂಸೆ' ಮತ್ತು 'ಅಹಿಂಸೆ'

—ಎನ್. ಮನು ಚಕ್ರವರ್ತಿ

ಜಗತ್ತಿನ ಎಲ್ಲ ದಿಕ್ಕುಗಳಲ್ಲೂ ಈ ಹೊತ್ತು ಹಬ್ಬುತ್ತಿರುವ, ಭಿನ್ನ ಭಿನ್ನ ರೂಪಗಳನ್ನು ತಳೆಯುತ್ತಿರುವ 'ಹಿಂಸೆ'ಯನ್ನು ಅರ್ಥಮಾಡಿಕೊಳ್ಳಲೆತ್ನಿಸುವ ನಿಟ್ಟಿನಲ್ಲಿ ಇದೊಂದು ಅಪೂರ್ಣ ಪ್ರಯತ್ನ. ಮುಖ್ಯವಾದ ಘಟನೆಗಳನ್ನಿಲ್ಲಿ ಉದಾಹರಿಸದಿದ್ದರೂ ಈ ವಿಶ್ಲೇಷಣೆಗೆ ಕಳೆದೆರಡು ದಶಕಗಳ ಇಂಡಿಯಾದ ರಾಜಕೀಯ ಬೆಳವಣಿಗೆಗಳೇ ಆಧಾರ. ಆಧುನಿಕ ಪ್ರಭುತ್ವದ ಹಿನ್ನೆಲೆಯಲ್ಲಿ 'ಹಿಂಸೆ' ತತ್ವವಾಗಿ ಮೂಡುತ್ತಿರುವ ಸಂದರ್ಭದಲ್ಲಿ ಅದರ ಹುಟ್ಟನ್ನು, ಸಮುದಾಯದ ಒಂದು ಭಾಗವಾಗಿ ಹೋಗಿರುವ ಅದರ ಅಸ್ತಿತ್ವವನ್ನು ಈ ಲೇಖಕ ಅರ್ಥಮಾಡಿಕೊಳ್ಳಲೆತ್ನಿಸುತ್ತಿದ್ದಾನೆ. 'ಹಿಂಸೆ'ಯೇ ನಿಜವಾದ ಹಾಗೂ ಅಂತಿಮವಾದ ಮಾರ್ಗ ಎಂಬುದು ಇಲ್ಲಿನ ನಿಲುವಲ್ಲ. ಆದರೆ 'ಹಿಂಸೆ'ಯನ್ನು ಕಂಡಾಕ್ಷಣ ಅದಕ್ಕೆ ಬರ್ಬರತೆಯ ಹಣೆಪಟ್ಟಿ ಹಚ್ಚಿ ಮುಖ ತಿರುಗಿಸಿ ಓಡಿಹೋಗುವ ಸವಲತ್ತು ಈ ಹೊತ್ತು ಅಹಿಂಸಾವಾದಿಗಳಿಗೆ ಇಲ್ಲ ಎಂಬುದು ಮಾತ್ರ ನನ್ನ ನಿಲುವು. ಪ್ರಭುತ್ವದ ವಾಸ್ತವದ ಎಲ್ಲ ಮುಖಗಳನ್ನು ಅರ್ಥಮಾಡಿಕೊಳ್ಳದೆ, ಅಂಥ ಪ್ರಭುತ್ವದ ಮುಂದುವರಿಕೆಯನ್ನು ತಡೆಯದೆ ಕೇವಲ ಅಹಿಂಸೆಯ ಮಾತಾಡುವುದು ಬರೀ ಅವಾಸ್ತವ ವಾದವಾಗಿಯೇ ಉಳಿಯುತ್ತದೆ. ಅಹಿಂಸೆಯನ್ನು ಒಂದು ದೊಡ್ಡ ಆಧ್ಯಾತ್ಮಿಕ ಸತ್ಯವನ್ನಾಗಿ ಅರಿಯುವ ಗಂಭೀರ ಪ್ರಯತ್ನಮಾಡುವವರೆಲ್ಲ ಪ್ರಭುತ್ವದ ಈ ಮುಖವನ್ನು ಮೊದಲು ಅರಿಯುವುದು ಅನಿವಾರ್ಯವಾಗುತ್ತದೆ. ವಿಚಾರಹೀನ "ಭಯೋತ್ಪಾದಕತೆ" ಹಾಗೂ ತಾತ್ವಿಕ ನೆಲೆಗಟ್ಟನ್ನುಳ್ಳ 'ಹಿಂಸೆ'ಯ ನಡುವೆ ಗೆರೆ ಎಳೆಯದೇ ಅಹಿಂಸೆಯ ಬಗೆಗೆ ಮಾತಾಡುವುದಾಗಲಿ, ಅಹಿಂಸೆಯನ್ನು ನಂಬುವುದಾಗಲೀ ಕೇವಲ ಭಾವುಕ ನಿಲುವಾಗಿಬಿಡುತ್ತದೆ. ಇಂಥ ನಿಲುವು ನಮ್ಮ ಕಾಲದ ರಾಜಕಾರಣದ ಬಗೆಗಿನ ಅಜ್ಞಾನದಿಂದ ಹುಟ್ಟಿದ್ದಾಗಿರುತ್ತದೆ. ಆದ್ದರಿಂದಲೇ ಈ ಹೊತ್ತಿನ ರಾಜಕಾರಣದ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದರ ಮೂಲಕ 'ಪ್ರಭುತ್ವದ ಭಯೋತ್ಪಾದಕತೆ'ಯನ್ನು ಅರಿಯಬೇಕಾದ ಅನಿವಾರ್ಯ ಸ್ಥಿತಿಯಲ್ಲಿ ನಾವಿರುವುದು. ನಮ್ಮ ಕಾಲದ ಹಿಂಸೆಯ ಸ್ವರೂಪವನ್ನು ಅರಿಯುವ ಕಳಕಳಿ ತೋರುವವರು ಹಾಗೂ ಅಹಿಂಸೆಯಲ್ಲಿ ಆಳವಾದ ನಂಬಿಕೆಯಿಟ್ಟಿರುವವರೆಲ್ಲ ಮೊದಲು ಪ್ರಭುತ್ವದ ಭಯೋತ್ಪಾದಕತೆಯ ಬಗೆಗೆ ಎಚ್ಚರಗೊಳ್ಳಬೇಕಾಗಿದೆ. ಹಿಂಸೆ ಎನ್ನುವುದು ಅಮಾನವೀಯ, ಬರ್ಬರ ಎಂದು

ಎನ್. ಮನು ಚಕ್ರವರ್ತಿ, ಇಂಗ್ಲಿಷ್ ವಿಭಾಗ, ಎನ್.ಎಂ.ಕೆ.ಆರ್.ವಿ. ಪ್ರಥಮ ದರ್ಜೆ ಕಾಲೇಜ್
ಜಯನಗರ, ಬೆಂಗಳೂರು-560 011

ತಿರಸ್ಕರಿಸುವ ಮುನ್ನ ಹಿಂಸೆಯನ್ನು ಒಂದು ಚಾರಿತ್ರಿಕ ಬೆಳವಣಿಗೆಯಾಗಿ ನೋಡಬೇಕಾಗಿದೆ.

1. ದೃಷ್ಟಿಕೋನದ ಪ್ರಶ್ನೆ : ಒಂದು ಉದಾಹರಣೆ.

> ....for there is nothing either
> good or bad but thinking makes it so.
>
> — **Hamlet**

ನಮ್ಮ ನಿಲುವುಗಳು ಎಲ್ಲಿಂದ ಹುಟ್ಟುತ್ತವೆ ? ಚರಿತ್ರೆಯುದ್ದಕ್ಕೂ ಒಮ್ಮೆ ಕಣ್ಣಾಡಿಸಿದರೆ ಸಾಕು, ಇಂಥ ನಿಲುವುಗಳು ಮಾನವರ ಭೌತಿಕ ಹಿನ್ನೆಲೆಯಿಂದಲೇ ಹುಟ್ಟುತ್ತವೆಂಬುದು ತಿಳಿಯುತ್ತದೆ. ಅವರ 'ಪ್ರಜ್ಞೆ' ಕೂಡ ತಾವು ಹೊಂದಿರುವ ಭೌತಿಕ ಸಂಪತ್ತಿನಿಂದಲೇ ರೂಪುಗೊಂಡಿರುತ್ತದೆ. ಇದೊಂದು ಸರಳ ಸತ್ಯ. ಇದನ್ನು ಹೇಳಲು ಮಾರ್ಕ್ಸ್‌ವಾದಿಯಾಗಬೇಕಾಗೇನೂ ಇಲ್ಲ. ಹಾಗೆಯೇ ಉಳ್ಳವರು ಹಾಗೂ ಇಲ್ಲದವರು ಪ್ರತಿಭಟಿಸುವ ವಿಧಾನಗಳು ಕೂಡ ಭಿನ್ನವಾಗಿರುತ್ತವೆ, ಅದು ಅನಿವಾರ್ಯ ಕೂಡ. ತುಳಿತಕ್ಕೊಳಗಾದವರ ಬಗೆಗೆ ಕಾಳಜಿಯಿದ್ದವರು ಮಾತ್ರ ಈ ಭಿನ್ನತೆಯನ್ನರಿಯಲಿತ್ತಿಸುತ್ತಾರೆ. ಈ ಅಂಶವನ್ನು ಮತ್ತೂ ಸ್ಪಷ್ಟವಾಗಿ ಹೇಳಲು ಬರ್ಕ್ ಮತ್ತು ಫ್ರೆಂಚ್ ಕ್ರಾಂತಿಯ ಉದಾಹರಣೆ ಕೊಡುತ್ತೇನೆ. ಫ್ರೆಂಚ್ ಕ್ರಾಂತಿಯನ್ನು ಹಿಂಸೆಯ ಕಾರಣಕ್ಕಾಗಿ ತಿರಸ್ಕರಿಸಿದ ಬರ್ಕ್‌ಗೆ ತನ್ನ ಈ ಪ್ರತಿಕ್ರಿಯೆ ಚರಿತ್ರೆಗೆ ವಿರುದ್ಧವಾದದ್ದು ಅನಿಸುತ್ತದೆ. ಈಗ ಬರ್ಕ್‌ಗೆ ಅದು ಹಿಂಸಾತ್ಮಕ ಚಳವಳಿಯಾಗಿ ಕಾಣುವುದಿಲ್ಲ ; ಬದಲಿಗೆ ಅಗತ್ಯವಾದ, ಅನಿವಾರ್ಯವಾದ ಚರಿತ್ರೆಯ ಒತ್ತಡವಾಗಿ ಕಾಣುತ್ತದೆ. ತನ್ನ ಆ ಮೊದಲಿನ ಪ್ರತಿಕ್ರಿಯೆ ತನ್ನ ಇಂಗ್ಲಿಷ್ ಮಧ್ಯಮ ವರ್ಗದ ಪ್ರಜ್ಞೆಯಿಂದ ಹುಟ್ಟಿದ್ದು ಎನಿಸಿದಾಗ ಅವನು ಹೇಳಿದ ಮಾತುಗಳಲ್ಲಿ, ತಂತಮ್ಮ ವರ್ಗಗಳ ಹಿತವನ್ನು ಮಾತ್ರ ಎತ್ತಿ ಹಿಡಿಯುವ ಹಾಗೂ ಉಳಿದ ವರ್ಗಗಳ ನ್ಯಾಯಯುತ ಹೋರಾಟಗಳನ್ನು ವಿರೋಧಿಸುವವರಿಗೊಂದು ಉತ್ತರವಿದೆ. ಬರ್ಕ್ ಹೇಳುತ್ತಾನೆ: Whoever attempts to resist the new forces of history will not 'be bold and resolute' but will only remain 'obstinate and perverse'. ಬರ್ಕ್‌ನ ಉದಾಹರಣೆ ಕೇವಲ ಸಾಂದರ್ಭಿಕವಾದದ್ದಲ್ಲ. ಬದಲಿಗೆ ಅದು, ಹಿಂಸೆ ತನ್ನ ಅತ್ಯಂತ ಒರಟು ರೂಪದಲ್ಲಿ ಕೂಡ ತುಳಿಯಲ್ಪಟ್ಟವರ ಅವಮಾನವನ್ನು ಪ್ರತಿನಿಧಿಸುತ್ತದೆಂಬುದನ್ನು ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿ, ದಬ್ಬಾಳಿಕೆಯ ವ್ಯವಸ್ಥೆಯೊಂದರಲ್ಲಿ ಬಂದದ್ದ ವರ್ಗದ ಹಿಂಸಾಸ್ಫೋಟವನ್ನು ನೋಡಬೇಕು. ಹೀಗೆ ಸ್ಫೋಟಗೊಂಡ ಹಿಂಸೆ ಒಂದು ಉಸಿರುಕಟ್ಟಿಸುವ ಹಿಂಸಾಮಯ

ಸಾಮಾಜಿಕ ಬದುಕಿನ ಪ್ರತಿಫಲವಾಗಿರುತ್ತವೆ. ತುಳಿಯಲ್ಪಟ್ಟವರ ಎಲ್ಲ "ಪ್ರತಿಕ್ರಿಯೆ"ಗಳೂ ಅನಿವಾರ್ಯವಾಗಿ ಅಮಾನವೀಯ ವ್ಯವಸ್ಥೆಯೊಂದರ ವಿರುದ್ಧವೇ ಇರುತ್ತದೆ. ಈ ಅಮಾನವೀಯ ವ್ಯವಸ್ಥೆಯೇ ಈ ಹಿಂಸೆಯ ಸ್ಫೋಟಕ್ಕೆ ಮೂಲ. ಹೀಗೆ ಸ್ಫೋಟಗೊಳ್ಳುವ ಬಂಡುಕೋರರಲ್ಲಿ "ಋಜು" ಹಾಗೂ "ಕೇಡಿ"ನ ವಿಧಾನಗಳ ನಡುವಣ ತಾತ್ವಿಕಗೆರೆಯೊಂದನ್ನೆಳೆಯುವ ಶಕ್ತಿ ಕಣ್ಮರೆಯಾಗಿರುತ್ತದೆ, ನಿಜ. ಆದರೆ ಅಮಾನವೀಯ ವ್ಯವಸ್ಥೆಯೊಂದಕ್ಕೆ ಈ ಹಿಂಸಾಮಾರ್ಗದ ವಿರುದ್ಧ ನೈತಿಕ ತೀರ್ಮಾನ ತಳೆಯುವ ಹಕ್ಕಿಲ್ಲ. ಈ ಅಂಶವನ್ನು ನಾವು ಕಡೆಗಣಿಸಿದರೆ ಚರಿತ್ರೆಯ ನಡಿಗೆಯನ್ನೇ ತಪ್ಪಾಗಿ ಅರ್ಥೈಸುತ್ತೇವೆ. ಅಂದರೆ, ಅಂತಿಮವಾಗಿ 'ಋಜು' ಹಾಗೂ 'ಕೇಡಿ'ನ ಮಾರ್ಗಗಳೆಂದು ಗೆರೆ ಕೊಯ್ಯಲಾಗುವುದಿಲ್ಲ. ಕಾರಣ, ನಮ್ಮ ನಮ್ಮ "ಹಿತಗಳು" ನಿಯಂತ್ರಿಸುವ ನಮ್ಮ ಆಲೋಚನಾ ಕ್ರಮಗಳು ಹೀಗೆ ನೋಡುವಂತೆ ಒತ್ತಾಯಿಸುತ್ತವೆ ಎಂಬುದೇ.

II. ಅಂತರದ ಪ್ರಶ್ನೆ

ಚರಿತ್ರೆಯುದ್ದಕ್ಕೂ ರಕ್ತಪಾತವಿಲ್ಲದ ಬಿಡುಗಡೆಯ ಹೋರಾಟಗಳೇ ಇಲ್ಲ. ಇಪ್ಪತ್ತನೇ ಶತಮಾನವಂತೂ ಮಹಾಯುದ್ಧಗಳಿಗೆ, ಹಲವು ರಾಷ್ಟ್ರೀಯ ಕ್ರಾಂತಿಗಳಿಗೆ ಸಾಕ್ಷಿಯಾಗಿ ನಿಂತಿದೆ. ಎಷ್ಟೋ ರಾಷ್ಟ್ರೀಯ ಕ್ರಾಂತಿಗಳು ಅಂತಾರಾಷ್ಟ್ರೀಯ ದಬ್ಬಾಳಿಕೆಯ ಫಲ ಎಂಬುದನ್ನು ನಾವು ಮರೆಯುವಂತಿಲ್ಲ. ಆಫ್ರಿಕನ್ ಖಂಡದ, ಲ್ಯಾಟಿನ್ ಅಮೆರಿಕಾದ, ವಿಯೆಟ್ನಾಮಿನ ಹೋರಾಟಗಳು, ರಷ್ಯನ್ ಕ್ರಾಂತಿ, ಸ್ಪ್ಯಾನಿಷ್ ನಾಗರಿಕ ಯುದ್ಧ, ಹಾಗೂ ತೀರಾ ಇತ್ತೀಚಿನ ಬಾಂಗ್ಲಾ ವಿಮೋಚನೆಯ ಯುದ್ಧಗಳು—ಇವೆಲ್ಲಾ ನಮಗೆ ನ್ಯಾಯಕ್ಕಾಗಿ ಮತ್ತು ಸ್ವಾಧಿಕಾರ ಸ್ಥಾಪನೆಗಾಗಿ ನಡೆದ ಋಜು ಮಾರ್ಗದ, ಹೀರೋಯಿಕ್ ಆದ ಹೋರಾಟಗಳಂತೆ ಕಾಣಬರುತ್ತವೆಯೋ ಹೊರತು ಬರ್ಬರವಾಗಿ ಕಾಣುವುದಿಲ್ಲ. ಕಾಲ ದೇಶಗಳ ಅಂತರದಿಂದ ನೋಡಿದರಂತೂ ಈ ಎಲ್ಲ ಹೋರಾಟಗಳೂ ಸರ್ವಾಧಿಕಾರದ ವಿರುದ್ಧ ಬಂಡೆದ್ದು ನಿಂತ ಶ್ರೀಸಾಮಾನ್ಯನ ಅದ್ಭುತ ಚೇತನದ ಪ್ರತೀಕಗಳಂತೆಯೇ ಕಾಣುತ್ತವೆ. ಇದೇ "ಅಂತರ"ವನ್ನು ಇಂದು ನಮ್ಮ ಸುತ್ತ ಹರಡಿಕೊಂಡಿರುವ 'ಹಿಂಸಾ ಮಾರ್ಗ'ದ ಚಳವಳಿಗಳ ಸಂದರ್ಭದಲ್ಲೂ ಕಾಯ್ದುಕೊಂಡು ನೋಡಿದರೆ ಈ ಚಳುವಳಿಗಳು ಯಾವುದರ ವಿರುದ್ಧ ಮತ್ತು ಯಾವುದರ ಪರ ಎಂಬುದು ತಿಳಿಯುತ್ತದೆ. ವರ್ತಮಾನದಿಂದ ನಮ್ಮನ್ನು ನಾವು ದೂರವಿಟ್ಟುಕೊಂಡು ನೋಡದೇ ಹೋದರೆ ಈ ನೋಟವೇ ದಕ್ಕಲಾರದೇನೋ. ಈ ಅಂತರವೇ ವರ್ತಮಾನವನ್ನು ಭವಿಷ್ಯತ್ತಿನ ಜೊತೆಜೊತೆಗೇ ಅರ್ಥಮಾಡಿಕೊಳ್ಳುವ ದೃಷ್ಟಿಯನ್ನು ನಮಗೆ ನೀಡುತ್ತದೆ.

III. 'ಪ್ರಭುತ್ವ'ದ ಸ್ಥಿತಿ : ಪ್ರಭುತ್ವ (the state) ಮತ್ತು ಸರ್ಕಾರ.

ಪ್ರಭುತ್ವರಹಿತ ಸಮಾಜ ಎನ್ನುವುದು ಎಲ್ಲ ಸಮಾನತಾವಾದಿಗಳ ಕನಸು. ಆದರೆ ಅಂಥ ಸಮಾಜವೊಂದನ್ನು ಮಾನವಕುಲ ಈ ತನಕ ಸೃಷ್ಟಿಸಲಾಗಿಲ್ಲ. ಪ್ರಭುತ್ವ ಅಸ್ತಿತ್ವದಲ್ಲಿದೆ ; ಅದು ಮುಂದುವರಿಯುತ್ತದೆ. ಈ ಹೊತ್ತಿನ ಹಿಂಸೆಯ ಸ್ವರೂಪ ವನ್ನೂ ಪರಿಣಾಮವನ್ನೂ ತಿಳಿಯಲು ಪ್ರಭುತ್ವದ ಇಂದಿನ ಸ್ವರೂಪವನ್ನು ಅರ್ಥ ಮಾಡಿಕೊಳ್ಳಬೇಕು.

ತಾತ್ವಿಕ ಅರ್ಥದಲ್ಲಿ ಪ್ರಭುತ್ವ ಎನ್ನುವುದು ಕೆಲವೇ ಜಾತಿ, ವರ್ಗಗಳಿಗೆ ಮಾತ್ರ ಮೀಸಲಾಗದೆ ಎಲ್ಲರ ಹಿತಗಳನ್ನೂ ಕಾಯಬೇಕಾದ ಒಂದು ಆದರ್ಶ ವ್ಯವಸ್ಥೆ. 'ಪ್ರಭುತ್ವ' ಕುರಿತು ಮಾತಾಡುವಾಗಲೆಲ್ಲ ನಾವು ಅದು ಸಮಗ್ರತೆಯನ್ನು ಕಾಪಾಡುವ ಒಂದು ಅಂಗವೆಂದೇ ತಿಳಿಯುತ್ತೇವೆ. ಪ್ರಭುತ್ವದ ಕಲ್ಪನೆಯನ್ನೇ ಧಿಕ್ಕರಿಸುವವರು ಕೂಡ ಈ ಅಂಶವನ್ನು ಸೈದ್ಧಾಂತಿಕವಾಗಿಯಾದರೂ ಒಪ್ಪಿಕೊಳ್ಳುತ್ತಾರೆ.

ಆದರೆ ವಾಸ್ತವಾನುಭವ ತೀರಾ ಭಿನ್ನವಾದದ್ದೇ ಆಗಿದೆ. ಆದ್ದರಿಂದಲೇ ಇನ್ನು ಮುಂದೆ ಇಂಡಿಯಾವನ್ನೇ ಕೇಂದ್ರವಾಗಿಟ್ಟುಕೊಂಡು ಈ ಪ್ರಭುತ್ವದ ಹೆಸರಿನಲ್ಲಿ ನಡೆ ಯುತ್ತಿರುವುದೇನು ಎಂಬುದನ್ನು ಅರ್ಥಮಾಡಿಕೊಳ್ಳಲೆತ್ನಿಸುತ್ತೇನೆ. ಸ್ವಾತಂತ್ರ್ಯ ಬಂದು ಐದು ದಶಕಗಳಾದರೂ ಇನ್ನೂ ಜನತೆ ತನ್ನನ್ನು ತಾನು ಗುರ್ತಿಸಿಕೊಳ್ಳಬಹು ದಾದ ಪ್ರಭುತ್ವ ಇಂಡಿಯಾದಲ್ಲಿ ಅಸ್ತಿತ್ವಕ್ಕೆ ಬಂದಿಲ್ಲ. ಇಂಡಿಯಾದ ಜನತೆಗೆ ಅನುಭವಕ್ಕೆ ಬಂದಿರುವುದು ಪಕ್ಷದಿಂದ ರೂಪಿಸಲ್ಪಟ್ಟ ಸರ್ಕಾರವೇ ಹೊರತು ಪ್ರಭುತ್ವ ಅಲ್ಲ. ಎಲ್ಲ ಪ್ರಜಾಪ್ರಭುತ್ವ ರಾಷ್ಟ್ರಗಳ ಅನುಭವವೂ ಇದೇ. ಜನರಿಂದ ಆರಿಸಲ್ಪಟ್ಟ ಸರ್ಕಾರವೊಂದು ಪ್ರಭುತ್ವವಾಗಿ ವರ್ತಿಸಿಯೇ ಇಲ್ಲ ; ಬದಲಿಗೆ ತನ್ನ ಹಿತಗಳನ್ನು ಮಾತ್ರ ಕಾಯ್ದುಕೊಳ್ಳುತ್ತಾ ದೇಶವನ್ನು ಆಳಿದೆ, ಅಷ್ಟೆ. ಆದ್ದರಿಂದಲೇ ಪ್ರಭುತ್ವ ಹಾಗೂ ಸರ್ಕಾರಗಳ ನಡುವಿನ ವ್ಯತ್ಯಾಸವನ್ನು ಗುರ್ತಿಸಬೇಕಾಗಿರುವುದು. ಈ ವ್ಯತ್ಯಾಸ ತಾತ್ವಿಕವಾದದ್ದಲ್ಲ ; ಇದೊಂದು ರಾಜಕೀಯ ವಾಸ್ತವ. ತಮ್ಮೆಲ್ಲ ಸೋಲು ಗಳ ನಡುವೆಯೂ ಸೋಷಲಿಸ್ಟ್ ಹಾಗೂ ಕಮ್ಯುನಿಸ್ಟ್ ಸರ್ಕಾರಗಳು ಕಡೆಯ ಪಕ್ಷ ತಮ್ಮದೇ ಆದ ರೀತಿಯಲ್ಲಿ ಪ್ರಭುತ್ವದ ತಾತ್ವಿಕ ಅನುಭವವಾದರೂ ದಕ್ಕುವಂತೆ ಮಾಡಿವೆ. ಆದರೆ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಸರ್ಕಾರಗಳು ಸದಾ ನಿರ್ದಿಷ್ಟವರ್ಗ ಗಳ, ಜಾತಿಗಳ ಹಿತಾಸಕ್ತಿಯನ್ನು ಮಾತ್ರ ಕಾಯ್ದುಕೊಂಡು ಬಂದಿವೆ. ಇಂಡಿಯಾ ದಲ್ಲಿ ಕೂಡ ಸರ್ಕಾರವೇ ಪ್ರಭುತ್ವ. ಈ ಸರ್ಕಾರವೆಂದರೆ ಅಧಿಕಾರಕ್ಕೆ ಬಂದಿರುವ ಪಕ್ಷ. ಅಂದರೆ, ಪ್ರಭುತ್ವ = ಸರ್ಕಾರ = ಪಕ್ಷ = ಅಧಿಕಾರ. ಇದು ಭಾರತೀಯ ಪ್ರಭುತ್ವದ ಸ್ವರೂಪ. ಇನ್ನೊಂದು ಅಧಿಕಾರದ ಯೂನಿಟ್ಟು ; ಅಧಿಕಾರದ ಕೇಂದ್ರ,

ಅಂಶವೇ ಮತ್ತೊಂದು ಸತ್ಯವನ್ನು ಹೊರಗೆಡಹುತ್ತದೆ : ಇದುವರೆಗೂ ಅಧಿಕಾರಕ್ಕೆ ದಿರುವ ಯಾವ ಪಕ್ಷಗಳಲ್ಲೂ ಭಾರತೀಯ ವಾಸ್ತವದಲ್ಲಿ ಬೇರುಬಿಟ್ಟ ಸಿದ್ಧಾಂತ ಗಲೀ, ಶ್ರೇಣೀಕೃತ ವ್ಯವಸ್ಥೆಯನ್ನು ಧಿಕ್ಕರಿಸುವ ಪಾರ್ಟೀ ಸಂವಿಧಾನವಾಗಲೀ ಲ್ಲ. ಸಿದ್ಧಾಂತ ಹಾಗೂ ಕೇಡರ್ ಆಧಾರದ ನಾಯಕತ್ವದ ಬಗೆಗೆ ಮಾತಾಡುವ ಮ್ಯುನಿಸ್ಟ್ ಪಾರ್ಟಿಗಳ ಕಥೆಯೂ ಇದೇ. ಇಂಡಿಯಾದಲ್ಲಿ ಪಾರ್ಟಿ ಎಂದರೆ ಅಧಿಕಾರ ಡಿಯುವ ಸಾಧನ ಮಾತ್ರ. ಈ ಅಂಶವೇ ಇಂಡಿಯಾದ ರಾಜಕೀಯ ಪಕ್ಷಗಳಲ್ಲಿ ಾವುದೇ ರಾಜಕೀಯ, ಸಾಮಾಜಿಕ ಅಥವಾ ಬೌದ್ಧಿಕ ಹಿನ್ನೆಲೆಗಳು ಇರದಂಥವರೇ ಾಕೆ ತುಂಬಿಕೊಂಡಿದ್ದಾರೆ ಎಂಬುದನ್ನು ವಿವರಿಸುತ್ತದೆ. ಪಕ್ಷ ಕಟ್ಟುವವರಲ್ಲಿ ಬಹು ಕರು ಹುಂಡಾಗಳು, ಹಣವಂತರು ಮತ್ತು ಬಲಿಷ್ಠ ಜಾತಿಗಳು. ಈ ಮೂವರ ತುವಣ ಕರಾಳ ಹೊಂದಾಣಿಕೆ ಎಷ್ಟು ಬಲಿಷ್ಠವಾಗಿದೆಯೆಂದರೆ ಈ ಹೊಂದಾಣಿಕೆ ನ್ನು ಮುರಿಯುವ ಯಾವ ಪಕ್ಷವೂ ಅಧಿಕಾರಕ್ಕೆ ಬರಲು ಅಸಾಧ್ಯ ಎನ್ನುವಷ್ಟು. ೀಗಾಗಿಯೇ ಇವರೇ ಎಲ್ಲ ಪಾರ್ಟಿಗಳ ಮುಂದಾಳುಗಳು. ಸರ್ಕಾರವೊಂದು ರೂಪು ಳ್ಳುವುದು ಪಾರ್ಟಿಯನ್ನು ರೂಪಿಸುವವರ ಶಕ್ತಿಯಿಂದಾಗಿ. ಇದು ಭಾರತೀಯ ಜಾಪ್ರಭುತ್ವದ ಮೂಲಲಕ್ಷಣ. ಇಲ್ಲಿ ಪ್ರಭುತ್ವ ಎಂಬುದು ಇಲ್ಲ. ಇರುವುದೇನಿ ರೂ ಪಕ್ಷಗಳಿಂದ ರೂಪಿಸಲ್ಪಟ್ಟ ಸರ್ಕಾರಗಳು ಮಾತ್ರ.

/. ‘ಪ್ರಭುತ್ವ’ ಎಂದು ಕರೆಯಲ್ಪಡುವ ಪ್ರಭುತ್ವದ ಆಡಳಿತ

(i) ಪ್ರಭುತ್ವವನ್ನು ರೂಪಿಸುವವರು ಯಾರು ?

ಇಲ್ಲಿ ಪ್ರಭುತ್ವವಿಲ್ಲ. ಇರುವುದೇನಿದ್ದರೂ ಸರ್ಕಾರ. ಇದು ಕೂಡ ಪ್ರಾತಿ ಧಿಕ ಸರ್ಕಾರವಲ್ಲ. ಇದು ಕೇವಲ ಆಡಳಿತ ಪಕ್ಷ. ಪ್ರತೀ ಪಕ್ಷವೂ ಅಧಿಕಾರಕ್ಕೆ ತುಕೊಳ್ಳಲು ತನ್ನ ಕೈಲಾದದ್ದನ್ನೆಲ್ಲಾ ಮಾಡುತ್ತದೆ. ಈ ಕಾರಣದಿಂದಾಗಿಯೇ ಾವ ಪಕ್ಷಕ್ಕೂ ಸಿದ್ಧಾಂತಗಳೇ ಇಲ್ಲವಾಗಿರುವುದು. ಇಂಡಿಯಾದ ಸಂದರ್ಭದಲ್ಲಿ olitics of power" ಸೃಷ್ಟಿಯಾದದ್ದೇ" power in politics"ನಿಂದಾಗಿ. ದರ ಫಲವೇ ಭಾರತೀಯ ರಾಜಕಾರಣದ ಅಪರಾಧೀಕರಣ (criminalisation). ರತೀಯ ನ್ಯಾಯಾಂಗದಲ್ಲಾಗಲೀ ಅಥವಾ ಸಂವಿಧಾನದಲ್ಲಾಗಲೀ ಅಪರಾಧದ ನ್ನೆಲೆಯಿರುವವರು ಅಂದರೆ ಪೋಲೀಸ್ ಪಟ್ಟಿಯಲ್ಲಿರುವವರು, ಕೋರ್ಟ್ ಕೇಸು ಳನ್ನು ಎದುರಿಸುತ್ತಿರುವವರು ಚುನಾವಣೆಗೆ ನಿಲ್ಲದಂತೆ ಮಾಡುವ ಅವಕಾಶವೇ ಇಲ್ಲ. ೀಗಾಗಿಯೇ ಭೂಗತ ಜಗತ್ತಿನ ವ್ಯಕ್ತಿಗಳು ಕೂಡ ಪಕ್ಷ ಕಟ್ಟಿ ಪ್ರಭುತ್ವವನ್ನು ಸ್ಥಾಪಿಸು ತ್ತಾರೆ. ಇಡೀ ಭಾರತೀಯ ಪ್ರಭುತ್ವವೇ ಅಪರಾಧೀಕರಣಗೊಂಡಿದೆ ಎಂಬುದಕ್ಕೆ

ನಮ್ಮ ಚುನಾವಣೆಗಳೇ ಸಾಕ್ಷಿ. ಇಂಥ ಪ್ರಭುತ್ವದ ವಿವಿಧ ಮುಖಗಳನ್ನು ಮುಂದೆ ನೋಡೋಣ.

1. ಅಧಿಕಾರದ ಕೇಂದ್ರೀಕರಣ

ಹೀಗೆ ಅಸ್ತಿತ್ವಕ್ಕೆ ಬಂದ ಪ್ರಭುತ್ವ ಎರಡು ಬಗೆಯ ಕೇಂದ್ರೀಕರಣಗಳ ಮೂಲಕ ಆಳುತ್ತದೆ: 1. ವ್ಯಕ್ತಿಯ ಹಂತದಲ್ಲಿ ಅಧಿಕಾರದ ಕೇಂದ್ರೀಕರಣ, 2. ಪ್ರಾಂತ್ಯದ ಹಂತದಲ್ಲಿ ಅಧಿಕಾರದ ಕೇಂದ್ರೀಕರಣ.

ಪಕ್ಷವೊಂದು ಸರ್ಕಾರ ರಚಿಸುವುದು ನಾಯಕನೊಬ್ಬನ ವ್ಯಕ್ತಿತ್ವ ಸೃಷ್ಟಿಸುವ ಅಲೆಯಿಂದಾಗಿ. ಆದ್ದರಿಂದಲೇ ಸಿದ್ಧಾಂತ ಅಥವಾ ಕೇಡರ್‌ಗಳಿಗಿಂತ ನಾಯಕನೇ ಪಕ್ಷವೊಂದಕ್ಕೆ ಮುಖ್ಯವಾಗುವುದು. ನಾಯಕನನ್ನು ದೇವತೆಯ ಪಟ್ಟಕ್ಕೇರಿಸುವುದು ನಮ್ಮ ಚುನಾವಣೆಗಳ ಬಹುಮುಖ್ಯ ಲಕ್ಷಣಗಳಲ್ಲೊಂದು. ನೆಹರೂ, ಇಂದಿರಾ ಸೇರಿದಂತೆ ಇತ್ತೀಚಿನ ನಾಯಕನವರೆಗೂ ಎಲ್ಲ ಪಕ್ಷಗಳಲ್ಲೂ ಕಾಣಬರುವುದು ಇದೇ ಸೂತ್ರವೇ. ಅಂದರೆ ಇಡೀ ಪಕ್ಷ ಏಕವ್ಯಕ್ತಿಯ ಸುತ್ತಾ ಸುತ್ತುತ್ತದೆ. ಪರಿಣಾಮವಾಗಿ ಈ ವ್ಯಕ್ತಿ ಕೇವಲ ಪಾರ್ಟಿಯ ಕೇಂದ್ರವಾಗಿರುವುದಿಲ್ಲ, ಸರ್ಕಾರದ ಕೇಂದ್ರವಾಗಿರುತ್ತಾನೆ. ಇಂಡಿಯಾದಲ್ಲಿ ಯಾಕೆ ಸರ್ಕಾರಗಳು ಪಕ್ಷದಿಂದ ಸ್ವತಂತ್ರವಾಗಿರುವುದಿಲ್ಲ ಎಂಬುದಕ್ಕೆ ಕಾರಣ ಇಲ್ಲಿದೆ. ಇದು ಕೊನೆಮುಟ್ಟುವುದು ಅಧಿಕಾರವನ್ನೆಲ್ಲ ವ್ಯಕ್ತಿಯೊಬ್ಬನಲ್ಲಿ ಕೇಂದ್ರೀಕರಿಸುವುದರಲ್ಲಿ.

ಹೀಗೆ ಅಧಿಕಾರ ಸೂತ್ರಗಳನ್ನು ಹಿಡಿದ ವ್ಯಕ್ತಿ ತನ್ನ ಕ್ಷೇತ್ರವನ್ನು, ತನ್ನ ವರ್ಗ, ಜಾತಿಗಳನ್ನು ಬಲಪಡಿಸಲು ಮೊದಲು ಯತ್ನಿಸುತ್ತಾನೆ. ನಂತರ ತನ್ನ ಪ್ರಾಂತ್ಯವನ್ನು ಬಲಪಡಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಇದೆಲ್ಲವರ ಮೂಲ ಉದ್ದೇಶ ಒಂದೇ: ಅಧಿಕಾರವನ್ನು ಉಳಿಸಿಕೊಳ್ಳುವುದು. ಈ ದೃಷ್ಟಿಯಿಂದ ನೋಡಿದರೆ, ಇಂಡಿಯಾದ ಉಳಿದೆಲ್ಲ ಪ್ರಾಂತ್ಯಗಳ ಮೇಲೆ ಸ್ವಾಮ್ಯ ಸ್ಥಾಪಿಸಿರುವ ಉತ್ತರ ಪ್ರಾಂತ್ಯದ–ಹಿಂದಿ ಟೆರಿಟರಿಯ–ಪ್ರಾಬಲ್ಯ ಅರ್ಥವಾಗುತ್ತದೆ. ಇಂದಿಗೂ ಭಾರತೀಯ "ಪ್ರಾತಿನಿಧಿಕ ಸರ್ಕಾರ"ದ "ಹೃದಯ"ವೆಂದರೆ ಉತ್ತರದ ಹಿಂದಿ ವಲಯವೇ.

2. ಆಡಳಿತ ಯಂತ್ರದ ಬಳಕೆ

ಹೀಗೆ ಸಮಾಜ ವಿರೋಧಿ ವ್ಯಕ್ತಿಗಳಿಂದ ರೂಪುಗೊಂಡ ಸರ್ಕಾರವೊಂದು, ಕೇಂದ್ರೀಕೃತ "ಪ್ರಭುತ್ವ"ವೊಂದು, ತನ್ನ ಉಳಿವಿನ ಪ್ರಶ್ನೆ ಬಿಟ್ಟು ಬೇರೇನನ್ನೂ ಯೋಚಿಸಲಾರದು. ಅಧಿಕಾರದಲ್ಲುಳಿಯುವ ಸಲುವಾಗಿ ಪೋಲೀಸು, ಸೇನೆ, ಪ್ಯಾರಾ ಮಿಲಿಟರಿ, ಇಂಟೆಲಿಜೆನ್ಸ್ ಏಜೆನ್ಸಿಗಳು–ಈ ಎಲ್ಲವನ್ನೂ ಬಳಸಲು ಅದು ಹಿಂದೆ ಮುಂದೆ

ೀಳುವುದಿಲ್ಲ. ಸರ್ಕಾರದ ಭದ್ರತೆಗೆ ಕೊಂಚ ಅಪಾಯ ಬಂದರೂ ಅದು ಪ್ರಭುತ್ವದ
ಮಗ್ರತೆಗೆ ಆತಂಕವಾಗಿ ಕಾಣುತ್ತದೆ. ತಕ್ಷಣ ರಾಷ್ಟ್ರದ ಭದ್ರತೆಯ ಬಗೆಗೆ ಹುಯಿಲೆಬ್ಬಿಸ
ಾಗುತ್ತದೆ. ಪ್ರಭುತ್ವದ ಕೈಯಲ್ಲಿರುವ ಎಲ್ಲ ಸಾಧನಗಳನ್ನೂ ಬಳಸಿ ರಾಷ್ಟ್ರವನ್ನುಳಿಸಿ
ಳ್ಳಬೇಕೆಂಬ ಭ್ರಮೆಯನ್ನು ಹುಟ್ಟುಹಾಕಲಾಗುತ್ತದೆ. ಹಿಂಸಾತ್ಮಕ ಹಾಗೂ ಅಹಿಂಸಾ
್ಮಕ ಚಳವಳಿಗಳೆರಡನ್ನೂ ಸೇನೆ, ಪೋಲೀಸು, ಪ್ಯಾರಾಮಿಲಿಟರಿ ಪಡೆ ಮುಂತಾದ
ಜೆನ್ಸಿಗಳನ್ನು ಬಳಸಿ ಹತ್ತಿಕ್ಕಿರುವುದನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಇದು
ರಂಭವಾದದ್ದು ಇಂದಿರಾಗಾಂಧಿಯವರ ಎಮರ್ಜೆನ್ಸಿಯಲ್ಲಿ. ಅದರಿಂದಾಚೆಗೆ ಹೀಗೆ
ಷ್ಟ್ರದ ಭದ್ರತೆಯ ಹೆಸರಿನಲ್ಲಿ ಮಿಲಿಟರಿ ಪಡೆಗಳನ್ನು ನಾಗರಿಕ ಹೋರಾಟಗಳನ್ನು
ತ್ತಿಕ್ಕಲು ಬಳಸುವ ರೂಢಿ ಶರವೇಗದಲ್ಲಿ ಬೆಳೆದಿದೆ.

ಂದು ವಿಚಿತ್ರ ಸಮಾನ ದೃಷ್ಟಿಕೋನ

ಕಳೆದ ಹಲವು ದಶಕಗಳಲ್ಲಿ ಹುಟ್ಟಿದ ಎಲ್ಲ ಚಳವಳಿಗಳು–ಪರಿಸರ, ಧಾರ್ಮಿಕ
ಳವಳಿಗಳಿಂದ ಹಿಡಿದು ಮಾನವ ಹಕ್ಕುಗಳ ಚಳವಳಿಯವರೆಗೆ, ಎಲ್ಲ ಚಳವಳಿಗಳೂ–
ಂದಲ್ಲ ಒಂದು ರೀತಿಯಲ್ಲಿ ಪ್ರಭುತ್ವದ ನೀತಿಯನ್ನು, ನಿರ್ಧಾರವನ್ನೂ ಪ್ರಶ್ನಿಸಿದಂಥವೇ.
ಾಂಧೀವಾದಿ ಅಹಿಂಸಾತ್ಮಕ ಚಳವಳಿಗಳಿಂದ ಹಿಡಿದು ನಕ್ಸಲೈಟರ ಹಿಂಸಾತ್ಮಕ ಚಳವಳಿ
ುವರೆಗೆ ಎಲ್ಲರ ದಾಳಿಯ ಗುರಿಯೂ ಪ್ರಭುತ್ವವೇ. ಈ ಎಲ್ಲ ಬಗೆಯ ಚಳವಳಿಗಳಿಗೂ
್ರಭುತ್ವವೇ ಯಾಕೆ ಶತ್ರುವಾಗಿ ಕಾಣುತ್ತದೆಯೆಂಬುದು ತುಂಬ ಕುತೂಹಲಕರವಾದ
್ರಶ್ನೆ. ನಿಜವಾದ ಗಾಂಧೀವಾದಿಯೊಬ್ಬನಿಗೆ ಅನಿಸುವಂತೆ ನಕ್ಸಲೈಟನೊಬ್ಬನಿಗೆ ಕೂಡ
ಂದಿನ ಪ್ರಭುತ್ವ ಕ್ರೂರ ದಬ್ಬಾಳಿಕೆಯ ಪ್ರತಿರೂಪವಾಗಿ ಕಾಣುತ್ತದೆ. ಈ ಇಬ್ಬರಿಗೂ
್ರಭುತ್ವವು ಅನ್ಯಾಯ ಹಾಗೂ ಕ್ರೌರ್ಯದ ಮೂರ್ತರೂಪವಾಗಿ ಕಾಣಬರುವುದು.
ಾಗಾದರೆ ತತ್ವದಲ್ಲಿ, ಪ್ರಣಾಲಿಯಲ್ಲಿ, ನೋಡುವ ನೋಟದಲ್ಲಿ ತೀರಾ ಭಿನ್ನವಾದ
ರಡು ಚಳವಳಿಗಳು ಪ್ರಭುತ್ವವನ್ನು ಒಂದೇ ಬಗೆಯಲ್ಲಿ ಹೇಗೆ ನೋಡುತ್ತವೆ? ಇಲ್ಲೇ
್ರಭುತ್ವದ ನಿಜವಾದ ಸ್ವರೂಪ ಅರ್ಥವಾಗುವುದು. ಅಂದರೆ, ಪ್ರಭುತ್ವವೇ ಈ
ರಡೂ ಚಳವಳಿಗಳನ್ನು ಒಂದೇ ದೃಷ್ಟಿಯಿಂದ ನೋಡುವ ಮೂಲಕ ಈ ಭಿನ್ನ ಚಳವಳಿ
ಳನ್ನು ಒಂದೆಡೆ ಬೆಸೆದುಬಿಟ್ಟಿದೆ.

್ರಭುತ್ವದ ಶತ್ರುಗಳು

ತನ್ನ ಮೇಲಿನ ದಾಳಿಗೆ ಪ್ರತಿಯಾಗಿ ಪ್ರಭುತ್ವವು ತನ್ನ ಅಸ್ತಿತ್ವವನ್ನು ಪ್ರಶ್ನಿಸುವ
ುಂಪುಗಳು, ವ್ಯಕ್ತಿಗಳು, ಚಳವಳಿಗಳನ್ನು ತನ್ನ ಶತ್ರುಗಳನ್ನಾಗಿ ಕಾಣುತ್ತದೆ. ಯಾವ
ಕ್ತಿ ಅಥವಾ ವ್ಯಕ್ತಿ ಪ್ರಭುತ್ವದ ಅಸ್ತಿತ್ವವನ್ನು ಮುಂದುವರಿಸಲು ಸಹಾಯಕವಾಗಿ
ುದ್ರ

ಲ್ಲವೋ ಅಂಥ ಶಕ್ತಿಗಳನ್ನು ಪೋಸಕಿ ಹಾಕಲಾಗುತ್ತದೆ. ತನ್ನ ನಿರ್ಧಾರಗಳನ್ನು ಹಾಗೂ ಕಾರ್ಯಕ್ರಮಗಳನ್ನು ವಿರೋಧಿಸುವ ಯಾವ ಪ್ರಯತ್ನಗಳನ್ನೂ ಪ್ರಭುತ್ವ ಸಹಿಸಲಾರದೇ ಹೋಗುವುದರಿಂದಲೇ ಭಿನ್ನ ಬಗೆಯ ಚಳವಳಿಗಳನ್ನೂ ಒಂದೇ ಪಾತಳಿಯ ಮೇಲೆ ತರುವ ವಿಚಿತ್ರ ಪ್ರಯತ್ನ ಆರಂಭವಾಗುತ್ತದೆ. ಈ ಪ್ರಯತ್ನವೇ ಪ್ರಭುತ್ವವೊಂದು ವರ್ತಿಸುವ ರೀತಿಯನ್ನು ಪ್ರತಿಬಿಂಬಿಸುತ್ತದೆ. ಸ್ವಭಾವತಃ ಕ್ರಿಮಿನಲ್ ಆದ ಪ್ರಭುತ್ವ ವೊಂದು ನಾಗರಿಕ ಸ್ವಾತಂತ್ರ್ಯ ಹಾಗೂ ಮಾನವ ಹಕ್ಕುಗಳಿಗಾಗಿ ಒತ್ತಾಯಿಸುವ ಚಳವಳಿಯನ್ನು ಸಹಿಸಲಾರದು. ಅಧಿಕಾರಶಾಹಿ, ಬಂಡವಾಳಶಾಹಿ, ಹಾಗೂ ಸಾಮ್ರಾಜ್ಯ ಶಾಹಿಗಳಿಂದ ನಿಯಂತ್ರಿಸಲ್ಪಡುವ ಪ್ರಭುತ್ವವೊಂದಕ್ಕೆ ಅಧಿಕಾರ ಹಾಗೂ ಆರ್ಥಿಕ ವ್ಯವಸ್ಥೆಯ ವಿಕೇಂದ್ರೀಕರಣ ಚಳವಳಿಯು ತಲೆ ಕಂಡರಾಗುವುದಿಲ್ಲ. ಹೀಗೆಯೇ ತಂತ್ರ ವಾದಿ (technocrats) ಗಳನ್ನು ಅವಲಂಬಿಸುವ ಪ್ರಭುತ್ವವು ಗ್ರಾಮೀಣ ಹಾಗೂ ದೇಸೀ ತಂತ್ರಜ್ಞಾನಕ್ಕಾಗಿ ನಡೆಯುವ ಹೋರಾಟವನ್ನು ಗೌರವಿಸುವುದು ಸಾಧ್ಯವೇ ಇಲ್ಲ. ಆದ್ದರಿಂದಲೇ ಶಾಂತಿಯುತ ಚಳವಳಿಗಳನ್ನು ಪ್ರಭುತ್ವ ಹತ್ತಿಕ್ಕುತ್ತದೆ; ಆಯುಧ ಹಿಡಿದು ತಿರುಗಿ ಬಿದ್ದವರನ್ನು ಸದೆ ಬಡಿಯುತ್ತದೆ. ಸರ್ವೋದಯ ಚಳವಳಿಯಾಗಲೀ ಪರಿಸರ ಚಳವಳಿಯಾಗಲೀ, ನಕ್ಸಲೈಟ್ ಚಳವಳಿಯಾಗಲೀ ಅಲ್ಲಿ ಸರ್ಕಾರಕ್ಕೆ ಶತ್ರುಗಳೇ ಗೋಚರಿಸುತ್ತಾರೆ. ಹೀಗೆ ಪ್ರಭುತ್ವದ ನೆಲೆಯನ್ನೇ ಈ ಚಳವಳಿಗಳು ಪ್ರಶ್ನಿಸುತ್ತಿರು ವುದರಿಂದ ಈ ಚಳವಳಿಗಳಲ್ಲಿ ನಂಬಿಕೆಯಿಟ್ಟವರಿಗೆ 'ಪ್ರಭುತ್ವ' ಎನ್ನುವುದು ಅಸ್ತಿತ್ವ ದಲ್ಲೇ ಇಲ್ಲ. ಇದ್ದರೂ ಅದು ಅವರ ದಬ್ಬಾಳಿಕೆಯಲ್ಲಿ ಮಾತ್ರ ಗೋಚರವಾಗುತ್ತದೆ. ಎಲ್ಲ ಬಗೆಯ ಚಳವಳಿಗಳಿಗೂ ಪ್ರಭುತ್ವ ಬಳಸುವ ಭಾಷೆ ಒಂದೇ: ಹತ್ತಿಕ್ಕು ಇಲ್ಲವೇ ಕೊಚ್ಚಿಹಾಕು.

ಆದರೆ ಇಂದಿನ ಪ್ರಭುತ್ವ ಬಂಡವಾಳಶಾಹಿಗಳಿಗೆ, ಅಧಿಕಾರಶಾಹಿಗಳಿಗೆ, ಪೋಲೀಸು ಹಾಗೂ ತಂತ್ರವಾದಿಗಳಿಗೊಂದು ಸುಂದರವಾದ ವ್ಯವಸ್ಥೆ. ಹಾಗಾದರೆ ಇದು ಏನನ್ನು ಸೂಚಿಸುತ್ತದೆ? ನಮಗೊಂದು ಪ್ರಭುತ್ವವಿದೆ, ಆ ಪ್ರಭುತ್ವವು ಅಧಿಕಾರ, ಆರ್ಥಿಕ ವ್ಯವಸ್ಥೆ, ತಂತ್ರಜ್ಞಾನ–ಹೀಗೆ ಎಲ್ಲವನ್ನೂ ಸಂಪೂರ್ಣವಾಗಿ ಕೇಂದ್ರೀಕರಣ ಗೊಳಿಸುವುದರಲ್ಲಿ ಹಾಗೂ ಎಲ್ಲವನ್ನೂ ಅಧಿಕಾರಶಾಹಿಯ ಹಿಡಿತಕ್ಕೆ ಒಳಪಡಿಸುವುದರಲ್ಲಿ ಮಾತ್ರ ನಂಬಿಕೆ ಇಟ್ಟಿದೆ, ಎಂಬುದೇ ಇದರ ಸೂಚನೆ, ಅಲ್ಲವೆ ?

VII. ಹಿಂಸೆ: ಹುಟ್ಟು, ತಳೆಯುವ ರೂಪಗಳು, ಪರಿಣಾಮಗಳು

ಈ ಮೇಲೆ ಹೇಳಿದ ಹಿನ್ನೆಲೆಯಲ್ಲಿ ಈ ಹೊತ್ತಿನ ಹಿಂಸೆ ನನ್ನ ಕಣ್ಣೆದುರಿಗಿದೆ.

ಭಯೋತ್ಪಾದನೆ (Terrorism) ಎನ್ನುವುದು ಪ್ರಭುತ್ವದ ಹುನ್ನಾರ. ಭಯೋ ತ್ಪಾದಕತೆಯ ಹುಟ್ಟು ಪ್ರಭುತ್ವ ತನ್ನ ಉಳಿವಿಗಾಗಿ ಇತರ ಪಕ್ಷಗಳನ್ನು ಸದೆಬಡಿಯಲು

ಳಸುವ ಹಿಂಸಾ ಮಾರ್ಗವಲ್ಲಿವೆ. ಈ ಅರ್ಥದಲ್ಲಿ ತಿಳಿಗೇಡಿ ಭಯೋತ್ಪಾದಕತೆ ನ್ನುವುದು ಪ್ರಭುತ್ವವೊಂದು ತನ್ನ ಉಳಿವಿಗಾಗಿ ಹುಟ್ಟುಹಾಕಿದ ಮಾನಗೇಡಿ ಕ್ರಿಯೆ. ಂಗಾಗಿಯೇ ಭಯೋತ್ಪಾದಕತೆ ಒಂದು ಆಕಸ್ಮಿಕವಲ್ಲ. ಅದು ಪ್ರಭುತ್ವವೊಂದರ ಾರಿತ್ರಿಕ ಸೃಷ್ಟಿ; ಒಂದು ರಾಜಕೀಯ ನಡೆ.

ಹೇಗೂ ಇರಲಿ, ಇಲ್ಲಿ ನನ್ನ ಒತ್ತು ಒಂದು ತಾತ್ವಿಕ ನೆಲೆಗಟ್ಟಿನ ಮೇಲೆ ನಿಂತಿ ುವ "ಹಿಂಸೆ" ಕುರಿತಾದ್ದು. 'ಹಿಂಸೆ'ಯ ಬಗೆಗಿನ ಈ ತಾತ್ವಿಕ ಮೌಲ್ಯಗಳನ್ನು ಾವು ಒಪ್ಪುತ್ತೇವೋ ಇಲ್ಲವೋ ಎಂಬುದಕ್ಕಿಂತ ಮುಖ್ಯವಾಗಿ ಇಂಥ ಕೆಲವು ಚಳವಳಿ ಳ ತಾತ್ವಿಕ ನೆಲೆಗಟ್ಟನ್ನು ಗುರುತಿಸುವುದು ಮೊದಲ ಅಗತ್ಯ. ಈ ದೃಷ್ಟಿಯಿಂದ ಾಶ್ಮೀರ ಹಾಗೂ ಪಂಜಾಬಿನಲ್ಲಿ ನಡೆಯುತ್ತಿರುವ ಹೋರಾಟಗಳು 'ರಾಷ್ಟ್ರ ಪ್ರಭುತ್ವ' ಿಂದ ತಮ್ಮನ್ನು ತಾವು ಬಿಡುಗಡೆಗೊಳಿಸಿಕೊಳ್ಳುವ ಹೋರಾಟಗಳಾದರೆ, ನಕ್ಸಲೈಟ್ ಚಳವಳಿ ತನ್ನ ಆರಂಭದ ದಿನಗಳಿಂದ ಇಲ್ಲಿಯವರೆಗೂ ಸಮಾನತೆಗಾಗಿ ಹಾಗೂ 'ಬಂಡ ಾಳಶಾಹಿ ಪ್ರಭುತ್ವ'ದ ಸಂದರ್ಭದಲ್ಲಿ ಸಮಾಜವಾದೀ ಪ್ರಭುತ್ವಕ್ಕಾಗಿ ನಡೆಯುತ್ತಿರುವ ಹೋರಾಟವನ್ನು ಸಂಕೇತಿಸುತ್ತದೆ.

ಈ ಎಲ್ಲ ಸಂದರ್ಭಗಳಲ್ಲೂ ಪ್ರಭುತ್ವ ಹಾಗೂ ಅದರ ಸಹಾಪರಾಧಿಗಳಿಂದ ುಳಿಯಲ್ಪಟ್ಟ ಜನರ ಸ್ಫೋಟದ ಫಲವಾಗಿ ಹಿಂಸೆ ಹುಟ್ಟುತ್ತದೆ. ಈ ಬಗೆಯ ಹಿಂಸೆ ಯನ್ನು ಪರಿಶೀಲಿಸಿದಾಗ ಅದಕ್ಕೆ ಎರಡು ಮಗ್ಗುಲುಗಳು ಕಾಣಿಸುತ್ತವೆ :

. ಸ್ವಾಧಿಕಾರದ ಹಕ್ಕು: ರಾಷ್ಟ್ರಪ್ರಭುತ್ವದ ವೈಫಲ್ಯ

ಸ್ಪಷ್ಟ ರಾಜಕೀಯ ಅರ್ಥದಲ್ಲಿ ಇಂದು ಪ್ರಭುತ್ವವೆಂದರೆ ಒಂದು ನಿರ್ದಿಷ್ಟ ರ್ಗ ವ್ಯಕ್ತಿಗಳು, ಜಾತಿ, ಪ್ರಾಂತ್ಯದಿಂದ ನಿಯಂತ್ರಿಸಲ್ಪಟ್ಟ ವ್ಯವಸ್ಥೆಯೆಂದೇ ಅರ್ಥ. ಇವತ್ತು ಭಾರತದಲ್ಲಿರುವ ಪ್ರಭುತ್ವವನ್ನು ಸಿಮ್ರಂಜಿತ್‌ಸಿಂಗ್ ಮಾನ್‌ರಂಥವರು 'ಹಿಂದೀ ಪ್ರದೇಶವು ನಿಯಂತ್ರಿಸುವ ಹಿಂದೂ ಬ್ರಾಹ್ಮಣ ಪ್ರಭುತ್ವ'ವೆಂದು ಕರೆದಾಗ ನನಗೆ ಆಶ್ಚರ್ಯವಾಗಲಿಲ್ಲ. ಹೀಗೆ ಪ್ರಭುತ್ವ ರೂಪಿಸುವವರ ಕಣ್ಣಲ್ಲಿ ಇನ್ನುಳಿದವರೆಲ್ಲ ಪ್ರಭುತ್ವ ರೂಪಿಸಿದವರ ಸೇವೆಗೆ ಮಾತ್ರ ಇರತಕ್ಕಂಥವರು. ಅದನ್ನು ಮೀರಿದ ಯಾವ ಅಸ್ತಿತ್ವವೂ ಅವರಿಗಿಲ್ಲ. ಇಲ್ಲಿ ಪ್ರಭುತ್ವವೊಂದು ಸಹಜ ಸ್ಥಿತಿಯನ್ನು ನಿರ್ಮಾಣ ಮಾಡುವುದೆಂದರೆ ತನ್ನ ಕೈಯಲ್ಲಿರುವ ಪೋಲೀಸ್ ವ್ಯವಸ್ಥೆಯನ್ನು ಬಳಸುವುದೆಂದೇ ಅರ್ಥ. ಸಭ್ಯ, ನಾಗರಿಕ ವಿಧಾನಗಳನ್ನು ಇಂಥ ಸಂದರ್ಭಗಳಲ್ಲಿ ಬಳಸಬೇಕೆಂಬ ಯೋಚನೆ ಪ್ರಭುತ್ವದ ತಲೆಯಲ್ಲಿ ಹುಟ್ಟುವುದೇ ಇಲ್ಲ. ಈ ಧೋರಣೆಯೇ ಜನರನ್ನು ಮುಖ್ಯವಾಹಿನಿಯಿಂದ ೇರ್ಪಡಿಸಿ ಪರಕೀಯರನ್ನಾಗಿಸುತ್ತದೆ; ತಾವೆಲ್ಲ ಕಡೆಗಣಿಸಲ್ಪಟ್ಟವರು, ಅವಮಾನಿತರು

ಎಂದು ಅವರಿಗೆ ಅನಿಸಲಾರಂಭಿಸುತ್ತದೆ. ಇಂಥವರೆಲ್ಲ ಸ್ವಾಧಿಕಾರದ ಹಕ್ಕಿಗಾಗಿ ರಾಜಕೀಯವಾಗಿ ಹೋರಾಡಲಾರಂಭಿಸುತ್ತಾರೆ ಮತ್ತು ರಾಷ್ಟ್ರದೊಂದಿಗೆ ತಮ್ಮನ್ನು ಗುರ್ತಿಸಿಕೊಳ್ಳಲು ನಿರಾಕರಿಸುತ್ತಾರೆ. ಅವರ ಪ್ರಕಾರ ರಾಷ್ಟ್ರಪ್ರಭುತ್ವ ಈ ಭಾವನೆ ಹುಟ್ಟಿಸುವಲ್ಲಿ ವಿಫಲವಾಗಿದೆ. ಉಳಿದವರೊಂದಿಗೆ ತಮ್ಮನ್ನು ಗುರ್ತಿಸಿಕೊಳ್ಳಲು ಅವರು ನಿರಾಕರಿಸುತ್ತಾರೆ. ಪ್ರಭುತ್ವ ದಬ್ಬಾಳಿಕೆಯ ಪ್ರತಿರೂಪ. ಅದನ್ನು ಕಿತ್ತೊಗೆಯಬೇಕು ಅನಿಸುತ್ತದೆ. ಇದರ ರಾಜಕೀಯ ಅರ್ಥ ಸ್ಪಷ್ಟವಾಗಿದೆ : ಅವರು 'ರಾಷ್ಟ್ರಪ್ರಭುತ್ವ'ದ ವಿರುದ್ಧ ಬಂಡೆದ್ದಿದ್ದಾರೆ; ತಮ್ಮ 'ಸ್ವರಾಜ್'ಗಾಗಿ ಹೋರಾಡುತ್ತಿದ್ದಾರೆ.

ನ್ಯಾಯ ಮತ್ತು ಸಮಾನತೆ: ಪ್ರಭುತ್ವ ಹಾಗೂ ಇತರ ಅಂಗಗಳ ನಡುವಣ ಕರಾಳ ಒಪ್ಪಂದ

ಮೂಲಭೂತವಾಗಿ, ಪ್ರಭುತ್ವವೆಂದರೆ ಶೋಷಣೆ, ದಬ್ಬಾಳಿಕೆ ಎಂದು ತನ್ನ ಅನುಭವದ ಫಲವಾಗಿ ನಂಬುವ ವರ್ಗವೊಂದು ಸ್ಫೋಟಿಸುವ ಒಂದು ನಿರ್ದಿಷ್ಟ ಹಿಂಸಾರೂಪವಿದೆ. ಫ್ಯೂಡಲ್ ಜಮೀನುದಾರ, ಪೋಲೀಸು, ಸ್ಥಳೀಯ ಸರ್ಕಾರ, ಬಂಡವಾಳಶಾಹಿ, ಇಂಟೆಲಿಜೆನ್ಸ್ ವ್ಯವಸ್ಥೆ – ಈ ಎಲ್ಲ ಗುಂಪುಗಳ ಕರಾಳ ಒಪ್ಪಂದದ ಅರಿವು ಈ ವರ್ಗಕ್ಕೆ ಸ್ಪಷ್ಟವಾಗಿ ಅರಿವಾಗಿದೆ. ಸ್ವಾತಂತ್ರ್ಯ ಬಂದು ದಶಕಗಳೇ ಉರುಳಿ ಹೋಗಿದ್ದರೂ ಈವತ್ತಿಗೂ ಕನಿಷ್ಠ ಸೌಲಭ್ಯಗಳೂ ದಕ್ಕದ ಈ ವರ್ಗ ಪ್ರಭುತ್ವವೆನ್ನುವುದು ಎಂದೂ 'ನ್ಯಾಯ' (Just) ವಾಗಿರುವುದಿಲ್ಲವೆಂಬ ತೀರ್ಮಾನಕ್ಕೆ ತಲುಪುತ್ತದೆ. ಪ್ರಭುತ್ವ 'ನ್ಯಾಯ'ವಾಗಿರುವುದೆಂದರೆ ಅದರ ಅಸ್ತಿತ್ವದ ಅಡಿಗಲ್ಲಾಗಿರುವ ಜಮೀನ್ದಾರಿ, ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹಿ ಶಕ್ತಿಗಳಿಂದ ಬೇರ್ಪಡುವುದೆಂದೇ ಅರ್ಥ. ಹೀಗಾಗಿಯೇ ಇಂಥ ಪ್ರಭುತ್ವ ನ್ಯಾಯವಾಗಿರುವುದು ಸದ್ಯಕ್ಕಂತೂ ಸಾಧ್ಯವೇ ಇಲ್ಲ ಎಂದು ಈ ವರ್ಗ ನಂಬುತ್ತದೆ. ಆದ್ದರಿಂದ ಈ ಕೆಳಗಿನ ಅಂಶಗಳನ್ನು ನಾವು ಎಚ್ಚರಿಕೆಯಿಂದ ಅರ್ಥಮಾಡಿಕೊಳ್ಳಬೇಕು :

1. 'ಹಿಂಸೆ'–ಪ್ರಭುತ್ವವೇ ಹುಟ್ಟು ಹಾಕಿದ ಚಾರಿತ್ರಿಕ ವಿದ್ಯಮಾನ.
2. ಕ್ರೂರ ಪ್ರಭುತ್ವದ ವಿರುದ್ಧ ಈ ಹಿಂಸೆ ಭುಗಿಲೆದ್ದಿದೆ.
3. ಸ್ವಾಧಿಕಾರದ ಹಕ್ಕು ವಿಭಜನಾ ವಾದಕ್ಕಿಂತ ಭಿನ್ನವಾದದ್ದು ಹಾಗೂ ಸರ್ಕಾರ ತನ್ನ ಉಳಿವಿಗಾಗಿ ಎಲ್ಲ ಚಳವಳಿಗಳಿಗೂ ರಾಷ್ಟ್ರವಿರೋಧಿ ಹಣೆಪಟ್ಟಿ ಹಚ್ಚುವುದರ ಮೂಲಕ ಪ್ರಭುತ್ವ ಹಾಗೂ ಸರ್ಕಾರದ ನಡುವಣ ವ್ಯತ್ಯಾಸವನ್ನೇ ಮಸುಕಾಗಿಸುತ್ತವೆ.

4. ಸ್ವಾಧಿಕಾರದ ಪ್ರಶ್ನೆ ರಾಷ್ಟ್ರದಲ್ಲಿ ನಂಬಿಕೆ ಕಳೆದುಕೊಳ್ಳುವಂತೆ ಮಾಡುತ್ತದೆ.

5. ಕರಾಳ ಹೊಂದಾಣಿಕೆಗಳ ಪ್ರಭುತ್ವ ಎಂದೂ 'ನ್ಯಾಯ'ವಾಗಿರಲಾರದು.

— ಈ ಹೊತ್ತಿನ ಹಿಂಸೆಯನ್ನು ಒಂದು ಬಗೆಯ "ಅಂತರ"ದಿಂದ ನೋಡಿದರೆ ಈ ಮೇಲಿನ ನಿರ್ಣಯಗಳು ಹುಟ್ಟುತ್ತವೆ.

ಗಾಂಧಿ ಮತ್ತು ಅಹಿಂಸೆ

ಇಂಥ ಹಿಂಸಾಮಯ ಪ್ರಭುತ್ವವನ್ನು ಎದುರಿಗಿಟ್ಟುಕೊಂಡೇ ಇಂದು ಗಾಂಧಿಯ ಅಹಿಂಸಾವಾದವನ್ನು ನೋಡಬೇಕಾಗಿರುವುದು. ಕೇವಲ ಆಧ್ಯಾತ್ಮಿಕ ನೆಲೆಯಲ್ಲಿ ನಿಂತು ಗಾಂಧಿಯ ಅಹಿಂಸಾವಾದವನ್ನು ಒಪ್ಪಿಕೊಳ್ಳುವುದಾಗಲೀ ಅಥವಾ ತಿರಸ್ಕರಿಸುವುದಾಗಲೀ, ಈಗಿನ ಪ್ರಭುತ್ವದ ವಾಸ್ತವಕ್ಕೆ ಕುರುಡಾಗಿರುವುದರ ಸೂಚನೆ. ಅಹಿಂಸೆಯನ್ನೊಂದು ದೊಡ್ಡ ವಿಶ್ವಾತ್ಮಕ ಸತ್ಯವನ್ನಾಗಿ ಮಾತ್ರ ನೋಡದೆ ಅದನ್ನು ಚರಿತ್ರೆಯ ಸಂದರ್ಭದಲ್ಲಿಟ್ಟು ನೋಡುವುದೂ ಅಷ್ಟೇ ಮುಖ್ಯ. ಯಾಕೆಂದರೆ, ಗಾಂಧಿ ಹೇಳುತ್ತಾರೆ : "ಅಹಿಂಸೆಯು ಸಾವನ್ನು ಎದುರಿಸಲು ಸಿದ್ಧನಿರುವ ಧೀರನ ಮಾರ್ಗ. ತನ್ನನ್ನೂ ಹಾಗೂ ತನ್ನವರನ್ನೂ ಒಂದು ವೇಳೆ ಅಹಿಂಸಾಮಾರ್ಗದಿಂದ ಕಾಪಾಡಲಾಗದಿದ್ದರೆ, ಹಿಂಸಾಮಾರ್ಗದಿಂದಲಾದರೂ ಅಂಥ ದಬ್ಬಾಳಿಕೆಯನ್ನು ಎದುರಿಸಬೇಕಾಗುತ್ತದೆ. ಎರಡನ್ನೂ ಮಾಡದವನು ಬದುಕಿದ್ದೂ ಪ್ರಯೋಜನವಿಲ್ಲ." (ಯಂಗ್ ಇಂಡಿಯಾ, ಅಕ್ಟೋಬರ್ 11, 1928.)

ಅಂದರೆ, ಗಾಂಧಿಯ ಅಹಿಂಸಾವಾದದಲ್ಲಿ ಹಿಂಸೆ ಸಂಪೂರ್ಣ ಪರಕೀಯವಲ್ಲ, ಆತ್ಮರಕ್ಷಣೆಯ ಅಗತ್ಯ ಬಿದ್ದಾಗ ಹಿಂಸೆಗೂ ಗಾಂಧಿಜೀವನ ದೃಷ್ಟಿಯಲ್ಲಿ ಸ್ಥಾನವಿದೆ. ಆದರೆ ಗಾಂಧಿಯ ಅಹಿಂಸಾವಾದ ಒಂದು ವೈಯಕ್ತಿಕ ಆಧ್ಯಾತ್ಮಿಕ ಆಚರಣೆ. ಇದರರ್ಥ, ಅಹಿಂಸೆಯು ಆಧ್ಯಾತ್ಮಿಕವಾದ, ಅ–ಚಾರಿತ್ರಿಕವಾದ ಕಲ್ಪನೆ. ಗಾಂಧಿಯೇ ಅದನ್ನು ಚರಿತ್ರೆಯನ್ನೂ ಮೀರಿದ ಶಕ್ತಿಯೆಂದೂ ಸಮಾಜ ಹಾಗೂ ಅದರ ಸದಸ್ಯರು ಅದನ್ನು ಅನುಸರಿಸಬೇಕೆಂದೂ ಹೇಳುತ್ತಾರೆ.

ಇನ್ನು, ಗಾಂಧಿಯ ವಿಚಾರಗಳು ಹೆಚ್ಚು ಹೆಚ್ಚು ಆಧ್ಯಾತ್ಮಿಕವಾಗಿ ಕೆಲಸ ಮಾಡುತ್ತವೆಯೋ ಹೊರತು ಚಾರಿತ್ರಿಕವಾಗಿ ಅಲ್ಲ ಎಂಬುದಕ್ಕೆ ಒಂದು ಉದಾಹರಣೆಯನ್ನು ನೋಡೋಣ. ಅದೂ ಹವಾನಿಯಂತ್ರಿತ ಹಿಂದೂ ರಥಗಳು–ಅಕ್ಷರಶಃ ಹಾಗೂ ರೂಪಕವಾಗಿ ಕೂಡ–ಅಡ್ಡಾಡುತ್ತಿರುವ ಈ ಹೊತ್ತಿನಲ್ಲಿ ಈ ಉದಾಹರಣೆ ತನ್ನ ಉದಾರತೆ ಹಾಗೂ ಕಾಣ್ಕೆಯಿಂದಾಗಿ ಮುಖ್ಯವಾಗುತ್ತದೆ. ಗೋರಕ್ಷಣೆಯ ಮಾತು ಬಂದಾಗ ಗಾಂಧಿ ಹೇಳುತ್ತಾರೆ: "ನಾನು ಗೋವನ್ನು ಹೇಗೆ ಗೌರವಿಸುತ್ತೇನೋ ಹಾಗೆಯೇ ಜನರನ್ನೂ

ಗೌರವಿಸುತ್ತೇನೆ. ಒಬ್ಬ ಮನುಷ್ಯ, ಅವನು ಮುಸ್ಲಿಮನಾಗಿರಲಿ, ಹಿಂದೂ ಆಗಲೀ, ನನಗೆ ಗೋವಿನಷ್ಟೇ ಮುಖ್ಯ. ಹಾಗಾದರೆ ಗೋವನ್ನು ಉಳಿಸಿಕೊಳ್ಳಲು ನಾನು ಮುಸ್ಲಿಮನೊಡನೆ ಜಗಳವಾಡಬೇಕೆ? ಅವನನ್ನು ಕೊಲ್ಲಬೇಕೆ? ಹಾಗೆ ಮಾಡಿದ್ದಾದರೆ ನಾನು ಮುಸ್ಲಿಂ ಹಾಗೂ ಗೋವು ಇಬ್ಬರಿಗೂ ಶತ್ರು. ಆದ್ದರಿಂದ ಗೋವನ್ನು ರಕ್ಷಿಸುವ ಒಂದೇ ಒಂದು ಮಾರ್ಗವೆಂದರೆ, ನಾನು ನನ್ನ ಮುಸ್ಲಿಂ ಬಂಧುವನ್ನು ಕಂಡು ದೇಶದ ದೃಷ್ಟಿಯಿಂದ, ಗೋರಕ್ಷಣೆಗಾಗಿ ನನ್ನ ಜೊತೆ ಸೇರುವಂತೆ ಕೋರುವೆ. ಅವನು ನನ್ನ ಮಾತು ಕೇಳದಿದ್ದರೆ ನಾನು ಗೋವನ್ನೇ ಕೈಬಿಡಬೇಕಾಗುತ್ತದೆ....ಗೋವಿನ ಬಗೆಗೆ ನನಗೆ ತೀರಾ ಕರುಣೆಯಿದ್ದರೆ ನನ್ನ ಜೀವವನ್ನು ಬಲಿಗೊಟ್ಟು ಅದನ್ನು ರಕ್ಷಿಸಬೇಕೇ ಹೊರತು ನನ್ನ ಸೋದರನ ಜೀವವನ್ನು ಬಲಿತೆಗೆದುಕೊಳ್ಳುವುದರ ಮೂಲಕ ಅಲ್ಲ." (ಹಿಂದ್ ಸ್ವರಾಜ್, 1908.)

ಆದರೆ ಈ ನಿಲುವು ಯಾವುದೇ ಒಂದು ವಿಧಾನವನ್ನು ಅನುಸರಿಸಿ ಹುಟ್ಟಿದ್ದಲ್ಲ, ಬದಲಿಗೆ ಚೇತನಕ್ಕೆ ಸಂಬಂಧಿಸಿದ್ದು. ಇಲ್ಲೇ ನನಗನಿಸುವುದು: ಗಾಂಧಿಯ ನಿಲುವುಗಳು ಚರಿತ್ರೆಯ ಪ್ರಕ್ರಿಯೆಯನ್ನೇ ಧಿಕ್ಕರಿಸುತ್ತವೆ ಮತ್ತು ಅ-ಚಾರಿತ್ರಿಕವಾಗುತ್ತದೆ. ಗಾಂಧಿಯ ಈ ಅ–ಚಾರಿತ್ರಿಕ ಸ್ವರೂಪವನ್ನು ನಾವಿಂದು ಚರಿತ್ರೆಯ ಜೊತೆಗಿಟ್ಟು ನೋಡಿ, ಈ ಹೊತ್ತು ಅವು ನಮಗೇನನ್ನು ಹೇಳುತ್ತವೆಂಬುದನ್ನು ಅರಿಯಬೇಕಾಗಿದೆ.

ಗಾಂಧಿ ಮತ್ತು ಚರಿತ್ರೆಯ ನಡಿಗೆ

ಗಾಂಧಿಯ ಅಹಿಂಸಾವಾದದ ಜೊತೆಗೇ ಗಾಂಧಿಯ ಗ್ರಾಮ ಕುರಿತ ವಿಚಾರಗಳು, ಸಂಪ್ರದಾಯ, ಪದ್ಧತಿ ಕುರಿತ ನಿಲುವುಗಳನ್ನು ಆಧುನಿಕ ಪ್ರಭುತ್ವದ ಹಿನ್ನೆಲೆಯಲ್ಲಿ ಮರುಪರಿಶೀಲಿಸಬೇಕು. ಭಾರತೀಯ ಗ್ರಾಮದಲ್ಲಿ ಗಾಂಧಿಗಿದ್ದ ನಂಬಿಕೆ, ದೇಸೀ ಸಂಪ್ರದಾಯಗಳು ಹಾಗೂ ಹಿಂದೂ ಧರ್ಮದ ಬಗೆಗಿದ್ದ ಆಳವಾದ ಗೌರವ, ಮತ್ತು ಅಹಿಂಸೆಯೊಂದೇ ಋಜುವಾದ ಮಾರ್ಗ ಎಂಬ ದೃಷ್ಟಿಕೋನ–ಇವೆಲ್ಲಾ ಈವತ್ತು ತಮ್ಮ ಅರ್ಥ ಕಳೆದುಕೊಂಡಿವೆ. ಯಾಕೆಂದರೆ ಈ ಎಲ್ಲ ನಿಲುವುಗಳು ಇಂದು ಮೇಲುಜಾತಿಯ ಹಿಂದೂಗಳು ಅಥವಾ ಆಳುವ ವರ್ಗದ ಹಿತಗಳನ್ನು ಮಾತ್ರ ರಕ್ಷಿಸುವಂತೆ ಕಾಣುತ್ತವೆ. ಫ್ಯೂಡಲಿಸಮ್ಮಿನ ಕ್ರೌರ್ಯದ ಜೊತೆಗೆ ಫ್ಯೂಡಲ್ ಜಮೀನ್ದಾರ, ಕಾನೂನು ಹಾಗೂ ಪ್ರಭುತ್ವಗಳೂ ಬೆರೆತುಹೋಗಿ, ಹಳ್ಳಿಯೆಂದರೆ ಶಾಂತಿ ಹೊಂದಾಣಿಕೆಯ ಹಾಗೂ ಮುಗ್ಧ ರೈತನಿರುವ ಆದರ್ಶ ಸಮಾಜ ಎಂಬ ಚಿತ್ರ ಎಂದೋ ಬದಲಾಗಿಹೋಗಿದೆ. ಇಂದು ಹಿಂದೂ ಸಂಪ್ರದಾಯಗಳ ಕುರಿತು ಮಾತಾಡುವುದೆಂದರೆ ಯುಗಗಳಿಂದ ಮನುಷ್ಯನ ಮೂಲಭೂತ ಘನತೆಯನ್ನೇ ನಾಶಮಾಡಿದ ಜನಾಂಗವೊಂದರ ಕುರಿತು ಮಾತಾಡಿದಂತೆ. ಈ ಹೊತ್ತು ಭುಗಿಲೆದ್ದಿರುವ ಹಿಂದೂ ಪುನರುತ್ಥಾನದ ಕೂಗು ನಾಚಿಕೆಗೇಡಿನ ಭಾವನೆ

ನ್ನಲ್ಲದೆ ಬೇರಿನ್ಯಾವ ಭಾವನೆಯನ್ನೂ ಹುಟ್ಟಿಸಲಾರದು. ಕ್ರೂರ ಪ್ರಭುತ್ವದೆದುರು ಂಸೆಯು ಮಾತಾಡುವುದೆಂದರೆ ಶೋಷಿತರು ಉಸಿರೆತ್ತದೆ ಶರಣಾಗುವುದೆಂದೇ ಅರ್ಥ. ್ರರ ಸರ್ವಾಧಿಕಾರಿಯೆದುರು ತಮ್ಮ ಆತ್ಮದ ಸದ್ಗುಣಗಳನ್ನು ವೈಭವೀಕರಿಸಲು ಮ್ಮನ್ನು ತಾವೇ ಬಲಿಕೊಡಬಹುದೆಂದು ಇದರ ಅರ್ಥ. ಆದ್ದರಿಂದ ಈ ಹೊತ್ತು ನ್ಯಾತ್ಮವಾದ ಅಮಾನವೀಯವಾಗಿ ಹಾಗೂ ಪ್ರಭುತ್ವದ ಭಯೋತ್ಪಾದಕತೆ ನ್ನರಿಯದವರು ಮಾತ್ರ ಆಡಬಲ್ಲ ಮಾತಾಗಿ ಕಾಣುತ್ತದೆ. ದಬ್ಬಾಳಿಕೆಯ ಎದುರು ಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿರುವ ಲಕ್ಷಾಂತರ ಮಂದಿಗೆ ಆತ್ಮದ ಸದ್ಗುಣ ನ್ನು ವೈಭವೀಕರಿಸುವ ಉಪದೇಶ ಕೊಡುವುದು ಅಮಾನವೀಯವಾದದ್ದು. ಹೀಗಾಗಿ ಂಧಿಯ ಪ್ರಭುತ್ವದ ಕಲ್ಪನೆಯಿಂದ ಪ್ರಯೋಜನ ಪಡೆಯಬಲ್ಲವರೆಂದರೆ ಆಳುವ ರ್ಗಗಳು ಮಾತ್ರ. ಲ್ಯಾಟಿನ್ ಅಮೆರಿಕಾ ಹಾಗೂ ಆಫ್ರಿಕನ್ ದೇಶಗಳಲ್ಲಿ ಧರ್ಮ ತ್ತು ಚರ್ಚ್ ಕೂಡ ಹಿಂಸಾತ್ಮಕ ಕ್ರಾಂತಿಯ ಪರವಾಗಿ ನಿಂತಿರುವ ಈ ಸಂದರ್ಭದಲ್ಲಿ ಂಧಿಯ ನಿಲುವುಗಳನ್ನು ಚರಿತ್ರೆಯು ಕೇಳುವ ಪ್ರಶ್ನೆಗಳ ನಡುವೆ ಇರಿಸಿ ನೋಡ ೇಕು. ಆದ್ದರಿಂದಲೇ ಇಂದು ವರ್ತಮಾನದ ಅರಿವಿದ್ದವನೊಬ್ಬ ಗಾಂಧೀವಾದದ ೊತೆಗೆ ಸುಮಧುರ ಸಂಬಂಧ ಇಟ್ಟುಕೊಳ್ಳಲಾರನೇನೋ. ಚರಿತ್ರೆಯ ವ್ಯಂಗ್ಯ–ಇದು ಾನವ ನಾಗರಿಕತೆಯ ಕಹಿ ಸತ್ಯ ಕೂಡ–ಎಷ್ಟು ದೊಡ್ಡದೆಂದರೆ ಅದನ್ನು ಉಪೇಕ್ಷಿಸು ದು ಸಾಧ್ಯವೇ ಇಲ್ಲ.

ಾಗರಿಕ ಸಮಾಜದ ಆಯ್ಕೆಗಳು

> Each of us is responsible for
> everything and to every human being
>
> — **Dostoevsky**

ಅಹಿಂಸೆ ನಮ್ಮ ಬದುಕಿನ ಭಾಗವಾಗಲೇಬೇಕೆಂದರೆ, ನಾಗರಿಕ ಸಮಾಜದಲ್ಲಿ ದುಕುವ ನಾವು ಈ ಕೆಳಕಂಡ ಎರಡು ಅಂಶಗಳ ಬಗೆಗೆ ಸ್ಪಷ್ಟವಾದ ನಿಲುವುಗಳನ್ನು ೆಯಲೇಬೇಕು :

ಒಂದು : ನಾಗರಿಕ ಹಕ್ಕುಗಳ ಚಳವಳಿಯ ಮೂಲಕ ಪ್ರಭುತ್ವದ ಭಯೋತ್ಪಾದನೆ ಂನ್ನು ವಿರೋಧಿಸುವುದು. ಆಧುನಿಕ ಪ್ರಭುತ್ವಕ್ಕಂತೂ ಎಲ್ಲ ಚಳವಳಿಗಳೂ ರಾಷ್ಟ್ರ ರೋಧಿಯಾಗಿಯೇ ಕಾಣುತ್ತವೆ. ಇದೇ ಘಟ್ಟದಲ್ಲಿ ಹಲವಾರು ರಾಷ್ಟ್ರಗಳು ತಿಳಿದೋ ತಿಳಿ ಂದೆಯೋ ಇಂಪೀರಿಯಲಿಸ್ಟ್ ರಾಷ್ಟ್ರಗಳು ಹುಟ್ಟುಹಾಕಿದ ಅಂತಾರಾಷ್ಟ್ರೀಯ ಸಂಚಿನ ಗವಾಗಿವೆ ಎಂಬುದನ್ನು ಅರಿಯಬೇಕು. ಪ್ರಭುತ್ವವಂತೂ ತನ್ನನ್ನು ಪ್ರಶ್ನಿಸುವ

ಯಾವ ಚಟುವಟಿಕೆಯನ್ನೂ ಸಹಿಸುವುದಿಲ್ಲ. ನಾಗರಿಕ ಹಕ್ಕುಗಳ ಚಳವಳಿಯನ್ನು ಕೂಡ 'ಭಯೋತ್ಪಾದಕತೆ' ಅಥವಾ 'ರಾಷ್ಟ್ರವಿರೋಧಿ ಏಜೆಂಟ'ರೆಂದು ಪ್ರಭುತ್ವ ಕರೆಯುತ್ತದೆ. ಪ್ರಭುತ್ವ ನಿರೀಕ್ಷಿಸುವ ಗುಲಾಮಗಿರಿ ಎಲ್ಲಿಗೆ ತಲುಪಿದೆಯೆಂದರೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಕೂಡ ಈ ಹೊತ್ತು ಪೋಲೀಸ್ ಸರ್ಟಿಫಿಕೇಟ್ ಬೇಕು. ಪ್ರಭುತ್ವದ ಇಂಥ ಭಯೋತ್ಪಾದಕತೆಯನ್ನು ಖಂಡಿಸದೇ, ಸಿಟ್ಟಿಗೆದ್ದ ಜನ ಹುಟ್ಟುಹಾಕುವ ಹಿಂಸೆಯನ್ನು ಮಾತ್ರ ಖಂಡಿಸುವುದು 'ಸಭ್ಯ' ಹಾಗೂ 'ಆರಾಮದ' ಮಧ್ಯಮ ವರ್ಗದ ಮತ್ತು ಆ ಮಧ್ಯಮ ವರ್ಗದ ಬುದ್ಧಿಜೀವಿಗಳ ಹಿಪಾಕ್ರಸಿ ಮಾತ್ರ.

ಎರಡು : 'ಬಂಡುಕೋರರು' ಅಥವಾ 'ಸಮಾಜ ವಿರೋಧಿಗಳು' ಎಂದು ಯಾರನ್ನು ಪ್ರಭುತ್ವ ಕರೆಯುತ್ತದೋ ಅವರಿಗೆ ದನಿ ಕೊಡುವ ಅಗತ್ಯವನ್ನು ನಾಗರಿಕ ಸಮಾಜದ ಎಲ್ಲರೂ ಮನಗಾಣಬೇಕು. ಈ ಜಗತ್ತಿನ ಕ್ರೌರ್ಯ, ಹಸಿವು ಮತ್ತು ಬಡತನ ಕಂಡು ನಾವು ತಪ್ತರಾಗುವಂತೆಯೇ, ನೊಂದವರು ಸ್ಫೋಟಿಸಿದ ಹಿಂಸೆಗೆ ನಾವು ಕೂಡ ಕಾರಣರೇ ಎಂಬುದನ್ನು ಅರಿಯಬೇಕು. ಇಲ್ಲಿ ಹುಟ್ಟುವ ಹಿಂಸೆ ನಮ್ಮ ತಪ್ಪುಗಳ ಹಾಗೂ ಬರ್ಬರತೆಯ ಪರಿಣಾಮವಾಗಿ ಕೂಡ ಹುಟ್ಟಿರಬಹುದೆಂಬ ಅರಿವು ನಮಗಿರಬೇಕು. ಈ ಹಿಂಸೆ ಮಾತ್ರ ನಮ್ಮನ್ನು ಬೆಚ್ಚಿಬೀಳಿಸಿ ಪ್ರಭುತ್ವದ ಹಿಂಸೆ ನಮಗೆ ಗೋಚರವಾಗದಿದ್ದರೆ ನಮ್ಮ ಪ್ರತಿಕ್ರಿಯೆ ಕೇವಲ ನಟನೆಯಾಗಿಬಿಡುತ್ತದೆ. ನಮಗೆ ಗಾಂಧಿಯ ಅಹಿಂಸಾವಾದದಲ್ಲಿ ನಂಬಿಕೆಯಿದ್ದರೆ ಮೊದಲು ಪ್ರಭುತ್ವದ ಹಿಂಸೆಯನ್ನು ಪ್ರತಿಭಟಿಸಬೇಕು. 'ಸಮಾಜ ವಿರೋಧಿ'ಗಳ ಹಿಂಸೆಯನ್ನು ಖಂಡಿಸುವುದು ಸುಲಭ. ಆದರೆ, ಪ್ರಭುತ್ವವೇ ಭಯೋತ್ಪಾದಕ ಎಂದು ಘೋಷಿಸುವ ಎದೆಗಾರಿಕೆಯನ್ನು ನಾವು ಕಲಿಯಬೇಕು ಹಾಗೂ ಹಿಂಸೆ ಮತ್ತು ಅಹಿಂಸೆ ಎರಡನ್ನೂ ಅವುಗಳ ಚಾರಿತ್ರಿಕ ಸಂದರ್ಭವನ್ನು ಗುರ್ತಿಸಿ ಚರಿತ್ರೆಯ ಹಿನ್ನೆಲೆಯಲ್ಲೇ ನೋಡಬೇಕು. ಹಿಂಸೆಯ "ಚಾರಿತ್ರಿಕ ಅರ್ಥ"ವನ್ನು ಅರಿಯುವುದೆಂದರೆ, "ತುಳಿಯಲ್ಪಟ್ಟವರ ಚರಿತ್ರೆ"ಯನ್ನು ಗುರುತಿಸುವುದೆಂದೇ ಅರ್ಥ. ಎಲ್ಲಿಯತನಕ ಪ್ರಭುತ್ವದ ಹಿಂಸೆ ಕ್ರೂರ ವಾಸ್ತವವಾಗಿರುತ್ತದೋ ಅಲ್ಲಿಯತನಕ ಅಹಿಂಸೆ ಕೇವಲ ಆದರ್ಶದ, ಆಧ್ಯಾತ್ಮಿಕ ನಿಲುವಾಗಿ ಬಿಡುತ್ತದೆ. ಅದಕ್ಕಾಗಿಯೇ "ಎಲ್ಲದಕ್ಕೂ" ನೈತಿಕ ಹೊಣೆಗಾರರಾಗಿರಬೇಕಾದ ಅಗತ್ಯ ಇಂದು ಎಂದಿಗಿಂತ ಹೆಚ್ಚು. ಇದು ಆತ್ಮಸಾಕ್ಷಿಯ ಮಾತಲ್ಲ, ಬದಲಿಗೆ ನೈತಿಕ ಹಾಗೂ ಅತ್ಯಗತ್ಯವಾದ ಕರ್ತವ್ಯ. ಇದು, ನೊಂದವರ ಚರಿತ್ರೆಯಿಂದ ನಮ್ಮ ಮೇಲೆ ಅನಿವಾರ್ಯವಾಗಿ ಹೇರಲ್ಪಟ್ಟ ಕರ್ತವ್ಯ. ನಮ್ಮ ರಾಜಕೀಯ ನಡೆಯೇ ನಮ್ಮ ನೈತಿಕ ನಿಲುವನ್ನು ನಿರ್ಧರಿಸುವುದರಿಂದ ಈ ಕರ್ತವ್ಯಪಾಲನೆಯಿಂದ ಮಾತ್ರ ಅಹಿಂಸೆಗೆ ಅರ್ಥ ತರಬಹುದಾಗಿದೆ. ಚರಿತ್ರೆಯ ವ್ಯಂಗ್ಯ

ನ್ನು ಕಂಡೂ ಕೂಡ ಮುಗ್ಧರಂತೆ ನಟಿಸುವುದು ಮತ್ತೆ ಮತ್ತೆ ಪ್ರಭುತ್ವದ ಹಿಂಸೆಯನ್ನೇ ಬೆಂಬಲಿಸಿದಂತೆ ಎಂಬುದನ್ನೂ ನಾವು ಮನಗಾಣಬೇಕಾಗಿದೆ.

ಅಲ್ಲದೆ, ಹಿಂಸೆಯನ್ನು ಸ್ಫೋಟಿಸುತ್ತಿರುವ ಬಂಡುಕೋರರು ಕೂಡ ಈ ಹಿಂಸಾ ಸ್ಫೋಟವನ್ನು ಸಂಭ್ರಮದಿಂದ ಆಚರಿಸುತ್ತಿಲ್ಲ ಎಂಬುದನ್ನು ನಾನು ಒತ್ತಿ ಹೇಳುತ್ತೇನೆ. ಇತರರಿಗೆ ನೋವನ್ನು ತಂದೊಡ್ಡುವ ಅನಿವಾರ್ಯ ಸ್ಥಿತಿಗೆ ತಳ್ಳಲ್ಪಟ್ಟಿರುವ ಈ ಬಂಡುಕೋರರ ಅಸಹಾಯಕತೆಯನ್ನು ನಾವು ಗುರ್ತಿಸಬೇಕು. ಚಾರಿತ್ರಿಕ ಸಂದರ್ಭದಲ್ಲಿ ಹಿಂಸೆ ಹಾಗೂ ಅಹಿಂಸೆ ಎರಡನ್ನೂ ಒಟ್ಟೊಟ್ಟಿಗೇ ಇಟ್ಟು ನೋಡಿದಾಗ ಮಾತ್ರ ಹಿಂಸೆಯ ಹುಟ್ಟು ನಮಗೆ ಅರಿವಾಗುವುದು. ಆಗಲೇ ಅಹಿಂಸೆಯ ಸಾಧ್ಯತೆಯೆಡೆ ಹೊರಳಿ ನೋಡಲು ಮತ್ತು ಅದನ್ನು ವಾಸ್ತವವನ್ನಾಗಿಸಲು ಪ್ರಯತ್ನಿಸುವುದು ಕೂಡ ಸಾಧ್ಯವಾಗುವುದು. ಇದು ಈ ಹೊತ್ತಿನ ವಾಸ್ತವ.

ಈ ವಾಸ್ತವಕ್ಕೆ ಮುಖ ತಿರುಗಿಸುವುದೆಂದರೆ, ಚರಿತ್ರೆಯ ವ್ಯಂಗ್ಯವನ್ನು ಮುಂದುವರಿಸುವುದಷ್ಟೇ ಅಲ್ಲ, ಬರ್ಬರ ಯಜಮಾನಿಕೆಯ ಪ್ರಭುತ್ವದ 'ಚರಿತ್ರೆ'ಯನ್ನೂ ಕೂಡ ಮುಂದುವರಿಸುವುದೆಂದೇ ಅರ್ಥ.

ಇಂಥ ದಬ್ಬಾಳಿಕೆಯ ಪ್ರಭುತ್ವವನ್ನು ಪ್ರಶ್ನಿಸುವುದರಿಂದಲೇ ಈ ಹೊತ್ತಿನ ಅಹಿಂಸಾವಾದ ಹುಟ್ಟಬೇಕಾಗಿದೆ. ●

ಕನ್ನಡಕ್ಕೆ : ನಟರಾಜ್ ಹುಳಿಯಾರ್

...ಸಾವು

ಮೊಳಕೆ ಹಸಿಮಣ್ಣುದೂಡಿ ಹೊರಗಿಣುಕಿ ಕಣ್ಬಿಟ್ಟಾಗ
ಮೇಲೆ ರವಿ ಬರೆದ ರಂಗುರಂಗಿನ ಕನಸ ಚಾವಣಿ,
ದೂರದಲ್ಲೆಲ್ಲೊ ಕಾಲತುಳಿತ, ಕುತೂಹಲ, ಭಯ.
ಚಿಗುರೊಡೆಯುತ್ತ ತಾಯಿ ಕಥೆಯ ಪದರೊಳಗೆ
ತಣ್ಣಗೆ ಹುದುಗಿ ಕುಳಿತ ಕೋರೆದಾಡೆಯ ಕೆಂಗಣ್ಣ ಚೋರ,
ಮುಗ್ಧಮನಕೆ ಮುಟ್ಟಲಾಗದ ನುಣ್ಣನೆಯ ದೂರದ ಬೆಟ್ಟ.
ಗಿಡ ಮರವಾದಂತೆ ಎಲ್ಲ ಮಾಮೂಲಿ, ಸರಿದ ವಿಸ್ಮಯ
ನಡುಹಗಲಿನಲಿ ಅಡಿ ಸೇರಿದ ಕತ್ತಲು,
ಬಿಸಿಲುಂಡ ಹಸಿರು ಚೈತ್ರಕ್ಕೆ ಹಳದಿಯ ವಿಸ್ಮರಣೆ.
ಆದರೂ ವರ್ತಮಾನದ ಮುಖಪುಟದ ಕಪ್ಪು ಅಕ್ಷರದಲಿ
ರಾಚಿದ ಹಗಲು ದರೋಡೆಯ ಚಿತ್ರಕ್ಕೆ
ಅಯ್ಯೋ! ಅಬ್ಬಾ! ಪಾಪ! ಸಧ್ಯ ನಮ್ಮಲ್ಲಲ್ಲ! ನಿಟ್ಟುಸಿರು,

ಯು. ಆರ್. ಲಲಿತಾ, 'ಮಥುರಾ', 325/ಎಚ್', 9ನೇ ಕ ಮುಖ್ಯರಸ್ತೆ, ವಿಜಯನಗರ
ಬೆಂಗಳೂರು-560 040

ಒಳಗೇ ಕೋಣೆಯಲಿ ಮಲಗಿದ ಮಿಂಡಿನಾಗರ.
ಸಂಧ್ಯಾರಾಗಕ್ಕೆ ಮಸಿ ಹಿಡಿದ ಮುಸ್ಸಂಜೆಯ ಕಾವಳದಿ
ಚಲಿಸುವ ದೀಪಕ್ಕೆ ಗೋಡೆಯ ತುಂಬಾ
ಅಕರಾಳ ವಿಕರಾಳ ನೆರಳುಗಳ ಕುಣಿತ
ಕೂಡಿ ಕಳೆದು ಗುಣಿಸಿ ಭಾಗಿಸುವಾಗ ಶೇಷ ಶೂನ್ಯ.
ಗಾಳಿ ಬೆಳಕು ನೀರಿನ ಚಲನೆಯ ಸೆಳೆತಕೆ
ಗಟ್ಟಿ ಹಿಡಿಯಲಾಗದ ಕಸಿವಿಸಿ, ಬಿಸಿಲ್ಗುದುರೆ.
ಮೂಲೆ ಸೇರಿದ ದೇವರುಗಳು ಹೊರಬಂದು
ಥಳಥಳ ಪೀಠವೇರಿ, ಮನವೆಲ್ಲ ಕಾಶಿ, ರಾಮೇಶ್ವರ.
ಪಕ್ಕದಲ್ಲೆ ಚೋರ ಕನ್ನ ಹಾಕಿದ ರಭಸಕ್ಕೆ
ಜೀವ ಝಲ್ಲೆಂದು ಬೆವರಿ ಕಿಟಕಿ ಬಾಗಿಲು ಭದ್ರಿಸಿ
ದೊಣ್ಣೆ ಹಿಡಿದು ಕಳ್ಳನಿಗಾಗಿ ಕಾಯುತ್ತ ಕುಳಿತಾಗ
ಪರೀಕ್ಷಿತನ ಬಳಿಗೆ ಹಣ್ಣೊಳಗಿಂದ ಬಂದ ತಕ್ಷಕ.
ಹೊರಗೆ ಮತ್ತೆ ಮಿದು ಮಣ್ಣೊಡೆದು ನಿಂತ ಬೀಜ.

— ಯು. ಆರ್. ಲಲಿತಾ

ಪಂಪಭಾರತದ 4ನೇ ಆಶ್ವಾಸ 41ನೇ ಪದ್ಯದ ಅನ್ವಯಕ್ರಮ ಮತ್ತು ಅರ್ಥವಿವರಣೆ

— ಕೆ. ಎಸ್. ಮಧುಸೂದನ

1.1 ಪಂಪಭಾರತದ ಪ್ರಸ್ತುತ ಪದ್ಯದ ಅನ್ವಯಕ್ರಮ ಮತ್ತು ಅರ್ಥನಿರ್ಣಯ ಈ ಕಿರುಟಿಪ್ಪಣಿಯ ಉದ್ದೇಶ.

1.2 ಪದ್ಯ

ಒದವಿದ ತನ್ನ ಜವ್ವನದ ರೂಪಿನ ವೆಂಪ್ಯೊ[1]ಳೆ ತಪ್ಪುದಪ್ಪ ನೋ ।
ಟದೊಳೆ ಪೊಡ[2]ರ್ಪು ತಪ್ಪ ಬಗೆ ತಪ್ಪ ಮನೋಜನ ಪೂವಿನಂಬು ಕೀ ॥
ವಿದ ದೊಣೆ[3]ಕೀವಿ ತನ್ನನಿಸೆ ಜಾಣನೆ ತಪ್ಪದೆ ತಪ್ಪುದಪ್ಪ ನೋ ।
ಡಿದುಂದದಟಿಂ ಗುಣಾರ್ಣವನನಾ ಸತಿ ತಪ್ಪದೆ ತಪ್ಪ ನೋಟದೊಳ್ ॥

1. ಯೊಳಂತು (ಖ) ಳಳಂತು (ಫ), ಳಳತರ್ು (ಪ); 2. ದರ್ು (ಕ.ಖ); 3. ಕೀಱಿ (ಗ.ಫ)

ಕೆ.ಎಸ್. ಮಧುಸೂದನ, ಎಂ.ಎ; ಎಂ.ಫಿಲ್; ರೀಡರ್, ಕನ್ನಡ ವಿಭಾಗ, ಆಚಾರ್ಯ ಪಾಠಶಾಲ ಕಲೆ ಮತ್ತು ವಿಜ್ಞಾನ ಕಾಲೇಜು, ನರಸಿಂಹರಾಜ ಕಾಲೋನಿ, ಬೆಂಗಳೂರು–560 019

.1 'ಪಂಪಭಾರತ ದೀಪಿಕೆ'ಯಲ್ಲಿ ಡಾ॥ ಡಿ. ಎಲ್. ನರಸಿಂಹಾಚಾರ್ ಅವರು ಈ ಪದ್ಯವನ್ನು ಕುರಿತು ಹೀಗೆ ಹೇಳಿದ್ದಾರೆ:

"ಈ ಪದ್ಯಕ್ಕೆ ಅರ್ಥಾನ್ವಯಾದಿಗಳು ವಿಶದವಾಗಿ ತಿಳಿದುಬರುವುದಿಲ್ಲ; ಪಾಠ ಕ್ಲೇಶಗಳೇನಿವೆಯೋ, ಅವೂ ಅಜ್ಞಾತವಾಗಿವೆ; ಒದವಿದ–ಉಂಟಾದ, ತನ್ನ, ಜವ್ವನದ–ಯೌವ್ವನದ, ರೂಪಿನ–ಆಕಾರದ, ಮೆಯ್ಯೊಳೆ–ದೇಹದಲ್ಲಿಯೇ, ತಪ್ಪುದಪ್ಪುನೋಟದೊಳೆ–ತಪ್ಪುತಪ್ಪಾದ ನೋಟದಲ್ಲಿಯೇ, ಪೊಡರ್ಪು–ಸ್ಫುರಣೆಯು ಎಂದರೆ (ಮೈಯಲ್ಲಿ) ಕಂಪನವು, ತಪ್ಪು–ಸರಿಯಾದುದಲ್ಲ, ಬಗೆ–ಇಂಗಿತ (ನೋಟದಲ್ಲಿನ), ತಪ್ಪು–ಸರಿಯಾದುದಲ್ಲ; ಮನೋಜನ–ಮನ್ಮಥನ, ಪೂವಿನಂಬು–ಹೂವಿನ ಬಾಣ, ತೀವಿದ–ತುಂಬಿದ, ದೊಣೆ–ಬತ್ತಳಿಕೆ, ತೀವಿ–ತುಂಬಿ, ತನ್ನು–ತನ್ನನ್ನು, ಇಸೆ–ಹೊಡೆಯಲು, ಆ ಸತಿ–ಸುಭದ್ರೆ, ತಪ್ಪದೆ–ಬಿಡದೆ, ತಪ್ಪು ನೋಟದೊಳ್–ಜಾರು ನೋಟದಲ್ಲಿ, ಅಪ್ಪ ನೋಡಿದುದಱು–ಅಪ್ಪಿಕೊಳ್ಳಲು ನೋಡಿದ್ದರಿಂದ, ಜಾಣನೆ–ಜಾಣತನವನ್ನೆ, ತಪ್ಪದೆ–ಬಿಡದೆ, ತಪ್ಪುದು–ನಾಶಮಾಡಿತು; ಇಲ್ಲಿ ತಪ್ಪುದು ಎಂಬ ಕ್ರಿಯಾಪದ ಗಮನಾರ್ಹ; ತವು–ಕ್ಷಯೇ ಎಂಬ ಧಾತುವಿಗೆ ದದಪಾದಿ ಪ್ರತ್ಯಯಂಗಳು ಪರವಾದಾಗ ಅದರ ಕೊನೆಯ ಅಕ್ಷರಕ್ಕೆ ಎಂದರೆ ವುಗೆ ಪಕಾರಾದೇಶವಾಗುತ್ತದೆ (ಶಮದ ೨೬೧; ಶಬ್ದಾನು ೪೮೦) ಹೀಗೆ ತವು + ದ = ತಪ್ಪ ಆಗಿ ಅದಕ್ಕೆ ನಪುಂಸಕದ ಏಕವಚನ–ಉದು ಸೇರಿ ತಪ್ಪುದು–ನಾಶ ಮಾಡಿತು ಎಂಬರ್ಥದ ಕ್ರಿಯಾಪದವಾಗುತ್ತದೆ. ಈ ಪದ್ಯದಲ್ಲಿರುವ ಉಳಿದ 'ತಪ್ಪು' ಪ್ರಯೋಗಗಳು 'ತಪ್ಪು–ಸ್ಖಲನೇ' ಎಂಬ ಧಾತುವಿಗೆ ಸಂಬಂಧಿಸಿದುವು; ಇದು ನಾಮಪದವೂ ಆಗಬಹುದು. ಅಪ್ಪ ನೋಡಿದುದು = ಅಪ್ಪಲ್–ನೋಡಿದುದು; ಇಲ್ಲಿ ಅಲ್ ಪ್ರತ್ಯಯ ಲೋಪ ವಾಗಿದೆ, ತರಲ್‌ವೇಟ್ = ತರವೇಟ್, ಬರಲ್ + ವೇಟ್–ಬರವೇಟ್ ಎಂಬೆಡೆಗಳಲ್ಲಿ ಇರುವಂತೆ.

.2 ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪನವರು ಸಂಪಾದಿಸಿರುವ 'ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ' ಕೃತಿಯ 'ಪಂಪನ ವಿಕ್ರಮಾರ್ಜುನ ವಿಜಯದ ಕಥೆ' ಎಂಬ ಹೊಸಗನ್ನಡ ಅನುವಾದ ಭಾಗದಲ್ಲಿ ಪ್ರಸ್ತುತ ಪದ್ಯಕ್ಕೆ ಸಂಬಂಧಿಸಿದ ಭಾಗ ಹೀಗಿದೆ: "ಆಗ ಸುಭದ್ರೆಯು ಮೋಹಪರವಶಳಾಗಿ ಅರ್ಜುನನನ್ನು ತಪ್ಪು ನೋಟದಿಂದ ತಪ್ಪದೆ ನೋಡಿದಳು."

.3 ಕನ್ನಡ ಸಾಹಿತ್ಯ ಪರಿಷತ್ತಿನ ಹೊಸಗನ್ನಡ ಗದ್ಯಾನುವಾದ ಮಾಲೆಯ 'ಪಂಪಕವಿ ವಿರಚಿತ ಪಂಪಭಾರತಂ' ಕೃತಿಯಲ್ಲಿ ಗದ್ಯಾನುವಾದಕಾರ ಶ್ರೀ ಎನ್. ಅನಂತ ರಂಗಾಚಾರ್ ಅವರು ಪ್ರಸ್ತುತ ಪದ್ಯವನ್ನು ಈ ರೀತಿ ಅನುವಾದಿಸಿದ್ದಾರೆ:

"ಆಗ ಅವಳಿಗೆ ಯಂವ್ವನಪ್ರಾಪ್ತವಾದ ಶರೀರದ ಸೌಂದರ್ಯವು ಅಸ್ತವ್ಯಸ್ತ ವಾಯಿತು. ನೋಟದಲ್ಲಿನ ಉತ್ಸಾಹವೂ ಅಸ್ತವ್ಯಸ್ತವಾಯಿತು. ಮನಸ್ಸೂ ಅಸ್ತವ್ಯಸ್ತವಾಯಿತು. ಮನ್ಮಥನು ಪುಷ್ಪಬಾಣದಿಂದ ತುಂಬಿದ ಬತ್ತಳಿಕೆಯಿಂದ ತನ್ನನ್ನು ಹೊಡೆಯುತ್ತಿರಲು ತನ್ನ ಜಾಣ್ಮೆಯೇ ವ್ಯತ್ಯಸ್ತವಾಗಿ ಆ ಸತಿಯು ಗುಣಾರ್ಣವನನ್ನು ತಪ್ಪು ನೋಟಗಳಿಂದ ನೋಡಿದಳು (?)"

2.4 ಶ್ರೀ ಆರ್. ಎಲ್. ಅನಂತರಾಮಯ್ಯನವರು ತಮ್ಮ 'ಪಂಪಭಾರತ ಕಥಾ ಲೋಕ'ದಲ್ಲಿ ಈ ಪದ್ಯದ ಸಾರಾಂಶವನ್ನು ಹೀಗೆ ಕೊಟ್ಟಿದ್ದಾರೆ:

"ಯೌವನ ತುಂಬಿದ ತನ್ನ ಸೌಂದರ್ಯವನ್ನು ಕಿರುನೋಟದಿಂದ ನೋಡಲು ಮದನನ ಬಾಣಗಳು ನಾಟಿದರೂ ಜಾಣು ತಪ್ಪದೆ ನೋಡಿದ ಗುಣಾರ್ಣವನನ್ನು ಓರ್ವ ಯುವತಿಯು ತಪ್ಪು ನೋಟದಿಂದ ನೋಡಿದಳು."

3.1 ಶ್ರೀ ಎನ್. ಅನಂತರಂಗಾಚಾರ್ ಅವರ ಗದ್ಯಾನುವಾದ ಮತ್ತು ಶ್ರೀ ಆರ್. ಎಲ್. ಅನಂತರಾಮಯ್ಯನವರ ಕಥಾಲೋಕ – ಇವುಗಳು 'ಜನಸಾಮಾನ್ಯ', 'ಸಾಮಾನ್ಯ ಓದುಗ'ರನ್ನು ದೃಷ್ಟಿಯಲ್ಲಿಟ್ಟುಕೊಂಡಿರುವುವು. ಇವೆರಡರಲ್ಲೂ ಈ ಪದ್ಯಕ್ಕೆ ನೀಡಿರುವ ಅನುವಾದಗಳು ದೋಷಯುಕ್ತವಾಗಿವೆ.

3.2 ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪನವರು ನೀಡಿರುವ ಸಾರಾಂಶವು ತುಂಬಾ ಸಂಗ್ರಹರೂಪದ್ದಾಗಿದ್ದು ಇಡೀ ಪದ್ಯದ ಅರ್ಥವಿವರಣೆಯನ್ನು ಒಳಗೊಂಡಿಲ್ಲ.

3.3 ಡಾ॥ ಡಿ. ಎಲ್. ನರಸಿಂಹಾಚಾರ್ ಅವರು ದೀಪಿಕೆಯಲ್ಲಿ ಹೇಳಿರುವ "ಈ ಪದ್ಯಕ್ಕೆ ಅರ್ಥಾನ್ವಯಾದಿಗಳು ವಿಶದವಾಗಿ ತಿಳಿದು ಬರುವುದಿಲ್ಲ ; ಪಾಠಕ್ಲೇಶ ಗಳೇನಿವೆಯೋ, ಅವೂ ಅಜ್ಞಾತವಾಗಿವೆ" ಎಂಬುದನ್ನು ಗಮನಿಸಿ. ಅವರ ಪ್ರಕಾರ ಇದಕ್ಕೆ ಪಾಠಕ್ಲೇಶ ಕಾರಣ ಇರಬಹುದು. ಆದರೂ ಅವರು ಈ ಪದ್ಯಕ್ಕೆ ಮೇಲೆ ಅಂಶ 2.1ರಲ್ಲಿನಂತೆ ಅನ್ವಯ ಮಾಡಿದ್ದಾರೆ. ಅಲ್ಲಿ ಅವರು ಪದ್ಯದಲ್ಲಿ ಬರುವ 'ನೋಡಿದಂದದಟುಂ' ಪದವನ್ನು 'ನೋಡಿದುದಱುಂ' ಎಂದು ತಪ್ಪಾಗಿ ಭಾವಿಸಿದ್ದಾರೆ. ಅವರ ಪ್ರಕಾರ ಪದ್ಯದ ತಾತ್ಪರ್ಯ ಹೀಗಿದೆ: "ಉಂಟಾದ ತನ್ನ ಯೌವ್ವನದ ಆಕಾರದ ದೇಹದಲ್ಲಿಯೇ ತಪ್ಪುತಪ್ಪಾದ ನೋಟದಲ್ಲಿಯೇ ಸ್ಫುರಣೆಯು ಎಂದರೆ (ಮೈಯಲ್ಲಿ) ಕಂಪನವು ಸರಿಯಾದುದಲ್ಲ, ಇಂಗಿತ (ನೋಟದಲ್ಲಿನ) ಸರಿಯಾದುದಲ್ಲ, ಮನ್ಮಥನ ಹೂವಿನ ಬಾಣ ತುಂಬಿದ ಬತ್ತ ಳಿಕೆ ತುಂಬಿ ತನ್ನನ್ನು ಹೊಡೆಯಲು ಸಂಭ್ರಮದಿಂದ ಬಿಡದೆ ಜಾರುನೋಟದಲ್ಲಿ ಅಪ್ಪಿ ಕೊಳ್ಳಲು ನೋಡಿದ್ದರಿಂದ ಜಾಣತನವನ್ನೆ ಬಿಡದೆ ನಾಶಮಾಡಿತು."

ಇಲ್ಲಿ ಡಾ॥ ಡಿ.ಎಲ್. ನರಸಿಂಹಾಚಾರ್ ಅವರು ಮಾಡಿರುವ ಅನ್ವಯ, ನೀಡಿರುವ ಅರ್ಥ ಎರಡೂ ಸರಿಯಾಗಿಲ್ಲ. ಏಕೆಂದರೆ (ಅ) 'ನೋಡಿದುದೂಱುಂ' ಪದವನ್ನು 'ನೋಡಿದುದಱುಂ' ಎಂದು ಭ್ರಮಿಸಿರುವುದು (ಆ) ತಾತ್ಪರ್ಯವನ್ನು ಅಸ್ಪಷ್ಟವಾಗಿಸಿರುವುದು (ಇ) 'ತಪ್ಪು' ಶಬ್ದವನ್ನು ಕವಿ ನಾನಾರ್ಥಗಳಲ್ಲಿ ಬಳಸಿಕೊಂಡಿದ್ದಾನೆ ಎಂದು ತಪ್ಪಾಗಿ ಗ್ರಹಿಸಿರುವುದು.

4.1 ಪ್ರಸ್ತುತ ಪದ್ಯದ ಸಂದರ್ಭ

ಅರ್ಜುನನು ದ್ವಾರಾವತಿಪುರಕ್ಕೆ ಬಂದಾಗ ಕೃಷ್ಣನು ಅವನನ್ನು ಸ್ವಾಗತಿಸಿ ಪಟ್ಟಣಕ್ಕೆ ಕರೆತಂದನು. ಆಗ ಕೃಷ್ಣನ ತಂಗಿ ಸುಭದ್ರೆಯು ಮನೆಯ ಮೇಲಿಂದ ಅರ್ಜುನನನ್ನು ನೋಡಿದುದನ್ನು ಪಂಪ ಇಲ್ಲಿ ನಿರೂಪಿಸುತ್ತಿದ್ದಾನೆ.

4.2 ಈ ಪದ್ಯ ಸರಳವಾದ ಪದ್ಯ. ಈ ಪದ್ಯದ ಅನ್ವಯ ಸುಲಭವಾಗಿದೆ. ಅರ್ಥ ಸ್ಪಷ್ಟವಾಗಿದೆ. ಇಲ್ಲಿ ಪಾಠಕ್ಲೇಶವಿಲ್ಲ. ಬೆಳ್ಳಾವೆಯವರು ನೀಡಿರುವ ಪಾಠ ಸಮರ್ಪಕವಾಗಿದೆ. ಡಾ॥ ಡಿ. ಎಲ್. ನರಸಿಂಹಾಚಾರ್ ಅವರು ಮಾಡಿರುವ ಅನ್ವಯ, ನೀಡಿರುವ ಅರ್ಥಕ್ಕಿಂತ ಭಿನ್ನವಾದ ಅನ್ವಯ ಮತ್ತು ಅರ್ಥ ಈ ಪದ್ಯಕ್ಕಿದೆ ಮತ್ತು ಆ ಅರ್ಥ ಮನೋಜ್ಞವಾಗಿದೆ.

4.3 ಪ್ರಸ್ತುತ ಪದ್ಯದ ಅನ್ವಯಕ್ರಮ, ಅನ್ವಯಾರ್ಥ (ಪದ್ಯದ ಕ್ರಮದಲ್ಲಿನ ಘಟಕಗಳಾಗಿ)

4.3.1 (ಅ) ಒದವಿದ ತನ್ನ ಜವ್ವನದ ರೂಪಿನ ಮೆಯ್ಯೊಳೆ ತಪ್ಪು
(ಆ) ತಪ್ಪು ನೋಟದೊಳೆ
(ಇ) ಪೊಡರ್ಪು ತಪ್ಪು
(ಈ) ಬಗೆ ತಪ್ಪು
(ಉ) ಮನೋಜನ ಪೂವಿನಂಬು ತೀವಿದ ದೊಣೆ ತೀವಿ ತನ್ನನಿಸೆ ಜಾಣನೆ ತಪ್ಪದೆ ತಪ್ಪು.
(ಊ) ತಪ್ಪನೋಡಿದುದದಱುಂ ಗುಣಾರ್ಣವನನಾ ಸತಿ ತಪ್ಪದೆ ತಪ್ಪು ನೋಟದೊಳ್.

4.3.2 (ಉ)(ಊ)ವನ್ನು ಕ್ರಮವಾಗಿ ಹೀಗೆ ಬದಲಾಯಿಸಿಕೊಳ್ಳಬಹುದು.
(ಉ) ಮನೋಜನ ದೊಣೆ ತೀವಿದ ಪೂವಿನಂಬು ಜಾಣನೆ ತೀವಿ ತನ್ನನ್ ಇಸೆ ತಪ್ಪದೆ ತಪ್ಪು.
(ಊ) ಅದಱುಂ ಆ ಸತಿ ಗುಣಾರ್ಣವನನ್ ತಪ್ಪುನೋಟದೊಳ್ ನೋಡಿದುದು ತಪ್ಪದೆ ತಪ್ಪು.

4.3.3 ಅನ್ವಯಾರ್ಥ

(ಅ) ಒದವಿದ = ಉಂಟಾದ, ತನ್ನ, ಜವ್ವನದ ರೂಪಿನ ಮೆಯ್ಯೊಳ್ = ಯೌವ್ವನ ತುಂಬಿದ ಚೆಲುವಾದ ಶರೀರದಲ್ಲಿಯೇ, ತಪ್ಪು(ಇದೆ). (ಆ) ನೋಟದೊಳ್ = ನೋಟದಲ್ಲಿಯೇ ; ತಪ್ಪು (ಇದೆ). (ಇ) ಪೊಡರ್ಪು = ಉಬ್ಬುವಿಕೆ; ತಪ್ಪು (ಈ) ಬಗೆ = ಮನಸ್ಸು ; (ಉ) ಮನೋಜನ = ಮನ್ಮಥನ,ದೊಣೆ = ಬತ್ತಳಿಕೆ, ತೀವಿದ = ತುಂಬಿದ್ದ, ಪೂವಿನಂಬು = ಹೂಬಾಣಗಳು, ತನ್ನನ್ = ತನ್ನನ್ನು, ಜಾಣನೆ = (ತನ್ನ) ಜಾಣತನವನ್ನೇ, ತೀವಿ = ತುಂಬಿ (ತೀವ್ರವಾಗಿ), ಇಸೆ = ಹೊಡೆಯಲು, ತಪ್ಪದೆ ತಪ್ಪು = ನಿಜವಾಗಿಯೂ ತಪ್ಪು. (ಊ) ಅದಱಿಂ = ಆದ್ದರಿಂದ, ಆ ಸತಿ = ಆ ಸುಭದ್ರೆಯು, ಗುಣಾರ್ಣವನನ್ = (ಅರಿಕೇಸರಿಯನ್ನು) ಅರ್ಜುನನನ್ನು, ತಪ್ಪ ನೋಟದೊಳ್ = ತಪ್ಪು ನೋಟದಲ್ಲಿ, ನೋಡಿದಂದು = ನೋಡಿದ್ದು, ತಪ್ಪದೆ ತಪ್ಪು = ನಿಜವಾಗಿಯೂ ತಪ್ಪು.

4.4 ಈ ಪದ್ಯದಲ್ಲಿ 'ತಪ್ಪು' ಶಬ್ದವು ಒಂಬತ್ತು ಬಾರಿ ಪ್ರಯೋಗಿಸಲ್ಪಟ್ಟಿದೆ. ಮೊದಲು ಆರು ಕಡೆಯೂ 'ತಪ್ಪು' ಎಂದರೆ 'ಸರಿಯಲ್ಲ' ಎಂಬ ವಾಚ್ಯಾರ್ಥವಿದ್ದರೂ, ಆ ವಾಚ್ಯಾರ್ಥವನ್ನು ತಿರಸ್ಕರಿಸಿ 'ಸರಿ (ಸಹಜ)' ಎಂಬ ವಿರುದ್ಧಾರ್ಥವೇ ಪ್ರಧಾನವಾಗಿದೆ. ಉಳಿದ ಕೊನೆಯ (ಊ) ಘಟಕದಲ್ಲಿ 'ತಪ್ಪ ನೋಟದೊಳ್ ನೋಡಿದುದು ತಪ್ಪದೆ ತಪ್ಪು' ಎನ್ನುವಾಗ 'double negative makes positive'–ಎರಡು ನಿಷೇದಾರ್ಥದಿಂದ ಇತ್ಯರ್ಥ ಉಂಟಾಗುತ್ತದೆ–ಎಂಬಂತೆ ಅರ್ಥಪ್ರತೀತಿಯುಂಟಾಗಿದೆ :- ಆದ್ದರಿಂದ ಅವಳು ಗುಣಾರ್ಣವನನ್ನು ಸರಿಯಾಗಿಯೇ (ನೇರವಾಗಿಯೆ, ಭಯವಿಲ್ಲದೆ) ನೋಡಬಹುದಿತ್ತು.

4.5 ಪದ್ಯದ ತಾತ್ಪರ್ಯ

ಉಂಟಾದ ತನ್ನ ಯೌವ್ವನ ತುಂಬಿದ ಚೆಲುವಾದ ಶರೀರದ (ಲ್ಲಿಯೇ) ತಪ್ಪು (ಇದೆ). ನೋಟದ (ಲ್ಲಿಯೇ) ತಪ್ಪು (ಇದೆ). ಉಬ್ಬುವಿಕೆ ತಪ್ಪು. ಮನಸ್ಸು ತಪ್ಪು. ಮನ್ಮಥನ ಬತ್ತಳಿಕೆ ತುಂಬಿದ್ದ ಹೂಬಾಣಗಳು ತನ್ನನ್ನು, ತನ್ನ ಜಾಣತನವನ್ನು ತುಂಬಿ ಹೊಡೆಯಲು (ಅದು) ನಿಜವಾಗಿಯೂ ತಪ್ಪು. ಆದ್ದರಿಂದ ಅವಳು ಗುಣಾರ್ಣವನನ್ನು ತಪ್ಪು ನೋಟದಲ್ಲಿ ನೋಡಿದ್ದು ನಿಜವಾಗಿಯೂ ತಪ್ಪು–ಅರ್ಥಾತ್ ಅವಳು ಗುಣಾರ್ಣವನನ್ನು ಯಾವುದೇ ರೀತಿಯ ಹಿಂಜರಿಕೆಯಿಲ್ಲದೆ ನಿರ್ಭೀತಳಾಗಿ ನೇರವಾಗಿಯೇ ನೋಡಬಹುದಿತ್ತು.

ಇಲ್ಲಿ ಕವಿ ಸುಭದ್ರೆಯು ಗುಣಾರ್ಣವನನ್ನು ನೋಡಿದ ಕ್ರಿಯೆಯನ್ನು ಸಮರ್ಥಿಸಿದ್ದಾನೆ. ಈ ಸಂದರ್ಭದಲ್ಲಿ ಒಂದು ಅಂಶವನ್ನು ಗಮನಿಸಬಹುದು. ನಮ್ಮ ಸಮಾಜದಲ್ಲಿ ಪ್ರಾಯದ ಗಂಡು–ಹೆಣ್ಣು ಹಿರಿಯರ ಇಚ್ಛೆಗೆ ವಿರುದ್ಧವಾಗಿ ವಿವಾಹವಾದ ಸಂದರ್ಭದಲ್ಲಿ 'ಅದು ಅವರ ತಪ್ಪಲ್ಲ, ಅವರ ವಯಸ್ಸಿನ ತಪ್ಪು' ಎಂಬ ಪ್ರತಿಕ್ರಿಯೆಯನ್ನು ಅವಲೋಕಿಸಬೇಕು.

ಗುಲಗಂಜಿಗಳು

ಮೈ ಬೆವರ ಒಸಿದರೂ
ಬನ್ನ ತೀರಲಿಲ್ಲ –
ಹಗಲಿರುಳು ದುಡಿದರೂ
ಹಸಿವೂ ನೀಗಲಿಲ್ಲ !

* * *

ಓದುತ್ತಾ ಓದುತ್ತಾ
ಹೊಂಬೆಳಕು ಕಂಡಿತ್ತು,
ದೇದೀಪ್ಯ ಪ್ರಭೆಯಲ್ಲಿ
ನನ್ನ ಮಿಂತಿ ಅರಿವಾಯ್ತು !

* * *

ಅಜ್ಞಾನ ಕೂಪದಲಿ
ಕಮರಿ ನಿಂತ ಕಂದಮ್ಮಗಳು–
ಕಣ್ಣೀರ ಕಡಲಲ್ಲೂ
ಹೊಂಗನಸಿನ ನಾವೆಗಳು !

* * *

ಪುಟ್ಟ ಪುಟ್ಟ ಹೃದಯಂಗಳಲೂ
ಬೆಟ್ಟದಂಥ ಆಸೆಗಳು,
ತಿಂಗಳ ಸಿರಿ ಕಂಗಳಲ್ಲಿ
ಕಾಮನಬಿಲ್ಲ ಕವಿತೆಗಳು !

* * *

ದೊಡ್ಡರಂಗೇಗೌಡ

ದೊಡ್ಡರಂಗೇಗೌಡ, ಕನ್ನಡ ಪ್ರವಾಚಕ, "ಕಾವ್ಯಶ್ರೀ", ವಿಶ್ವೇಶ್ವರಯ್ಯ ಬಡಾವಣೆ
ಹೊಸಕೋಟೆ-562 114, ಬೆಂಗಳೂರು ಜಿಲ್ಲೆ

ಪಲ್ಲಿ

'ಲೊಚಲೊಚ'ಗುಟ್ಟಿ ಕಣಿ ಹೇಳುತ್ತಿದ್ದ ಪಲ್ಲಿ
ಕುದಿನೀರಿಗೆ ಬಿತ್ತು, ನೆಗೆದು.
ವಿಲಿವಿಲಿ ಒದ್ದಾಡಿ ಸುಳಿಗೆ ಸಿಕ್ಕಂತೆ ಗಿರ್ರನೆ ತಿರುಗಿ
ಕಡಾಯಿ ಮನದಲಲೆಯೆದ್ದು ಬುಗಿಲು
ತಣ್ಣಗಾಯಿತು ತಳಮುಟ್ಟಿ ಹುಟ್ಟಿ ದಿಗಿಲು.

ತೊಳೆಯುತ್ತಿದ್ದೆ ಮೈ
ಬೆತ್ತಲೆ ಬಚ್ಚಲು ಮನೆಯಲ್ಲಿ
ಕೊರೆವ ಚಳಿ ತೊಗಲಿಗೆ ಬಿಸಿನೀರು ಹಿತ
ಬಗ್ಗಿಸಿಕೊಂಡಷ್ಟೂ ಬೇಕೆನಿಸುತ್ತಿತ್ತು.
ಒಳಿತು ಕೆಡುಕಿಗೆಲ್ಲ ಬಿಡದೆ ಶಕುನ ಪಲುಕುವ ಪಲ್ಲಿ
ಅಪಶಕುನ ದೆವ್ವ ಮೆಟ್ಟಿಸಿ ವಾಮಭುಜ ಸವರಿ
ಅಂಗಾತ ಬಿತ್ತು ಸಿಡಿದು.
'ಕೃಷ್ಣ ಕೃಷ್ಣಾ' ಎಂದುಸುರುತ್ತಿದ್ದ ಬಾಯಿ,
ಒರಗು ಕಂಬಕೆ, ಗೋಡೆಗೆ ಕುಟ್ಟುತ್ತಿದ್ದ ಕೈ, ತಡೆಯಿತು.

ತೊಳೆಯುತ್ತಿದ್ದೆ ಲೋಕವೆಮ್ಮೈ ಮಡಿಬಯಸಿ
ಮುತ್ತಿಕೊಂಡಿತು ಮೈಲಿಗೆ, ಕಣ್ಣಾರೆ ಕಂಡು.
ಬಿಚ್ಚೆ ಕಡತ, ಕೊಡವಿ ಧೂಳು, ತೆಗೆಯಬೇಕು ಪಲ್ಲಿಶಾಸ್ತ್ರ
ತಿಳಿಯಬೇಕು ಶುಭಾಶುಭ.
ಸ್ನಾನಗೃಹದಲಿ ಶಕುನದೇವರ ಶವ, ಶಿವ ಶಿವಾ!
ಕೇಡು ತಪ್ಪದು ನಿರ್ಲಕ್ಷಿಸಿದರೆ
ಹಿರಿಯರುರುಬೋಣ ಕುರಿತೇಟು.
ಅಜ್ಜನೆಟ್ಟಾಲಕ್ಕೂ ಬೆಲೆಯುಂಟು ಇಲ್ಲಿ
ಬೆಲೆಯಿಲ್ಲದೆಲೆಯಿಲ್ಲ ಇಳೆಯಲ್ಲಿ.
ಭೂತದ ಭಯ ವರ್ತಮಾನಕೆ
ಭವಿಷ್ಯದ ಬವಣೆ ಬೇರೆಯಿಲ್ಲ.

ಕ್ಷಣದ ಹಿಂದೆ ಲೊಚಗುಟ್ಟಿದ ಇದು
ಇತ್ತು, ನನ್ನಂತೆ ಎಲ್ಲರಂತೆ ಎಲ್ಲದರಂತೆ ಜೀವಂತ
ಈಗಾಯಿತು ಬೆಂದ ಬಾಡು

ಡಿ. ಲಿಂಗಯ್ಯ, 690, 7ನೇ ಬ್ಲಾಕ್, ಬನಶಂಕರಿ 3ನೇ ಹಂತ, ಬೆಂಗಳೂರು-560 085

ಹಿಡಿದಿದೆ ಹಿಂದಿರುಗದ ಜಾಡು.
ಬಿಚ್ಚುವ ಮೊದಲೇ ಬಟ್ಟೆ ಕಂಡಿದ್ದರೆ
ಕಳೆಯಬಹುದಿತ್ತು ಸೂತಕ, ತಲೆ ತೊಳೆದು.
ಆದರೀಗ ?   ಗೊಂದಲಮಯ. ಸರಿ ತಪ್ಪುಗಳ ಜಂಜಾಟ.
ಏನಾದರಾಗಲೀ ನೋಡಬೇಕು ಆಮೂಲಾಗ್ರ ಪಲ್ಲಿ ಶಾಸ್ತ್ರ.
ಸಿಗದಿದ್ದರೆ ಪರಿಹಾರ ?
ತಲೆಕೆಡಿಸಿಕೊಳ್ಳುವ ಕಾರಣವಿಲ್ಲ :
ಎಷ್ಟೆಂದರೂ ಕೇವಲ ಪಲ್ಲಿ, ಒಂದು ಪ್ರಾಣಿ, ಬಡಪ್ರಾಣಿ ;
ಆದರೆ, ಶಕುನ ಹೇಳುತಿತ್ತು
ಹೆತ್ತಾತ ಮುತ್ತಾತರ ಕಾಲದಿಂದ ಭಕ್ತರನು ಪಡೆದಿತ್ತು
ನಂಬಿಸಿತ್ತು, ಎಷ್ಟೋ ಜೀವ ಉಳಿಸಿತ್ತು
ನಾಲ್ಕು ಕಾಲಿನ ಪ್ರಾಣಿ, ಪಾಪ, ಗೊಟಕೆಂದಿತು.
ಸನಾತನ ನಂಬಿಕೆ ವೃಕ್ಷಕ್ಕೆ ಬಿತ್ತು ಜವರಾಯಿ ಕೊಡಲಿ ಪೆಟ್ಟು
ಜಂಗಮ ಪಲ್ಲಿಗೂ ಬಂತು ಕೊನೆ.
'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲಾ'
ಎನ್ನುವಂತಿಲ್ಲ, ಕಲಿಗಾಲದಲ್ಲಿ.

ಡಿ. ಲಿಂಗಯ್ಯ

ಈ ದೇವರುಗಳು

ಅರೆ, ಡೋಲಿನಬ್ಬರಕೆ ಮುಗಿಲೆಂದ್ದು ನೆಗೆದು
        ಕೇಕೆಯನು ಹಾಕುತ್ತ ಕುಣಿದು ಕುಪ್ಪಳಿಸಿ
ಇನ್ನೂ ಬರಲಿಲ್ಲೆಂದು ಶಂಗಿ ಕರಿಯಮ್ಮ
        ಕಣ್ಣೀರ ಮಿಡಿಯುವನು ವೀರಾಂಜನೇಯ

ಗಾಳಿ ಮಳೆ ಚಳಿಯಿಂದ ದೇವರುಳಿಯಲಿ ಎಂದು
        ಗುಡಿಯ ಕಟ್ಟಲು ಹೋದ ಭಕ್ತರನು ತಡೆದು
ಊರ ಜನರೆಲ್ಲರಿಗು ಸೂರು ಸಿಕ್ಕುವವರೆಗು
        ತನಗೆ ಗುಡಿ ಬೇಡೆಂದ ಈ ಕೆಂಚರಾಯ

ಕುಸಿದ ಕಂದನ ಕಣ್ಣು ಬೆಳಕಾರುವುದ ಕಂಡು
        ಹಸುಗೂಸನೊಯ್ಯಿರೋ ಆಸ್ಪತ್ರೆಗೆಂದು
ಕಳೆದ ಕಂದನ ಜೀವ ಮರಳಿ ತಂದಾಕೆ
        ಎಲ್ಲಮ್ಮ ತಾಯಿ ಅವಳೆಲ್ಲಿಯವಳು

ಡಾ|| ಸಿದ್ಧಲಿಂಗಯ್ಯ, ಕನ್ನಡ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–56

ಭಕ್ತಾದಿಗಳ ಬವಣೆ ಪರಿಹರಿಸದಿದ್ದರೆ
ಉರಿವ ಮೆಣಸಿನ ಘಾಟು ಸಹಿಸುವುದು ಹೇಗೆಂದು:
ಕುದುರೆ ಮೇಲಿದ್ದರೂ ಬೆವರಿ ಕಂಗಾಲಾದ
ಸಗಣಿರಂಗನು ಯಾವ ಮೂಲದವನು
ಸಂಸ್ಕೃತವ ತಿಳಿಯದ ಸ್ವರ್ಗದಲಿ ನೆಲೆಸದ
ಕಪ್ಪುದೇವತೆಗಳು ಬರಿಗಾಲಿನವರು
ಬೆರಗೆ ಸಿರಿಯಾಗಿದ್ದ ನಮ್ಮ ಹಿರಿಯರ ಕನಸು
ಮೈಯ್ಯಾಗಿ ನಮ್ಮೊಡನೆ ಬಾಳುವವರು ●

ಡಾ|| ಸಿದ್ಧಲಿಂಗಯ್ಯ

ನೆನಪುಗಳು

ನೆನಪುಗಳೆಂದರೆ ಸುಡುಬೇಸಿಗೆಯಲ್ಲೂ
ಮಲ್ಲಿಗೆಯ ಪರಿಮಳದ ಮಂದಾನಿಲಗಳು, ಶುಕ್ರತಾರೆ.
ನೆನಪುಗಳು ಮೂಡಿಸುವ ನೆಳಲು–ಬೆಳಕುಗಳ
ಚಿತ್ರವಿಚಿತ್ರ ವಿನ್ಯಾಸಗಳು ಸಂವೇದನೆಯ
ಒಳತಿರುಳುಗಳು.
ಬರೀ ಭೌಗೋಳಿಕ ಅಂಶಗಳಲ್ಲ,
ಗಡಿಗಳಿಲ್ಲದ ಕಾಲದ ಹುಚ್ಚು ಹರಹುಗಳು,
ಹಸಿರ ಸಮೃದ್ಧಿ,
ಅನುರಣಿಸುವ ಪ್ರೀತಿಯ ಜಗತ್ತು.
ತುಮುಲಗಳ ರಿಂಗಣಗುಣಿತದ ಹಿಂದೆ
ಅಲ್ಲಲ್ಲಿ ಬತ್ತಿ ಪಾಚಿಗಟ್ಟಿದ
ಹಸಿರು ನೀರಿನ ಹೊಂಡಗಳು,
ಗೆದ್ದಲ ಹುತ್ತದ ಬಯಲುಗಳು.
ಹಲಸಿನ ಮೇಣಗಳಿಂದ
ತಪ್ಪಿಸಿಕೊಂಡ ಆಕಸ್ಮಿಕಗಳು.
ಕನಸು–ನನಸುಗಳ ಮಾಯದ ಗೆರೆಗಳು
ಮರಳಲ್ಲಿ ಹಳ್ಳ ತೋಡಿ ಆಸೆಗಳ
ಗೋರಿ ಮಾಡುತ್ತಾ,
ಮತ್ತೆ ಅದೇ ಕೊನೆಯಿಲ್ಲದ ಸುತ್ತಾಟ. ●

— ಶಾಂತಲಕ್ಷ್ಮಿ

ಶಾಂತಲಕ್ಷ್ಮಿ, ಕನ್ನಡ ವಿಭಾಗ, ಮಹಾರಾಣಿ ಕಾಲೇಜ್, ಬೆಂಗಳೂರು

ಅಘನಾಶಿನಿ ತಡಿಯಲ್ಲಿ ಸಂಪಿಗೆ ಮರ

ಅಘನಾಶಿನಿ ತಡಿಯಲ್ಲಿ ಸಂಪಿಗೆ ಮರ
ರಾಶಿ ಹೂವಿನ ಕಣ್ಣು ಮೈಯಿ ಪೂರ
ಹಿನ್ನಲೆಯು ನದಿ ನಿಂತುಬಿಟ್ಟಿತೆ ಒಮ್ಮೆ
ಮರಕೆ ಮರವೇ ಮುಂದೆ ಚಲಿಸಿದ ಥರ

ಇಕೊ ಕಳಚಿಬಿತ್ತೊಂದು ಹಗುರ ಹೂವು
ಶಬ್ದ ತಾನೆ ಜಾರಿದಂತೆ ಕವನದಿಂದ
ಕಂಪಿನ ಹುಂಡಿ ಚೆಲ್ಲಿತೆ ಮಣ್ಣಿನ ಕುಡಿಗೆ
ಹಾಡಿನಿಂದ ಹಾರಿದಂತೆ ಒಂದು ಸ್ವರ

ಹರಿಯು ನೀರಿನ ಎದೆಗು ಒಂದು ಹೂವು
ಬಿದ್ದು ತೇಲುವ ಅಲೆಗೆ ಹೂ ಕಂಪನ
ಜೇನು ತೊಟ್ಟಿಲಿ ಹನಿ ಅಘನಾಶಿನಿ
ಒಡಲ ಬೀಜದ ಈಸು ಮೀನಾಂಕುರ

ನೆಲತುಂಬ ಅಲ್ಲಾಡದ ಹೂಗಣ್ಣಿನ ಹಾಸು
ಮೈಮುರಿದರು ಚೆಲ್ಲಾಡದ ಜೀವನ ಭರತ
ನೀಲ ನೀರ ಸ್ವಪ್ನದಲ್ಲಿ ತೇಲುತಿರುವ ಮರ್ಮರ
ಬಿದ್ದ ಹೂವಿನ ಒಳಗೆ ಸ್ತಬ್ಧ ತೀರ

ರಾತ್ರಿ ಅಲ್ಲಾಡುತಿದೆ ಮಿಣುಕು ದೋಣಿ
ನೆಲಮುಗಿಲ ಮಥಿಸುತ್ತ ನಿಂತ ಮೂಕ ಮರ
ಹಾರುತಿರುವದು ಏನು ತೆರೆಯುತಿರುವದು ಏನು
ಮರದ ಎದೆ ಗೂಡಲ್ಲಿ ತಣಿವ ಸಾಗರ

ಜಯಂತ ಕಾಯ್ಕಿಣಿ

ಜಯಂತ ಕಾಯ್ಕಿಣಿ, 2.D.57, ವೈಶಾಲಿನಗರ್, ಬಾಲರಾಜೇಶ್ವರ್ ರೋಡ್
ಮುಲುಂದ್ (ವೆಸ್ಟ್), ಬಾಂಬೆ-400 080

ಧರ್ಮದ ಬಗೆಗೆ ವಿವೇಕಾನಂದರ ನಿಲುವು

—ವೈ.ಗ.ಜಗದೀಶ್

ದೇಶದಲ್ಲಿ ಇಂದು ಕೋಮು ಭಾವನೆಯಿಂದ ಎಲ್ಲೆಲ್ಲೂ ಭಯದ ವಾತಾವರಣ ಮೂಡಿದೆ. ಈ ಎಲ್ಲಾ ಧಾರ್ಮಿಕ ಕುತಂತ್ರಗಳಿಂದ ಹೊರಗಿದ್ದ ಜನಸಾಮಾನ್ಯ ಕೂಡ ಇವತ್ತು ಈ ಕಾವಿನಿಂದ ತತ್ತರಿಸುತ್ತಿದ್ದಾನೆ. ಇದಕ್ಕೆಲ್ಲ ಏನು ಕಾರಣ? ಎಲ್ಲ ಧರ್ಮಗಳು ಸಾರಿ ಹೇಳುವ ಅಹಿಂಸೆ ಮತ್ತು ಮಾನವ ಪ್ರೇಮಗಳ ಆದರ್ಶವೆಲ್ಲಿ–ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಮುಗ್ಧ ಜನರ ಮಾರಣಹೋಮವೆಲ್ಲಿ? ಈ ನಿಟ್ಟಿನಲ್ಲಿ ಧರ್ಮದ ಬಗ್ಗೆ ಸ್ವಾಮಿ ವಿವೇಕಾನಂದರ ನಿಲುವುಗಳನ್ನು ಕುರಿತು ಇಲ್ಲಿ ಚರ್ಚಿಸಲು ಯತ್ನಿಸಿದ್ದೇನೆ.

ಸ್ವಾಮಿ ವಿವೇಕಾನಂದರು ಧರ್ಮಗಳ ಕಚ್ಚಾಟವನ್ನು ಕುರಿತು ಹೇಳುತ್ತಾ, "ಎಲ್ಲ ಧರ್ಮಗಳ ಆದರ್ಶ ಒಂದೇ ಆದರೂ ಅವು ತಮ್ಮತಮ್ಮಲ್ಲೇ ಕಚ್ಚಾಡುತ್ತಿರುವುದಕ್ಕೆ ಕಾರಣ–ಒಬ್ಬನಂತೆ ಮತ್ತೊಬ್ಬನಿಗೆ ಅದನ್ನು ವ್ಯಕ್ತಪಡಿಸಲು ಇಚ್ಛೆ ಇಲ್ಲದಿರುವುದು. ಜೊತೆಗೆ ಇಂದಿನ ಧರ್ಮಾನುಯಾಯಿಗಳಾರೂ ಧರ್ಮದ ಮೂಲಕ್ಕೆ ಹೋಗಲಿಲ್ಲ. ಅವರು ಕೇವಲ ತಮ್ಮ ಪೂರ್ವಿಕರ ಆಚಾರ-ವ್ಯವಹಾರಗಳಿಗೆ ಒಪ್ಪಿಗೆ ನೀಡುವುದರಲ್ಲೇ ತೃಪ್ತರಾಗಿದ್ದರು. ಉಳಿದವರೂ ಕೂಡ ಹಾಗೇ ಮಾಡಬೇಕೆಂದು ತಿಳಿದಿದ್ದರು" ಎನ್ನುತ್ತಾರೆ. ಜೊತೆಗೆ "ಎಲ್ಲಾ ಧರ್ಮಗಳು ನಿಂತಿರುವುದು ಧರ್ಮಶಾಸ್ತ್ರಗಳ ಆಧಾರದ ಮೇಲೆ. ಆದರೆ ಎಲ್ಲಾ ಧರ್ಮಶಾಸ್ತ್ರಗಳು ಕೆಲವು ಪುಟಗಳು ಮಾತ್ರ. ಇನ್ನೂ ದಾಖಲಾಗಲು ಅನಂತ ಪುಟಗಳಿವೆ, ಅಲ್ಲಿ ಹೇಳಿರುವುದೇ ಕೊನೆ ಮಾತಲ್ಲ" ಎನ್ನುತ್ತಾ "ಈ ರೀತಿಯ ಅಂಧತೆಯ ಕಪಟಿಯಾಗುವುದಕ್ಕಿಂತ ನಾಸ್ತಿಕನಾಗುವುದೇ ಮೇಲು" ಎಂದು ಹೇಳುತ್ತಾರೆ.

"ಧರ್ಮ ಎನ್ನುವುದು ಬಾಯಿ ಮಾತಲ್ಲ, ನಂಬಿಕೆಯಲ್ಲ, ಸಿದ್ಧಾಂತವಲ್ಲ ಅಥವಾ ಅದೊಂದು ಕೋಮು ಭಾವನೆಯೂ ಅಲ್ಲ. ಇದು ಆತ್ಮನಿಗೂ, ದೇವರಿಗೂ ಇರುವ ಸಂಬಂಧ." ಇದನ್ನು ಒಂದು ಸಂಘವಾಗಿ ಹೇಗೆ ಮಾಡಬಹುದು? ಎಂದು ಪ್ರಶ್ನಿಸುತ್ತಾ "ಧರ್ಮದಲ್ಲಿ ಎಂದು ವ್ಯಾಪಾರಿದೃಷ್ಟಿ ನಿಯಮಗಳಿರುತ್ತವೆಯೋ ಅಲ್ಲಿ ಆಧ್ಯಾತ್ಮಿಕತೆ ಕೊನೆಗಾಣುತ್ತದೆ" ಎಂದಿದ್ದಾರೆ.

"ಧರ್ಮ ದೇವಸ್ಥಾನ ಕಟ್ಟುವುದರಲ್ಲಿಲ್ಲ, ಅಥವಾ ಸಾಮೂಹಿಕ ಪೂಜೆಗೆ ಹೋಗುವುದರಲ್ಲೋ, ಉಪವಾಸ ಕೂರುವುದರಲ್ಲೋ, ಗ್ರಂಥದಲ್ಲೋ, ಒಂದು ಸಂಸ್ಥೆಯಲ್ಲೋ ಇಲ್ಲ. ಧರ್ಮವೆಂದರೆ "ಇಂದ್ರಿಯಗಳ ಮೇರೆಯನ್ನು ಮೀರಿ, ಅಂದರೆ ಮನಸ್ಸು ಸೂಕ್ಷ್ಮ

ವೈ. ಗ. ಜಗದೀಶ್, ವೈಕುಂಠಪುರ, ತೆಕ್ಕೂರು ಅಂಚೆ, ಶೃಂಗೇರಿ ತಾಲ್ಲೂಕು 577 139

ಾಗಿ ಗ್ರಹಿಸದ, ಯುಕ್ತಿಯ ಮೂಲಕ ಆಲೋಚಿಸಲು ಅಸಾಧ್ಯವಾದ ಅನುಭವದ ಆತ್ಮಸಾಕ್ಷಾತ್ಕಾರ" ಎನ್ನುತ್ತಾ, "ಒಂದು ಕಣವಷ್ಟು ಧರ್ಮಾನುಷ್ಠಾನ ಮತ್ತು ಆತ್ಮ ಸಾಕ್ಷಾತ್ಕಾರ, ಒಂದು ಮಣ ಮಾತಿಗಿಂತ, ಒಣ ಹೆಮ್ಮೆಗಿಂತ ಮೇಲು" ಎನ್ನುತ್ತಾರೆ. ಮತ್ತು ಜನರ ಧಾರ್ಮಿಕ ಭಾವನೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಾ, ಬಾಬ್ರಿ ಮಸೀದಿ–ರಾಮ ಮಂದಿರ ಹೆಸರಿನಲ್ಲಿ, ಮುಗ್ಧ ಜನತೆಯಲ್ಲಿ ಪರಸ್ಪರ ದ್ವೇಷದ ಕಿಡಿ ಯನ್ನು ಹೊತ್ತಿಸಿರುವುದರ ಜೊತೆಗೆ, ದೇಶಾದ್ಯಂತ ಭಯಂಕರ ವಾತಾವರಣವನ್ನುಂಟು ಮಾಡಿರುವ, ಧರ್ಮಿಷ್ಠರೆಂದು ಕರೆದುಕೊಳ್ಳುವವರು ಸ್ವಾಮಿ ವಿವೇಕಾನಂದರ ಈ ಮಾತುಗಳ ಹಿನ್ನೆಲೆಯಲ್ಲಿ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ.

ಧರ್ಮದ ಅವಶ್ಯಕತೆಯನ್ನು ಕುರಿತು ಮತ್ತು ಅದು ಹೇಗಿರಬೇಕೆಂಬ ಬಗ್ಗೆ ಹೀಗೆ ಹೇಳುತ್ತಾರೆ: "ಮನುಷ್ಯನ ಆಜನ್ಮಸಿದ್ಧ ಹಕ್ಕಾದ ಆ ಅನಂತಶಕ್ತಿಯನ್ನು ಪಡೆದು ಕೊಳ್ಳುವುದಕ್ಕೆ, ಶೀಲವನ್ನು ರೂಢಿಸುವುದಕ್ಕೆ, ಒಳ್ಳೆಯದಾಗಿರುವ ಎಲ್ಲವನ್ನೂ ಪಡೆ ಯುವುದಕ್ಕೆ, ಇತರರಿಗೆ ಶಾಂತಿ ನೀಡಿ ತಾವೂ ಶಾಂತಿಯಿಂದ ಬದುಕುವುದಕ್ಕೆ ಧರ್ಮ ಅಗತ್ಯವಿದೆ" ಎನ್ನುತ್ತಾರೆ. "ಇದಾಗಬೇಕಾದರೆ ಎಲ್ಲಾ ವಿಧದ ಅಲ್ಪ, ಕ್ಷುದ್ರ, ಮನಸ್ತಾಪ ಕಾರಕ ಭಾವನೆಗಳನ್ನು ತೊರೆದ ವಿಶಾಲದೃಷ್ಟಿ ಅಗತ್ಯ. ಅಂದರೆ ಧರ್ಮವನ್ನು ಕೋಮು, ದೇಶ, ಪಂಗಡ–ಈ ದೃಷ್ಟಿಯಿಂದ ನೋಡುವುದನ್ನು ಬಿಟ್ಟು, ಧರ್ಮದ ಆದರ್ಶವು ಪ್ರಪಂಚದಲ್ಲಿರುವ ಶುಭವಾದುದೆಲ್ಲವನ್ನೂ ಒಳಪಡಿಸಿಕೊಂಡು, ಇದ್ದ ಒಳ್ಳೆಯದನ್ನು ಸಂರಕ್ಷಿಸಿ, ಇನ್ನೂ ವಿಕಾಸವಾಗುವುದಕ್ಕೆ ಅವಕಾಶವಿರಬೇಕು" ಎನ್ನುತ್ತಾರೆ. "ವೇದಾಂತಕ್ಕೆ ಮಾತ್ರ ವಿಶ್ವಧರ್ಮವಾಗುವ ಹಕ್ಕಿದೆ, ಏಕೆಂದರೆ ಅದು ಒಂದು ವ್ಯಕ್ತಿಯನ್ನು ಬೋಧಿಸುವುದಿಲ್ಲ, ತತ್ವವನ್ನು ಬೋಧಿಸುತ್ತದೆ" ಎಂದಿದ್ದಾರೆ.

"ಪ್ರಪಂಚದ ಧರ್ಮಗಳೆಲ್ಲ ಪರಸ್ಪರ ವಿರೋಧವಲ್ಲ. ಅವೆಲ್ಲ ಒಂದು ಸನಾತನ ಧರ್ಮದ ಪ್ರತಿಬಿಂಬ (ಇಲ್ಲಿ 'ಸನಾತನ' ಎಂದರೆ ಆದಿಯಿಲ್ಲದ, ವಿಶ್ವವ್ಯಾಪಿಯಾದ ಎಂಬರ್ಥದಲ್ಲಿ 'ಒಂದು ಸನಾತನ ಧರ್ಮದ' ಎಂದು ಬಳಸಿದ್ದಾರೆ. ಇಂದಿನ ಭಾರತೀಯ ಹಿಂದುತ್ವವಾದಿಗಳ ಸೀಮಿತ 'ಭಾರತೀಯ' ಎಂಬ ಅರ್ಥದಲ್ಲಲ್ಲ ಎಂಬುದನ್ನು ಗಮನಿಸಬೇಕು). ಆ ಒಂದು ಸತ್ಯವನ್ನೇ ಕಾರ್ಯಕ್ಷೇತ್ರದ ಹಲವು ಭೂಮಿಕೆಯಲ್ಲಿ ಆಯಾಯ ಜನಾಂಗಗಳ ಮನಸ್ಸಿಗೆ ರಂಜಿಸುವಂತೆ ಉಪಯೋಗಿಸಿಕೊಂಡಿದ್ದಾರೆ" ಎನ್ನುತ್ತಾರೆ ವಿವೇಕಾನಂದರು.

ಅವರು ಮುಂದುವರೆದು "ಧರ್ಮ ಮತ್ತು ತತ್ವದ ಕೊನೆಯ ಮಾತೇ ಅದ್ವೈತ. ಈ ಸ್ಥಿತಿಯಿಂದ ಮಾತ್ರ ಎಲ್ಲಾ ಧರ್ಮಗಳನ್ನೂ, ಪಂಗಡಗಳನ್ನೂ ಪ್ರೀತಿಯಿಂದ ನೋಡಬಹುದು. ಮುಂದಿನ ಬುದ್ಧಿವಂತರಾದ ಮಾನವರ ಧರ್ಮವದು ಎಂದು

ನಾನು ನಂಬಿದ್ದೇನೆ. ಇದನ್ನು ಎಲ್ಲಕ್ಕಿಂತ ಮೊದಲು ಹಿಂದುಗಳು ಕಂಡುಕೊಂಡಿದ್ದಾರೆ. ಆದರೂ ಕೂಡ ಅನುಷ್ಠಾನದ ಅದ್ವೈತ-ಅಂದರೆ, ಎಲ್ಲಾ ಮಾನವರನ್ನೂ ತನ್ನದೇ ಆತ್ಮವೆಂದು ತಿಳಿದು ಅದರಂತೆ ಅನುಸರಿಸುವುದು-ಇದು ಹಿಂದೂಗಳಲ್ಲಿ ಇನ್ನೂ ಅಭಿವೃದ್ಧಿಯಾಗಬೇಕಾಗಿದೆ. ಅಲ್ಲದೇ ಈ ಸಮತ್ವವನ್ನು, ಇದರ ಗುಪ್ತ ಅರ್ಥ ಅಥವಾ ಅಂತರಂಗದಲ್ಲಿ ಹರಿಯುವ ನಿಯಮವನ್ನು ತಿಳಿಯದೆಯೇ ಯಾವ ಮತವಾದರೂ ಅನುಷ್ಠಾನ ರೂಪದಲ್ಲಿ ಸಾಧ್ಯವಾದಷ್ಟೂ ವ್ಯಕ್ತಪಡಿಸಿದ್ದರೆ ಅದು ಇಸ್ಲಾಂ ಧರ್ಮ" ಎನ್ನುತ್ತಾರೆ.

ಈ ಅನುಷ್ಠಾನದ ಇಸ್ಲಾಂ ಧರ್ಮದ ಸಹಾಯವಿಲ್ಲದ ವೇದಾಂತತತ್ವಗಳು ಎಷ್ಟೇ ಸೂಕ್ಷ್ಮವಾಗಿ, ಅಮೋಘವಾಗಿದ್ದರೂ ಮಾನವವರ್ಗದ ಬಹುಜನರಿಗೆ ಪ್ರಯೋಜನವಿಲ್ಲವೆಂದು ತಾನು ನಂಬಿರುವುದಾಗಿ ಹೇಳುತ್ತಾ, "ನಾವು ಮಾನವವರ್ಗವನ್ನು ಎಲ್ಲಿ ವೇದಗಳು, ಬೈಬಲ್‌ಗಳು, ಖುರಾನ್‌ಗಳು ಇಲ್ಲವೋ, ಅಲ್ಲಿಗೆ ಕರೆದೊಯ್ಯಬೇಕು. ಆದರೂ ಕೂಡ ಈ ಮೂರರ ಐಕ್ಯತೆಯಿಂದ ಇದನ್ನು ಸಾಧಿಸಬೇಕಾಗಿದೆ. ಮಾನವ ವರ್ಗಕ್ಕೆ ಭಿನ್ನ ಭಿನ್ನ ಧರ್ಮಗಳು ಏಕವಾದ, ಒಂದೇ ಧರ್ಮದ ಅನಂತರೂಪಗಳೆಂಬುದನ್ನು ಕಲಿಸಬೇಕು. ಇದರಿಂದ ಪ್ರತಿಯೊಬ್ಬನೂ ತನಗೆ ಯಾವುದು ಉತ್ತಮ ಮಾರ್ಗವೋ ಅದನ್ನು ಆರಿಸಬಹುದು" ಎಂದಿದ್ದಾರೆ. ಜೊತೆಗೆ "ನಮ್ಮ ಮಾತೃಭೂಮಿಯಲ್ಲಿ ಹಿಂದೂ ಮತ್ತು ಮುಸಲ್ಮಾನ ಧರ್ಮಗಳೆರಡೂ ಮಿಲನವಾಗಬೇಕು. ವೇದಾಂತದ ಮಿದುಳು ಮತ್ತು ಇಸ್ಲಾಮಿನ ದೇಹ. ಇದೊಂದೇ ನಮ್ಮ ಪುರೋಗಮನದ ಹಾದಿ-ಆವಾಗಲೇ ಭಾರತದ ನವೋದಯ ಕಾಣುತ್ತದೆ" ಎಂದಿದ್ದಾರೆ.

"ಎಲ್ಲಿಯವರೆಗೆ ಧರ್ಮ ಕೆಲವೇ ಕೆಲವು ಆಯ್ದ ವ್ಯಕ್ತಿಗಳ ಕೈಯಲ್ಲಿ ಇದ್ದಿತೋ, ಆಗ ಅದು ದೇವಸ್ಥಾನ, ಚರ್ಚ್, ಮಸೀದಿ, ಶಾಸ್ತ್ರ, ಮೂಢನಂಬಿಕೆ, ಆಚಾರ-ವ್ಯವಹಾರ ಇವುಗಳಲ್ಲಿತ್ತು. ಆದರೆ ನಾವು ಎಂದು ನಿಜವಾದ ಆಧ್ಯಾತ್ಮಿಕ ಸಮಷ್ಟಿ ಭಾವನೆಗೆ ಬರುವೆವೊ ಆಗ ಮಾತ್ರ ಅದೊಂದು ಸತ್ಯವಾಗುತ್ತದೆ ಮತ್ತು ಬದುಕಿರುತ್ತದೆ, ಜೊತೆಗೆ ನಮ್ಮ ಸ್ವಭಾವದಲ್ಲಿಯೂ ವ್ಯಕ್ತವಾಗುತ್ತದೆ" ಎಂದಿದ್ದಾರೆ.

ವಿವೇಕಾನಂದರ ಈ ರೀತಿಯ ಧಾರ್ಮಿಕ ನಿಲುವುಗಳು ಹೆಚ್ಚು ಪ್ರಸ್ತುತವೆನಿಸುತ್ತದೆ. ಏಕೆಂದರೆ ಇವತ್ತು ಎಲ್ಲೆಲ್ಲೂ ಕೋಮು ವಿಚ್ಛಿದ್ರಕಾರಿ ಶಕ್ತಿಗಳು ತಲೆಯೆತ್ತಿ ಮಾನವೀಯ ಸಂಬಂಧಗಳನ್ನೆ ಕಡಿದು ಹಾಕುತ್ತಿರುವಾಗ, ಈ ರೀತಿ ಧರ್ಮದ ಮೂಲ ತಿರುಳು, ಧಾರ್ಮಿಕ ಸೌಹಾರ್ದತೆ ಇವುಗಳ ಬಗ್ಗೆ ನಾವು ಇನ್ನೊಮ್ಮೆ ವಿವೇಕಾನಂದರನ್ನು ನಮ್ಮ ಚಿಂತನೆಗೆ ಒಳಪಡಿಸಿಕೊಳ್ಳುವ ಅಗತ್ಯತೆ ಇದೆ ಎನಿಸುತ್ತದೆ.

ವಿಪರ್ಯಾಸವೆಂದರೆ, ಭಾರತೀಯ ಸಂಸ್ಕೃತಿಯ ನಿಜವಾದ ಹಿರಿಮೆ ಮತ್ತು ಸೌಹಾರ್ದತೆಯನ್ನು ಪ್ರಪಂಚಕ್ಕೆ ಸಾರಿದಂತಹ ವಿಶ್ವಧರ್ಮದ ವಿಶಾಲ ಕಲ್ಪನೆಯ ವಿವೇಕಾನಂದರನ್ನು ತಮ್ಮ ಮಾರ್ಗದರ್ಶಕರೆಂಬಂತೆ ಸೋಗು ಹಾಕುವ ಹಿಂದುತ್ವವಾದಿಗಳೆನಿಸಿಕೊಂಡವರು, ಒಂದೆಡೆ ಜಾತಿ ವ್ಯವಸ್ಥೆಯನ್ನು ಸಮರ್ಥಿಸಿಕೊಳ್ಳುತ್ತಲೇ ಅಂಬೇಡ್ಕರ್ ಬಗ್ಗೆ ಉದ್ದುದ್ದ ಭಾಷಣಬಿಗಿಯುತ್ತಿರುವುದು ಬಹುಶಃ ತಮ್ಮ ಪೊಳ್ಳುತನ ಬಯಲಾಗುತ್ತ ಬಂದಂತೆ, ಎಲ್ಲಿ ತಮ್ಮ ಅಸ್ತಿತ್ವವನ್ನೆ ಕಳೆದುಕೊಳ್ಳಬಹುದಾದ ಹೆದರಿಕೆಯಿಂದ ಈ ರೀತಿ ವರ್ತಿಸುತ್ತಿದ್ದಾರೆ ಎನಿಸುತ್ತದೆ.

ಒಟ್ಟಿನಲ್ಲಿ ಇದೆಲ್ಲಕ್ಕಿಂತ ಇವತ್ತು ಪರಸ್ಪರ ಸಹಕಾರ, ಪ್ರೀತಿ, ಸೌಹಾರ್ದಗಳಿಂದ ಮಾನವನಾಗಿ ಬದುಕುವುದು ಬಹುಮುಖ್ಯವಾಗಿದೆ.

ಆಧಾರ:

'ವಿವೇಕಾನಂದರ ಕ್ರಾಂತಿಕಾರಿ ವಿಚಾರಗಳು' — ಜ. ಹೊ. ನಾರಾಯಣಸ್ವಾಮಿ.

'ಸ್ವಾಮಿ ವಿವೇಕಾನಂದರ ಕೃತಿಸಂಗ್ರಹ'—ರಾಮಕೃಷ್ಣ ಆಶ್ರಮ — ಮೈಸೂರು.

With Best Compliments From :

LAVANYA ELECTRICALS

ELECTRICAL COTRACTORS CLASS I

21, O. P. H. Road, Bangalore-560 051

Phone : Off. : 571871 Res. : 561103

With Best Compliments From :

M P Medicals

CHEMISTS & DRUGGISTS

No. 80, Charminar Mosque Road, Near Russel Market

Bangalore-560 051

Phones : 573412, 565312

V. T. MOHAMMED ALI

ಚಿಗಟೇರಿಯ ಮುದೇನೂರ ಸಂಗಣ್ಣ

— ಟಿ.ಆರ್.ಚಂದ್ರಶೇಖರ

ಒಂದು ಸ್ಥಳ ಪ್ರಸಿದ್ಧಿಗೆ ಬರಲು ಬೇಕಾದಷ್ಟು ಕಾರಣಗಳಿರಬಹುದು. ವ್ಯಕ್ತಿಯೊಬ್ಬನ ಸದ್ಭಾವನೆ ಮತ್ತು ವಿದ್ವತ್‌ನಿಂದಲೇ ಪ್ರಸಿದ್ಧಿಗೆ ಬಂದಿರುವ ಊರುಗಳಿಗೇನು ನಮ್ಮ ದೇಶದಲ್ಲಿ ಕೊರತೆ ಇಲ್ಲ. ಎಲ್ಲಾ ದೇಶಗಳಲ್ಲೂ, ಎಲ್ಲಾ ಕಾಲಗಳಲ್ಲೂ ಇಂತಹ ಊರುಗಳು ಇದ್ದಿರಲೂ ಸಾಕು. ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಚಿಗಟೇರಿಯು ಇಂತಹ ಒಂದು ಗ್ರಾಮವಾಗಿದೆ. ಮಹಾತ್ಮ ಗಾಂಧೀಜಿ ಹೇಳುತ್ತಿದ್ದ ಭಾರತದ 'ಐದೂವರೆ ಲಕ್ಷ ಹಳ್ಳಿ'ಗಳ ಗುಂಪಿಗೆ ಸೇರುವಂತಹ ಊರು ಚಿಗಟೇರಿ.* ಕರ್ನಾಟಕ ಸಾರಸ್ವತ ಲೋಕದಲ್ಲಿ ಚಿಗಟೇರಿಗೆ ಒಂದು ಶಾಶ್ವತ ಸ್ಥಾನವನ್ನು ಮುದೇನೂರ ಸಂಗಣ್ಣನವರು ನಿರ್ಮಿಸಿಕೊಟ್ಟುಬಿಟ್ಟಿದ್ದಾರೆ. ಸಿದ್ಧರು – ಪ್ರಸಿದ್ಧರು ತಾವು ಹುಟ್ಟಿದ ಊರಲ್ಲಿ ನೆಲೆ ನಿಂತಿರುವುದು ಅಪರೂಪ. ಆದರೆ ಸಂಗಣ್ಣನವರು ತಮ್ಮ ಹುಟ್ಟಿದೂರಲ್ಲೇ ನೆಲೆ ನಿಂತಿದ್ದಾರೆ. ಕರ್ನಾಟಕ ಹೆಸರಾಂತ ಕವಿಗಳು, ನಾಟಕಕಾರರು, ನಿರ್ದೇಶಕರು, ಕತೆಗಾರರು, ಜಾನಪದ ಕಲಾವಿದರೂ — ಮುಂತಾದವರು ಸಂಗಣ್ಣನವರನ್ನು ಕಾಣಲು ಚಿಗಟೇರಿಗೆ ಬರುತ್ತಾರೆ, ಅಥವಾ ಮುದೇನೂರ ಸಂಗಣ್ಣನವರೇ ಅವರನ್ನು ಚಿಗಟೇರಿಗೆ ಬರಮಾಡಿಕೊಳ್ಳುತ್ತಾರೆ.

o o o o

* ಮಹಾತ್ಮ ಗಾಂಧೀಜಿಯವರು ಚಿಗಟೇರಿಗೆ ಬರಬೇಕಾಗಿತ್ತು. 1934ರಲ್ಲಿ 'ಹರಿಜನನಿಧಿ'ಗಾಗಿ ನಡೆಸಿದ ಯಾತ್ರೆಯಲ್ಲಿ ಗಾಂಧೀಜಿಯವರು ದಾವಣಗೆರೆಯಿಂದ ಬಳ್ಳಾರಿಗೆ ಪ್ರಯಾಣ ಮಾಡಿದರು. ದಾರಿಯುದ್ದಕ್ಕೂ ಅವರ ಕಾರ್ಯಕ್ರಮಗಳಿದ್ದವು. ದಾವಣಗೆರೆ–ಬಳ್ಳಾರಿ ಮಾರ್ಗದಲ್ಲೇ ಚಿಗಟೇರಿಯೂ ಇದೆ. ಗಾಂಧೀಜಿಯವರನ್ನು ಚಿಗಟೇರಿಗೆ ಕರೆಸಿಕೊಳ್ಳಬೇಕೆಂದು ಊರಿನ ಮುಖಂಡರು ಕರ್ನಾಟಕ ರಾಜ್ಯ ಕಾಂಗ್ರೆಸ್‌ಗೆ ಒತ್ತಾಯ ಮಾಡಿದರು. ಅದರಂತೆ ಗಾಂಧೀಜಿ ಆಗಮನಕ್ಕಾಗಿ ಸುಮಾರು ಎರಡು ಮೈಲಿ ರಸ್ತೆಯನ್ನು ಸ್ವಂತ ಖರ್ಚಿನಲ್ಲಿ ಮುದೇನೂರ ಸಂಗಣ್ಣನವರ ತಂದೆ ಕೊಟ್ರ ಬಸಪ್ಪನವರು ನಿರ್ಮಿಸಿದ್ದರು. ಆದರೆ ಕಾರ್ಯಕ್ರಮ ಪಟ್ಟಿಯಲ್ಲಿ ಚಿಗಟೇರಿ ಇಲ್ಲವೆಂದು ಗಾಂಧೀಜಿಯವರು ಚಿಗಟೇರಿಗೆ ಬರಲಿಲ್ಲ. ರಾಜ್ಯ ಕಾಂಗ್ರೆಸ್ ಮುಖಂಡರು ಗಾಂಧೀಜಿಗೆ ಚಿಗಟೇರಿ ಕಾರ್ಯಕ್ರಮ ತಿಳಿಸಿರಲಿಲ್ಲ. ಚಿಗಟೇರಿ ಜನರನ್ನು ಸಮಾಧಾನ ಪಡಿಸಲು ಗಾಂಧೀಜಿಯವರು ದಿವಾಕರ ರಾಯರನ್ನು ಚಿಗಟೇರಿಗೆ ಕಳುಹಿಸಿದರು. ಅವರನ್ನು ಚಿಗಟೇರಿ ಜನ ಊರೊಳಗೆ ಕರೆದುಕೊಳ್ಳಲಿಲ್ಲ. ಕಲ್ಲುಗಳ ತೂರಾಟದ ಸ್ವಾಗತ ದೊರೆಯಿತು. ಅಂತೂ ಗಾಂಧೀಜಿ ಚಿಗಟೇರಿಗೆ ಬರಲಿಲ್ಲ. ಗಾಂಧೀಜಿ ಬರಲಿಲ್ಲ ಎಂದು ಚಿಗಟೇರಿಗೆ ಕುಂದೇನು ಉಂಟಾಗಲಿಲ್ಲ. ಆದರೆ ಗಾಂಧೀಜಿಯವರು ಚಿಗಟೇರಿಗೆ ಬರುವುದನ್ನು ತಪ್ಪಿಸಿದವರಿಗೆ ಕಲ್ಲೇಟು ಮಾತ್ರ ಬಿದ್ದವು.

ಟಿ.ಆರ್. ಚಂದ್ರಶೇಖರ, ಅರ್ಥಶಾಸ್ತ್ರ ವಿಭಾಗ, ವಿಜಯನಗರ ಕಾಲೇಜು
ಹೊಸಪೇಟೆ—583 201, ಬಳ್ಳಾರಿ ಜಿಲ್ಲೆ

ಮುಂದೇನೂರ ಸಂಗಣ್ಣನವರಿಂದ ಚಿಗಟೇರಿಗೆ ಮಹತ್ವ ಬಂದಿದೆ. ಚಿಗಟೇರಿಯಲ್ಲಿ ಅಪರೂಪದ ನಾರದ ಮುನಿಯ ದೇವಾಲಯವಿದೆ. ಸಂಗಣ್ಣನವರಿದ್ದಾರೆ. ಅದೆಷ್ಟೋ ಮೀಟರ್ ಉದ್ದದ ಜಾನಪದ ಹಾಡುಗಳ ಧ್ವನಿಮುದ್ರಿತ ಸುರಳಿಗಳು ಅವರ ಮನೆಯಲ್ಲಿದ್ದಾವೆ. ಗಾಲ್‌ಬ್ರೆತ್‌ನ ಮುನ್ನುಡಿ ಹೊಂದಿರುವ ವೆಬ್ಲನ್‌ನ 'The theory of leisure class' ನಿಂದ ಹಿಡಿದು ಡೆವಿಡ್ ಅಟನ್‌ಬರೋ ನ 'The living planet' ನವರೆಗೆ ವೈವಿಧ್ಯಮಯ ವಿಷಯಗಳನ್ನು ಕುರಿತ ಗ್ರಂಥಗಳ ದೊಡ್ಡ ಭಂಡಾರ ಅವರಲ್ಲಿದೆ. ಮದುವೆ, ಹುಟ್ಟಿದ ಹಬ್ಬ, ಗೃಹಪ್ರವೇಶ ಮುಂತಾದ ಉತ್ಸವ ಸಂದರ್ಭಗಳಲ್ಲಿ ನಾವು–ನೀವು ಬಜಾರಿನ ಗಿಲೀಟು ವಸ್ತುಗಳನ್ನು ಕಾಣಿಕೆ ನೀಡುವ ಅಭಿರುಚಿ ಹೊಂದಿದ್ದರೆ, ಮುಂದೇನೂರ ಸಂಗಣ್ಣನವರು ಇಂತಹ ಸಂದರ್ಭಗಳಲ್ಲಿ ಉತ್ಕೃಷ್ಟವಾದ ಗ್ರಂಥಗಳನ್ನು ಕೊಡುಗೆಯಾಗಿ ನೀಡುತ್ತಾರೆ. ಇದಕ್ಕಾಗಿ ಅವರು ಪುಸ್ತಕ ಕೊಳ್ಳುವಾಗ ಹತ್ತಾರು ಪ್ರತಿಗಳನ್ನು ಕೊಳ್ಳುತ್ತಾರೆ. ಕವಿಗಳು, ಲೇಖಕರು ತಾವು ಪ್ರಕಟಿಸಿದ ಗ್ರಂಥಗಳ ಹತ್ತಾರು ಪ್ರತಿಗಳನ್ನು ಇವರಿಗೆ ಕಳುಹಿಸಿಬಿಡುತ್ತಾರೆ (ಹಣ ಗ್ಯಾರಂಟಿ).

ಭಾರತದ ಪ್ರಸಿದ್ಧ ಹಿಂದೂಸ್ತಾನಿ ಸಂಗೀತಗಾರರ ಧ್ವನಿಸುರಳಿಗಳು ಇವರಲ್ಲಿ ಸಿಗುತ್ತಾವೆ. 'India To-day' ದವರು ಇತ್ತೀಚೆಗೆ ಬಿಡುಗಡೆ ಮಾಡಿದ 'ರಾತ್ರಿ ರಾಗಗಳು', 'ಮುಂಜಾನೆ ರಾಗಗಳು' ಕ್ಯಾಸೆಟ್ಟುಗಳನ್ನು ಚಿಗಟೇರಿಯಲ್ಲಿ ಆಲಿಸಬಹುದು. (ರಾತ್ರಿರಾಗ, ಮುಂಜಾನೆ ರಾಗ ಎಂಬ ಶೀರ್ಷಿಕೆ ಬಗ್ಗೆ ನನ್ನ ಅಸಮಾಧಾನವನ್ನು ಸಂಗಣ್ಣನವರ ಮುಂದೆ ವ್ಯಕ್ತಪಡಿಸಿದೆ. ಅವರು ಗುಣಗ್ರಾಹಿಗಳು. 'ರಾಗ ಕೇಳಿ ಸಾರ್' ಎಂದುಬಿಟ್ಟರು.) ಹಿಂದೂಸ್ತಾನಿ ಸಂಗೀತದ ಬಗ್ಗೆ ಅವರಿಗೆ ಹೆಚ್ಚಿನ ಪ್ರೀತಿ.

o o o o

ಮುಂದೇನೂರ ಸಂಗಣ್ಣನವರು ವ್ಯಾಪಾರಿಗಳು. ತಂಬಾಕು ವ್ಯಾಪಾರಿಗಳು. ಊರೂರು ಸುತ್ತುತ್ತಾರೆ. ಕಚ್ಚೆ ಪಂಚೆ, ಮಾಸಲು ಬಣ್ಣದ ಶರಟು. ಉದ್ದವೆಂದೇ ಹೇಳಬಹುದಾದ ಬಿಳಿಕೂದಲು. ಹೆಗಲ ಮೇಲೊಂದು ಶಾಲು. ಅದರ ಜೊತೆಗೆ ನೇತಾಡುವ ಖಾಕಿ ಚೀಲ. ಅದರ ತುಂಬಾ ಪುಸ್ತಕಗಳು. ಬೆಳ್ಳಿಕಟ್ಟಿನ ಕನ್ನಡಕ. ದೂರದಿಂದಲೇ ಗುರುತಿಸಬಹುದಾದ ವಿಶಿಷ್ಟ ರೂಪ. ಇವರು ಸಂಗಣ್ಣನವರು.

ಹೆಚ್.ಎಲ್. ನಾಗೇಗೌಡರ ಜಾನಪದಲೋಕಕ್ಕೆ ಹೋಗ್ತಾರೆ. ತಿಪಟೂರು ಪಕ್ಕದ ಕೊನೇಯುಹಳ್ಳಿಗೆ ಮೂಡಲಪಾಯ ಬಯಲಾಟ ನೋಡಲು ಹೋಗ್ತಾರೆ. ಮಂಗಳೂರು–ಉಡುಪಿ–ಮಣಿಪಾಲಗಳಿಗೆ ಹೋಗಿ ಕು.ಶಿ., ಕಾರಂತರನ್ನು ನೋಡ್ತಾರೆ. ಹೆಗ್ಗೋಡಿಗೆ ಹೋಗಿ ನಾಟಕ_ಸುಬ್ಬಣ್ಣ ನೋಡ್ತಾರೆ. ದಾವಣಗೆರೆಯಲ್ಲಿ ಇವರದ್ದೊಂದು ದೊಡ್ಡ ಆಪ್ತರ ಬಳಗ ಇದೆ. ಹೊಸಪೇಟೆಗೆ ಬಂದು ಡಾ॥ ಬಸವರಾಜ ಮಲಶೆಟ್ಟಿ–ಟಿ.ಆರ್. ಚಂದ್ರಶೇಖರ ರವರಲ್ಲಿ ತಂಗುತ್ತಾರೆ. ವ್ಯಾಪಾರದ ನಿಮಿತ್ತ ನಿಪ್ಪಾಣಿ, ಸೊಲ್ಲಾಪುರ,

ಕೂದ್ರ

ಬೆಳಗಾಂ ಸುತ್ತುತ್ತಾರೆ. ಕನ್ನಡ ಮತ್ತು ಇಂಗ್ಲಿಷ್ ಅಲ್ಲದೆ ಹಿಂದಿ ಮತ್ತು ಮರಾಠಿ ಭಾಷೆಗಳಲ್ಲಿ ಪುಸ್ತಕಗಳನ್ನು ಓದುತ್ತಾರೆ. ಜಾನಪದ ಕಲೆ-ಕಲಾಕಾರರನ್ನು ಹುಡುಕಿ ಕೊಂಡು ಊರು-ಕೊಂಪೆಗಳನ್ನು ಸುತ್ತುತ್ತಾರೆ. ಇವರು ಮುದೇನೂರು ಸಂಗಣ್ಣ.

o o o o

ಚಿಗಟೇರಿಯ ಸಂಗಣ್ಣನವರ ಮನೆಗೆ ನೂರಾರು ಸಿದ್ಧರು-ಪ್ರಸಿದ್ಧರು ಬಂದಿದ್ದಾರೆ. ಬೇಂದ್ರೆ ಬಂದಿದ್ದಾರೆ. ಕಾರಂತರು ಎರಡು-ಮೂರು ವರ್ಷಗಳಿಗೊಮ್ಮೆ ಸಂಗಣ್ಣ ನವರನ್ನು ನೋಡಲಿಕ್ಕಾಗೇ ಚಿಗಟೇರಿಗೆ ಬರುತ್ತಾರೆ. ಇವರಿಬ್ಬರ ನಂಟು ನಾಲ್ಕಾರು ದಶಕಗಳಷ್ಟು ಹಳೆಯದು. ಕೆ.ವಿ. ಸುಬ್ಬಣ್ಣ, ಪ್ರಸನ್ನ, ಕು.ಶಿ., ಕಂಬಾರ, ಜಯ ತೀರ್ಥ ಜೋಷಿ, ವಾಜಪೇಯಿ (ಗೋಪಾಲ), ವೈಕುಂಠರಾಜು, ಹೆಚ್.ಎಲ್. ನಾಗೇ ಗೌಡ, ಸಿದ್ಧಲಿಂಗಯ್ಯ, ಎಂ ಪಿ. ಪ್ರಕಾಶ, ಕುಂ.ವೀ; ವಿಶ್ವನಾಥರೆಡ್ಡಿ, ಬಿ.ವಿ. ವೀರ ಭದ್ರಪ್ಪ ...ಹೀಗೆ ಚಿಗಟೇರಿಯಲ್ಲಿ ಸಂಗಣ್ಣನವರ ಮನೆಯಲ್ಲಿ ಆತಿಥ್ಯ ಅನುಭವಿಸಿದವರ ದೊಡ್ಡ ಪಟ್ಟಿ ಇದೆ.

ಮನೆಕಟ್ಟಿಸುವಾಗ ಅಥವಾ ಕಷ್ಟದಲ್ಲಿದ್ದಾಗ ಕೆಲವು ಸಾಹಿತಿಗಳು ಇವರಿಂದ ಹಣ ಸಹಾಯ ಪಡೆದವರುಂಟು. ನೆರವು ಪಡೆದಾದಮೇಲೆ-ಹಣ ಕೊಟ್ಟೇ ಇಲ್ಲ ಎಂದ ಸಾಹಿತಿ ಗಳೂ ಉಂಟು. ಅಂತಹ ಸಮಯದಲ್ಲಿ ಹಣ ಕೊಟ್ಟಿದ್ದು ನಿಜವೇ ಎಂದು ಇವರು ತಲೆ ಕೆಡಿಸಿಕೊಂಡದ್ದು ಉಂಟು. ಹಣ-ಕೊಟ್ಟಿದ್ದು ಗ್ಯಾರಂಟಿಯಾದ ಮೇಲೆ ಅವರಿಗೆ ತೃಪ್ತಿ. ಹಣ ವಾಪಸ್ಸು ಬರದಿದ್ದರೂ ಬೇಡ. ಸುಳ್ಳ ಎನಿಸಿಕೊಳ್ಳಬಾರದು ಎಂಬುದು ಅವರ ನೀತಿ.

o o o o

ಮೊನ್ನೆ ಜನವರಿ 19 ರಂದು ನಾನು ಚಿಗಟೇರಿಗೆ ಹೋಗಿದ್ದೆ. ವಾಸ್ತವವಾಗಿ ಅವರು ನಮ್ಮನ್ನು ಕರೆಸಿಕೊಂಡಿದ್ದರು. ನನ್ನದೇನು ಅಲ್ಲಿಗೆ ಪ್ರಥಮ ಪ್ರಯಾಣವಾಗಿರಲಿಲ್ಲ. ಆದರೂ ಅಲ್ಲಿಗೆ ಬಸ್ ಪ್ರಯಾಣ ಸಾಹಸಮಯವಾಗಿತ್ತು. ಗ್ರಾಮಾಂತರ ಪ್ರದೇಶ ದಲ್ಲಿ ಜನರ ಪ್ರಯಾಣದ ಪ್ರಯಾಸವನ್ನು ಅನುಭವಿಸಿಯೇ ತಿಳಿಯಬೇಕು. ಬಸ್ಸಿ ನೊಳಗೆ ಸೀಟಿಗಾಗಿ ಕಾದಾಟ. ಬಸ್ಸಿನೊಳಕ್ಕೆ ನುಗ್ಗಲು ಹೋರಾಟ. ಬಸ್ಸಿನ ಟಾಪ್ ಮೇಲೆ ಏರಲು ಜಗ್ಗಾಟ. ಇತ್ತೀಚೆಗಂತೂ ಬಸ್ಸಿನ ಟಾಪ್ ಮೇಲೆ ಪ್ರಯಾಣಿಸುವುದು ಸಾಮಾನ್ಯವಾಗಿ ಬಿಟ್ಟಿದೆ. ಅಲ್ಲಿ ಕುಂತವರಿಗೆ ಕಂಡಕ್ಟರ್ ಅದ್ಹೇಗೆ ಟಿಕೆಟ್ ಕೊಡು ತ್ತಾನೋ ದೇವರೆ ಬಲ್ಲ! ಅಥವಾ ಕೆ.ಜೆ. ಜಾರ್ಜ್ ಅವರೇ ಬಲ್ಲರು!

ದಾವಣಗೆರೆಯ ಸಂಗಣ್ಣನವರ ಆಪ್ತರೆಲ್ಲಾ ಚಿಗಟೇರಿಯಲ್ಲಿ ಒಂದು ಸಂಗೀತ ಕಛೇರಿ ಏರ್ಪಡಿಸಿದ್ದರು. ಡಾ॥ ಪ್ರತ್ಯೂಷಾ ದಾಸ್‌ಗುಪ್ತರವರು ದಾವಣಗೆರೆಯಲ್ಲಿ ಎಂ.ಡಿ.

ಮಾಡುತ್ತಿದ್ದಾರೆ. ಬಂಗಾಳದವರು. ಪ್ರಸಿದ್ಧ ಹಿಂದೂಸ್ತಾನಿ ವಿದೂಷಿ. ಆಕೆಯ ಸಂಗೀತ ಕಛೇರಿ ಚಿಗಟೇರಿಯ ಸಂಗಣ್ಣನವರ ಮನೆಯಲ್ಲಿ ದೂರದ–ಹತ್ತಿರದ ಆಪ್ತರಿಗೆಲ್ಲಾ ಸಂಗಣ್ಣನವರ ಆಮಂತ್ರಣ. ರಾತ್ರಿ 10 ಗಂಟೆಗೆ ಕಛೇರಿ ಪ್ರಾರಂಭ. ತಡವಾಗಿ ಕಛೇರಿ ಪ್ರಾರಂಭವಾಗಲು ನಮ್ಮ ಗ್ರಾಮಾಂತರ ಪ್ರದೇಶದ ಮತ್ತೊಂದು ವಿಶೇಷವಾದ ವಿದ್ಯುತ್ ಕಡಿತ ಕಾರಣ.

ಮಾಲ್‌ಕಾಂಸ್ ರಾಗವನ್ನು ಡಾ॥ ಪ್ರತ್ಯೂಷಾರವರು ಪ್ರಸ್ತುತಪಡಿಸಿದರು, ಸಂಗೀತದಲ್ಲಿ ನನಗೆ ಅಭಿರುಚಿ ಇದೆ, ನಿಜ. ಆದರೆ ಅದರ ಶಿಸ್ತು, ಗತಿ, ಶಿಕ್ಷಣ ಇಲ್ಲ. ಶ್ರೀಮತಿ ಪ್ರತ್ಯೂಷಾರವರ ಗಾಯನವು ನಮ್ಮ ಮನಸ್ಸನ್ನೆಲ್ಲಾ ತುಂಬಿಬಿಟ್ಟಿತು. ಕಛೇರಿಯು ರಂಗೇರಿದಂತೆ ಪ್ರತ್ಯೂಷಾರವರ ಇಡೀ ದೇಹ ನಾದಮಯವಾದಂತೆ ನನಗೆ ಅನುಭವವಾಗುತ್ತಿತ್ತು. ಆಕೆಯ ನರನಾಡಿಗಳೂ ರಾಗವನ್ನು ಹೊರಹೊಮ್ಮಿಸುತ್ತಿರುವಂತೆ ಭಾಸವಾಗುತ್ತಿತ್ತು.

ನಾಭಿಯಿಂದ ಹೊರಟು, ವಾಯುನಾಳದಲ್ಲಿ ಸಂಸ್ಕಾರಗೊಂಡು, ಲಯದ ಸಹಚರ್ಯೆ ಪಡೆದು ಮತ್ತು ಶೃತಿಯ ಸಹಯೋಗ ಪಡೆದು ಹೊರಬರುತ್ತಿದ್ದ ನಾದವು ಶ್ರೋತೃಗಳ ಮನಸ್ಸನ್ನು ತಣಿಸುತ್ತಿತ್ತು. ಶಿಲ್ಪಿಯೊಬ್ಬನ ರೀತಿಯಲ್ಲಿ ಆಕೆಯು ರಾಗವನ್ನು ಕಡೆದ ರೀತಿಯು ಅವಿಸ್ಮರಣೀಯವಾಗಿತ್ತು. ಮೊದಲು ಸಾವಕಾಶವಾಗಿ ಮಂದಗತಿಯಲ್ಲಿ ರಾಗದ ಬುನಾದಿ ನಿರ್ಮಾಣ ಮಾಡಲಾಯಿತು. ನಂತರ ರಾಗದ ವೈವಿಧ್ಯತೆ ಮತ್ತು ವೈಶಿಷ್ಟ್ಯಗಳನ್ನು ಪರಿಚಯಿಸಿದರು. ಹೀಗೆ ರಾಗದ ಶರೀರ ನಿರ್ಮಾಣವಾದ ಮೇಲೆ ಧೃತಗತಿಯಲ್ಲಿ ಅದರ ಗೋಪುರವನ್ನು ಡಾ॥ ಪ್ರತ್ಯೂಷಾ ನಿರ್ಮಿಸಿದರು. ಧೃತಗತಿಯಲ್ಲಿ ರಾಗವು ಶಿಬಿರಾಗ್ರಹಣ ಮಾಡಿದ ರೀತಿಯಂತೂ ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿಸಿತು. ಸುಮಾರು ಒಂದು ಗಂಟೆಗಳ ಕಾಲ ರಾಗವನ್ನು ಪ್ರಸ್ತುತಪಡಿಸಿದರು. ರಾಗವು ಮುಗಿದ ಮೇಲೆ ಡಾ॥ಪ್ರತ್ಯೂಷಾರವರು ಬಳಲಿದಂತೆ ಕಂಡರು. ರಾಗದ ಗಾಯನವು ಎಷ್ಟು ಪ್ರಯಾಸದಾಯಕ ಎಂಬುದು ನನಗೆ ಅಂದು ತಿಳಿಯಿತು. ಉಪನ್ಯಾಸಕನೊಬ್ಬನ ಶಕ್ತಿ–ಸಾಮರ್ಥ್ಯಗಳೆಲ್ಲವನ್ನೂ ಸಂಗೀತ ಆಪೋಶನ ಮಾಡಿಬಿಡುತ್ತದೆ.

o o o o

ಚಿಗಟೇರಿಯ ಸಂಗಣ್ಣನವರ ಮನೆಯಲ್ಲಿ ಡಾ॥ಪ್ರತ್ಯೂಷಾರವರ ಕಛೇರಿ ನಡೆಯಲು ಕಾರಣರಾಗಿದ್ದವರು ಡಾ॥ ವಾಲ್ಮೀಕಿ. ದಾವಣಗೆರೆಯ ವೈದ್ಯಕೀಯ ಕಾಲೇಜಿನಲ್ಲಿ ಬೋಧನೆಗೈಯುತ್ತಿರುವ ಇವರೂ ಕೂಡ ಸಂಗೀತದ ಉಪಾಸಕರು. ಡಾ॥ ಪ್ರತ್ಯೂಷಾರವರ ಮಾಲ್‌ಕಾಂಸ್ ರಾಗ ಮುಗಿದ ಮೇಲೆ ಗವಾಯಿಗಳ ಸಲಹೆ

ಮೇರೆಗೆ ತಂಬೂರಿ ಶೃತಿ ಮೀಟುತ್ತಿದ್ದ ಡಾ॥ ವಾಲ್ಮೀಕಿಯವರ ಮಗಳು ಕು॥ ಸ್ನೇಹಾ ದಾಸರಪದ ಮತ್ತು ವಚನಗಳನ್ನು ಹಾಡಿದಳು. 13–14 ವರ್ಷದ ಬಾಲಕಿ ಕು॥ ಸ್ನೇಹಾ 'ನಗೆಯು ಬರುತಿದೆ ಎನಗೆ ನಗೆಯು ಬರುತಿದೆ' ಎಂಬ ದಾಸರಪದವನ್ನು ಭಾವಪೂರ್ಣ ವಾಗಿ ಹಾಡಿ ನಮ್ಮೆಲ್ಲರ ಶಾಭಾಸ್‌ಗಿರಿ ಗಿಟ್ಟಿಸಿಕೊಂಡುಬಿಟ್ಟಳು. ವಯಸ್ಸಿಗೆ ಮೀರಿದ ಸಾಧನೆ ಆಕೆಯದಾಗಿತ್ತು. ಕೀರ್ತನೆಗಳ ಭಾವವನ್ನು ಅರ್ಥೈಸಿಕೊಂಡು ಹಾಡುವವರು ಬಹಳ ವಿರಳ. ಗಿಳಿಪಾಠ ಒಪ್ಪಿಸುವವರೆ ಬಹಳ. ಆದರೆ ಕು॥ ಸ್ನೇಹಾ ಅಂತಹ ಹಾಡುಗಾರ್ತಿಯಲ್ಲ. 'ಕಂಗಳು ತುಂಬಿದ ಬಳಿಕ ನೋಡಲಿಲ್ಲ' ಎಂಬ ವಚನವನ್ನು ಹಾಡಿ ನಮ್ಮೆಲ್ಲರನ್ನೂ ಮಂತ್ರಮುಗ್ಧರನ್ನಾಗಿಸಿಬಿಟ್ಟಳು. ಉಜ್ವಲವಾದ ಭವಿಷ್ಯವಿರುವ ಕು॥ ಸ್ನೇಹಾ ನಾವೆಲ್ಲಾ ಕಾದು ನೋಡಬೇಕಾಗಿರುವ ಕಲಾವಿದೆ.

೦ ೦ ೦ ೦

ರಾತ್ರಿ ಒಂದು ಗಂಟೆಗೆ ಕಛೇರಿ ಮುಗಿಯಿತು. ನಂತರ ಊಟ. ಚಿಗಟೇರಿಯ ಸಂಗಣ್ಣನವರ ಮನೆ ಊಟದ ಬಗ್ಗೆ ಬರೆಯದಿದ್ದರೆ ನನ್ನ ಈ ಟಿಪ್ಪಣಿ ಪರಿಪೂರ್ಣ ವಾಗುವುದಿಲ್ಲ. ಉತ್ತರ ಕರ್ನಾಟಕ ಭಾಗದ ಊಟದ ವಿಶೇಷವನ್ನು ಅನುಭವಿಸಿಯೇ ಹೇಳಬೇಕು.

ಜೋಳದ ರೊಟ್ಟಿ, ಹುರುಳಿ ಎಲೆಯಷ್ಟು ತೆಳ್ಳಗಿನ ರೊಟ್ಟಿ. ಇದರಲ್ಲಿ ಎರಡು ವಿಧ : ಕಟಕು ರೊಟ್ಟಿ ಮತ್ತು ಮೆತ್ತಗಿನ ರೊಟ್ಟಿ. ಇದರ ಜೊತೆಗೆ ಸಜ್ಜೆ ರೊಟ್ಟಿ. ಸಜ್ಜೆರೊಟ್ಟಿ ಮಾಡುವಾಗ ಅದಕ್ಕೆ ಎಳ್ಳು ಹಚ್ಚಿರುತ್ತಾರೆ. ಇವುಗಳಿಗೆ ಪಲ್ಯಗಳು :

ಅ. ಚಟ್ನಿಪುಡಿಗಳು, ಸೇಂಗಾಚಟ್ನಿ, ಗುರೆಳ್ಳು ಚಟ್ನಿ (ಹುಚ್ಚೆಳ್ಳು), ಪುಟಾಣಿ ಚಟ್ನಿ – ಈ ಚಟ್ನಿಪುಡಿಗಳನ್ನು ಕಲೆಸಿಕೊಳ್ಳಲು ಕೆನೆಮೊಸರು.

ಆ. ಹಸಿ ತರಕಾರಿ: ಸೌತೆಕಾಯಿ, ಮೂಲಂಗಿ, ಗಜ್ಜರಿಯ ಹಸಿಹೋಳುಗಳು.

ಇ. ಎಣ್ಣೆಗಾಯಿ ಬದನೆಕಾಯಿ.

ಈ. ಹುಣಸೆಕಾಯಿ ತೊಕ್ಕು (ಉಪ್ಪಿನಕಾಯಿ).

ಉ. ಕರದ ಮೆಣಸಿನಕಾಯಿ (ಮೊಸರಿನಲ್ಲಿ ನೆನಸಿದ).

ಇವೆಲ್ಲವುಗಳ ಜೊತೆಗೆ ಕೋಸಿನ ಪಲ್ಯ, ಸಂಡಿಗೆ, ಹಪ್ಪಳ....ಇತ್ಯಾದಿ. ಇಷ್ಟೆಲ್ಲವೂ ಎಲೆ ಮೇಲೆ ಇದ್ದಾಗ ಯಾವುದನ್ನು ತಿನ್ನೀರಿ, ಯಾವುದನ್ನು ಬಿಡ್ತೀರಿ! ಸಂಗಣ್ಣನವರು ಊಟದ ತಯಾರಿಯಲ್ಲೂ ತಮ್ಮ ನೆಲದ ಗುಣವನ್ನು ಬಿಟ್ಟುಕೊಡುವವರಲ್ಲ. ಮಣ್ಣಿನ ಗುಣವನ್ನು ರವಷ್ಟು ಬಿಟ್ಟುಕೊಡದ ಮುಂದೇನೂರ ಸಂಗಣ್ಣನವರು ನಮ್ಮ ನಿಜವಾದ ಜಾನಪದ ತಜ್ಞರಾಗಿದ್ದಾರೆ. ●

ಕನಸಿಗೊಂದು ಕಣ್ಣು

'ಕನಸಿಗೊಂದು ಕಣ್ಣು' ಈ ಸಂಚಿಕೆಗೆ ಬರೆಯಲಾಗಲಿಲ್ಲ ಎಜ್ರಾ ಪೌಂಡ್‌ರವರ ಕವನಗಳನ್ನು ಲಂಕೇಶ್‌ರವರು ಮತ್ತು ಬಸವರಾಜ್ ಅರಸುರವರು ಓದುತ್ತಿರುವಾಗ ಈ ಕವನವನ್ನು ಇಲ್ಲಿ ಪ್ರಕಟಿಸಬೇಕು ಅನ್ನಿಸಿತು.

— ಶೂದ್ರ

A Girl

The tree has entered my hands,
The Sap has ascended my arms,
The tree has grown in my breast-
Downward,
The branches grow out of me, like arms.

Tree you are,
Moss you are,
You are violets with wind above them.
A child - so high - you are,
And all this is folly to the world.

— Ezra Found

ವಿಮರ್ಶೆಗೆ ಬಂದ ಪುಸ್ತಕಗಳು – ವಿಮರ್ಶೆಗೆ ಮುನ್ನ

ಹಸಿವಿನ ಲೋಕ (ಕವನಸಂಕಲನ): ಐ.ಆರ್. ಪೆರುಮಾಳ್, ಚಲನ ಪ್ರಕಾಶನ ಸಹಕಾರಿ, ತುಮಕೂರು–2, ಬೆಲೆ : 20 ರೂ. ಉತ್ತಮ ಕಾವ್ಯ ಹೃದಯವನ್ನು ಹೊಂದಿರುವ ಪೆರುಮಾಳ್‌ರವರು ಐ.ಎ.ಎಸ್. ಅಧಿಕಾರಿ. ಕ್ರಿಯಾಶೀಲತೆ ಮತ್ತು ಪ್ರಾಮಾಣಿಕತೆಯನ್ನು ಹೊಂದಿರುವ ಅಧಿಕಾರಿ. ಆದ್ದರಿಂದಲೇ ಈ ಸಂಕಲನದ ಕವನಗಳಿಗೆ ಅರ್ಥವಂತಿಕೆ ಇದೆ. ತಮಿಳಿನಲ್ಲಿ (ಕನ್ನಡ ಬಲ್ಲ) ಬರೆಯುವ ಇವರು ಕರ್ನಾಟಕದಲ್ಲಿ ಅಧಿಕಾರಿ. ವೀಚಿಯವರ ಓದಬಹುದಾದ ಭಾವಾನುವಾದದಿಂದ ಈ ಸಂಕಲನಕ್ಕೆ ಮತ್ತಷ್ಟು ಮೆರಗು ಬಂದಿದೆ.

ಸರ್ಕಾರಿ ಹನಿಮೂನು (ನಗೆಬರಹಗಳ ಸಂಕಲನ) : ಎಂ. ಎಸ್. ನರಸಿಂಹ ಮೂರ್ತಿ, ವಿಶ್ವಾಸ ಪ್ರಕಾಶನ, 'ವಿಶ್ವಾಸ್', ವಿ.ವಿ. ಬಡಾವಣೆ, ಹೊಸಕೋಟೆ–14, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಲೆ: 15 ರೂ. ನರಸಿಂಹಮೂರ್ತಿಯವರು ಇತ್ತೀಚಿನ ವರ್ಷಗಳಲ್ಲಿ ತುಂಬ ಚೆನ್ನಾಗಿ ಬರೆಯುತ್ತಿರುವ ಹಾಸ್ಯಲೇಖಕರು. ನಮ್ಮ ಜನ ಹಾಸ್ಯ ಮತ್ತು ನಗುವನ್ನು ಕಳೆದುಕೊಳ್ಳುತ್ತಿರುವ ದಿನಗಳಲ್ಲಿ ಮೂರ್ತಿಯವರು ಲವಲವಿಕೆಯಿಂದ ಬರೆಯುತ್ತಿದ್ದಾರೆ. ಬೀchiಯವರಿಗಿದ್ದ ರ್‍ಯಾಷನಲಿಸಂನ್ನು ಸ್ವಲ್ಪ ಮಟ್ಟಿಗಾದರೂ ರೂಢಿಸಿಕೊಂಡರೆ ಇವರ ಬರವಣಿಗೆಗೆ ಮತ್ತಷ್ಟು ಶಕ್ತಿ ಬರುತ್ತದೆ.

ಮಾತನಾಡುವ ಮೌನ (ಕವನಸಂಕಲನ) : ಸುಂದರ ನಾಡಕರ್ಣಿ, ಅಭಿವ್ಯಕ್ತಿ ಪ್ರಕಾಶನ, ನಂ. 199/ಎ, 5ನೇ ಮೈನ್, 4ನೇ ಬ್ಲಾಕ್; ರಾಜಾಜಿನಗರ, ಬೆಂಗಳೂರು, ಬೆಲೆ: 16 ರೂ. ಗೋಕಾಕ್‌ರವರ ಕಾವ್ಯಶೈಲಿಯಲ್ಲಿ ಎದ್ದುಕಾಣುವ ಈ ಸಂಕಲನದ ಕವನಗಳು ಗಂಭೀರತೆಯ ದೃಷ್ಟಿಯಿಂದ ಓದಿಸಿಕೊಳ್ಳುವ ಕವನಗಳು. ಇದು ನಾಡಕರ್ಣಿಯವರ ಮೂರನೆಯ ಸಂಕಲನ. ಇಲ್ಲಿ ಜಾಹಿರಾತಿನ ಹುಡುಗಿ, ಟ್ಯಾಪಿಸ್ಟ್‌ಗರ್ಲಿನ ಬೆರಳುಗಳು, ಇಪ್ಪತ್ತೊಂದು (ಶತಮಾನ), ನಾನು ಮತ್ತು ಶಹರ, ಒಬ್ಬ ಶಿಕ್ಷಕನ ವೃತ್ತಾಂತ, ಮೌನದ ಮನೆ, ಆತಂಕ ಉತ್ತಮ ಕವನಗಳು.

ಭಾರತೀಕರಣ (ಕಾದಂಬರಿ) : ಬಸವೇಗೌಡ, ಅಭಿವ್ಯಕ್ತಿ ಪ್ರಕಾಶನ, ಬೆಲೆ : 25 ರೂ. ಆದರ್ಶದ ಚೌಕಟ್ಟಿನಲ್ಲಿ ಬರೆದಿರುವ ಕಾದಂಬರಿ. ಆದರೆ ಆ ಆದರ್ಶಕ್ಕೆ ವೈಚಾರಿಕತೆ ಬೇಕಲ್ಲವೆ ? ಚೆನ್ನಾಗಿ ಬರೆಯಬಹುದಾದ ಬಸವೇಗೌಡರು ಒಟ್ಟು ಸಮಾಜವನ್ನು ನೋಡುವ ಕ್ರಮವೇ ಬೇರೆಯಾಗಬೇಕಾಗುತ್ತದೆ. ಇಲ್ಲದಿದ್ದಲ್ಲಿ ಇಂಥ ಕೃತಿಗಳನ್ನು ಸಂಪ್ರದಾಯವಾದಿಗಳು ದುರುಪಯೋಗಪಡಿಸಿಕೊಳ್ಳುತ್ತಾರೆ.

ಮಿಂಚುಹುಳುಗಳು (ಕವನಗಳು) : ವಿದ್ಯಾರ್ಥಿಗಳು, ಕ್ರೈಸ್ಟ್ ಕಾಲೇಜ್, ಬೆಂಗಳೂರು, ಬೆಲೆ : 6 ರೂ.

ಬಹುಮಾನಿತ ಲೇಖನಗಳು : ವಿದ್ಯಾರ್ಥಿಗಳು, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು-29. ಈ ಎರಡೂ ಕೃತಿಗಳು ಎಂದಿನಂತೆ ಕ್ರೈಸ್ಟ್ ಕಾಲೇಜಿನ ಶ್ರೀನಿವಾಸರಾಜುರವರ ಕ್ರಿಯಾಶೀಲತೆಗೆ ಸಾಕ್ಷಿ. ಉತ್ತಮ ಲೇಖಕರನ್ನು ಬೆಳೆಸುವ ಮಾದರಿ.

ಸಿಕ್ಕಿದ್ದು (ಕಾದಂಬರಿ) : ಮೋಹನದಾಸ್ ಧಾವಸ್ಕರ್, ಸ್ವಂತ ಪ್ರಕಾಶನ, ನಂ. 91, 'ಧರ್ಮಶ್ರೀ', ಶಂಕರಪುರಂ, ಬೆಂಗಳೂರು-4, ಬೆಲೆ : 22 ರೂ. ಧಾವಸ್ಕರ್‌ರವರು ಗಂಭೀರವಾಗಿ ಕವನ ಬರೆಯುತ್ತಾರೆ ಎಂದು ತಿಳಿದಿದ್ದೆ. ಅಷ್ಟೇ ಗಂಭೀರವಾಗಿ ಓದಬಹುದಾದ ಕಾದಂಬರಿ ಇದು.

ಪಾಪಿಯೂ (ಕವನಗಳು) : ಕೆ. ವಿ. ತಿರುಮಲೇಶ್, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಶಿವಮೊಗ್ಗ ಜಿಲ್ಲೆ, ಬೆಲೆ : 50 ರೂ. ಕೆ. ವಿ. ತಿರುಮಲೇಶ್‌ರವರು ಕಾವ್ಯದಲ್ಲಿ ನಾನಾ ರೀತಿಯ ಪ್ರಯೋಗಗಳನ್ನು ನಡೆಸುತ್ತಿರುವ ಅರ್ಥಪೂರ್ಣ ಕವಿ. ಈ ಸಂಕಲನದಲ್ಲಿ ಕಥಾನಕ ಅಂಶ ಹೆಚ್ಚಾಗಿರುವುದರಿಂದ ಕಾವ್ಯವು ಕಾದಂಬರಿಯನ್ನು ಓದಿದಷ್ಟು ಸಂತೋಷವಾಗುತ್ತದೆ.

ಬಂಧಿಖಾನೆ (ಕಾದಂಬರಿ) : ಪ್ರಹ್ಲಾದ ಅಗಸನಕಟ್ಟೆ, ಹರ್ಷ ಪ್ರಕಾಶನ, ಅಗಸನಕಟ್ಟೆ, ದಾವಣಗೆರೆ (ತಾ), ಚಿತ್ರದುರ್ಗ ಜಿಲ್ಲೆ, ಬೆಲೆ : 8 ರೂ. ಕವಿ ಅಗಸನಕಟ್ಟೆಯವರ ಈ ಕಾದಂಬರಿ ರಾಜಕೀಯ ಕ್ರೌರ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದಿರುವಂಥದ್ದು. ಆದರೆ ವೈಚಾರಿಕತೆ ಜಾಸ್ತಿಯಾಯಿತು.

ಕಣ್ಣಮುಂದಿನ ಕಥೆ (ಕವನಸಂಕಲನ) : ಅಬ್ಬಾಸ್ ಮೇಲಿನಮನಿ, ಅಸ್ಮಾ ಪ್ರಕಾಶನ, ಹುಸೇನಪೇಟ, ಗುಳೇದಗುಡ್ಡ 587 203, ಬೆಲೆ : 12 ರೂ. ಅಬ್ಬಾಸ್‌ರವರು ತುಂಬ ಭಾವುಕರಾಗಿ ಬರೆದಿರುವ ಕಥೆಗಳು ಇಲ್ಲಿವೆ. ಕಥೆಗಳಾಗಿಲ್ಲ. ಅಬ್ಬಾಸ್‌ರವರು ತಮ್ಮ ಸಂಸ್ಕೃತಿಯ ಚೌಕಟ್ಟಿನಲ್ಲಿ ಕಟ್ಪಾಡಿ, ಬೋಳವಾರು, ರಷೀದ್ ಮತ್ತು ಸಾರಾ ಅಬೂಬಕರ್‌ರವರು ಬರೆಯುವುದನ್ನು ಗಂಭೀರವಾಗಿ ಓದಬೇಕು.

ವಸಂತ ಮೇಘ ಘರ್ಜನೆ (ವಿವಿಧ ಭಾಷೆಗಳ ನಕ್ಸಲೈಟ್ ಕವಿತೆಗಳು) : ಸಂಪಾದಕ : ಬಂಜಗೆರೆ ಜಯಪ್ರಕಾಶ್, ಬೆಳ್ಳಿಚುಕ್ಕಿ ಪ್ರಕಟಣೆಗಳು, ರಾಜ್‌ಕಮಲ್ ಪ್ರೆಸ್, 205, ಕಾಟನ್‌ಪೇಟೆ ಮುಖ್ಯರಸ್ತೆ, ಬೆಂಗಳೂರು–53, ಬೆಲೆ : 7 ರೂ. ವಿವಿಧ ಭಾಷೆಗಳ ಗಂಭೀರ ನಕ್ಸಲೈಟ್ ಕವನಗಳನ್ನು ಬಂಜಗೆರೆಯವರು ಇಲ್ಲಿ ತಂದು ಸಾರ್ಥಕ ಕೆಲಸ ಮಾಡಿದ್ದಾರೆ.

ನೇಪಥ್ಯ (ಕಥಾಸಂಕಲನ) : ಚಿತ್ರಶೇಖರ ಕಂಠಿ, ಗೆಳೆಯರ ಬಳಗ ಪ್ರಕಾಶನ, ಯಾದಗಿರಿ, ಬೆಲೆ : 18 ರೂ, ಈ ಸಂಕಲನದ ಕಥೆಗಳನ್ನು ಉತ್ಸಾಹದಿಂದ ಬರೆಯು

ತ್ತಿರುವುದರಿಂದ ಓದಿದೆ. ಆದರೆ ನಾನು ಚೆನ್ನಾಗಿ ಬರೆಯುಬೇಕು ಎಂದು ಕಂಠಿಯವರು ಹೊರಡಬೇಕು. ಆಗಲೇ ಅವರ ಶ್ರಮಕ್ಕೆ ಬೆಲೆ ಇರುತ್ತದೆ.

ಕಳೆದುಹೋಗಿದ್ದಾನೆ ಮನುಷ್ಯ (ಕವನಗಳು) : ಭಾಗ್ಯ ಸಂದರ್ಶನ, ಲಿಪಿ ಪ್ರಕಾಶನ, ಬೆಂಗಳೂರು–4, ಬೆಲೆ : 8 ರೂ. ಇದು ಭಾಗ್ಯರವರ ಮೂರನೆಯ ಕವನ ಸಂಕಲನ, ಓದಬಹುದಾದ ಕವನಗಳಿವೆ. ವಿಜಯಾ ದಬ್ಬೆಯವರ ಗಂಭೀರವಾದ ಮುನ್ನುಡಿ ಇದೆ.

ಕೆ.ಎಸ್.ನ. ನೆನಪು ಮಲ್ಲಿಗೆ (ವ್ಯಕ್ತಿಚಿತ್ರಣ) : ನರಹಳ್ಳಿ ಬಾಲಸುಬ್ರಹ್ಮಣ್ಯ, ಕೃತಿ ಪ್ರಕಾಶನ, 859, 18ನೇ ಮೈನ್, 14ನೇ ಕ್ರಾಸ್, ಬನಶಂಕರಿ ಎರಡನೇ ಹಂತ, ಬೆಂಗಳೂರು-70, ಬೆಲೆ: 12 ರೂ. ನಮ್ಮಲ್ಲಿಯ ಪ್ರಮುಖ ಕವಿಗಳಾದ ಕೆ.ಎಸ್.ನ. ಅವರ ಬದುಕಿನ ಕೆಲವು ಅರ್ಥಪೂರ್ಣ ಸಂದರ್ಭಗಳನ್ನು ವಿಮರ್ಶಕ ನರಹಳ್ಳಿಯವರು ಓದುಗರ ಮುಂದಿಟ್ಟಿದ್ದಾರೆ.

ಕೆಂಡಮಂಡಲ (ನಾಟಕ) : ಬಿ. ರಂಗಸ್ವಾಮಿ, ರಂಗಚೇತನ ಪ್ರಕಾಶನ, 218, 7ನೇ ಕ್ರಾಸ್, 1ನೇ ಮೈನ್, ಚಾಮರಾಜಪೇಟೆ, ಬೆಂಗಳೂರು–18, ಬೆಲೆ : 10 ರೂ. ಚಿನ್ನಸ್ವಾಮಿಯವರು ಕಾವ್ಯದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು. ಈ ನಾಟಕ ವನ್ನು ಉತ್ಸಾಹದಿಂದ ಬರೆದಿದ್ದಾರೆ. ಜಾತಿಬದ್ಧ ಸಮಾಜ ವ್ಯವಸ್ಥೆಯಲ್ಲಿ ವಿದ್ಯಾವಂತರ ನಡುವೆಯೂ ಘಟಿಸಬಹುದಾದ ಸೂಕ್ಷ್ಮ ಸಮಸ್ಯೆಗಳನ್ನು ಚೆನ್ನಾಗಿ ಗ್ರಹಿಸಿದ್ದಾರೆ. ಆದರೆ ನಾಟಕವಾಗಿ ಗಟ್ಟಿಯಾಗಿಲ್ಲವೇನೋ ಅನ್ನಿಸುತ್ತದೆ.

ಸೂರ್ಯಸಖಿ (ಕವನಸಂಕಲನ) : ಎಸ್. ಎನ್. ಪ್ರಸಾದ್, ಗೀತಾಂಜಲಿ ಪಬ್ಲಿಕೇಷನ್ಸ್, 134, 8ನೇ ಅಡ್ಡರಸ್ತೆ, ಗೋವಿಂದರಾಜನಗರ, ಬೆಂಗಳೂರು–40, ಬೆಲೆ : 12 ರೂ. ಇದು ಪ್ರಸಾದ್‌ರವರ ಮೊದಲನೆಯ ಸಂಕಲನ. ಕವಿಯಾಗಬೇಕೆಂದು ಹೊರಟವರು. ಉತ್ಸಾಹವಿದೆ. ಆದರೆ ತಾಳ್ಮೆ ಬೇಕು. ಇಷ್ಟಾದರೂ ಇಲ್ಲಿಯ ಕೆಲವು ಕವನಗಳನ್ನು ಓದಬಹುದು.

ಚಾಜ (ನಾಟಕ), ಬೆಲೆ : 12 ರೂ, ಈ ಹೆಣ್ಣುಗಳೆ ಹೀಗೆ (ಕವನಸಂಕಲನ): ಬೆಲೆ : 10 ರೂ, ಮಲ್ಲಿಕಾಘಂಟಿ, ಯುಮಲೋಕ ಪ್ರಕಾಶನ, ಗುಲಬರ್ಗಾ. ಶ್ರೀಮಂತಿ ಮಲ್ಲಿಕಾಘಂಟಿಯವರು ಏಕಕಾಲದಲ್ಲಿ ಕವಿಯಿತ್ರಿಯಾಗಿ ಹಾಗೂ ನಾಟಕಕಾರ್ತಿಯಾಗಲು ಹೊರಟಿದ್ದಾರೆ. ಇವರ ಶ್ರಮಕ್ಕೆ ಮೆಚ್ಚಿಕೊಳ್ಳಬೇಕು. ಆದರೆ ಎರಡಕ್ಕೂ ಆಳವಾದ ಸಂವೇದನೆ ಮತ್ತು ಜೀವನವನ್ನು ಅರ್ಥೈಸಿಕೊಳ್ಳುವ ಸಮಾಧಾನ ಬೇಕು. ಆಗ ಮಾತ್ರ ಎರಡೂ ಆಗಲು ಸಾಧ್ಯ. ಅಥವಾ ಒಂದಂತೂ ಆಗಲು ಸಾಧ್ಯವಿರುತ್ತದೆ.

— ಸಿದ್ಧಾರ್ಥ

ಸುದ್ದಿಯ ಗುದ್ದಾಟ

ರಚನಾ ರಾವ್ : ಇದು ಹುಡುಗಿಯ ಹೆಸರಲ್ಲ. ರಚನಾ ಜಾಹಿರಾತು ಸಂಸ್ಥೆಯ ಮುಖ್ಯಸ್ಥರಾದ ಸಿ.ಆರ್. ರಾವ್ ಅವರನ್ನು ನಾವೆಲ್ಲ ಪ್ರೀತಿಯಿಂದ ಕರೆಯುತ್ತಿದ್ದ ಹೆಸರು. ರಾವ್ ಅವರು ಪ್ರತಿಭಾವಂತ ವ್ಯಕ್ತಿಯಾಗಿದ್ದವರು. ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಬೆಳೆದಂತಹವರು. ಎಂ. ಎನ್. ರಾಯ್ ಅವರನ್ನು ಹತ್ತಿರದಿಂದ ಕಂಡವರು. ಬೆಂಗಳೂರಿನ ಕೆಂಪೇಗೌಡ ರಸ್ತೆಯ ಅವರ ಕಛೇರಿ ಎಷ್ಟೋ ಬಾರಿ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ತುಂಬ ದಿಲ್‌ದಾರಾಗಿ ಬದುಕಿದ ವ್ಯಕ್ತಿ. ಇಂಥ ದಿಲ್‌ದಾರತೆಯ ಬೆನ್ನು ಹತ್ತಿದ ರಾವ್ ಅವರು ಪೋಕಿದಾರರಾದರು. ತಮ್ಮ ವೃತ್ತಿಯಲ್ಲಿ ತುಂಬ ನಷ್ಟವನ್ನು ಅನುಭವಿಸಿದರು. ಮನೆಯ ಕಡೆ ಹೆಚ್ಚು ಮುತುವರ್ಜಿ ವಹಿಸಿಲ್ಲ, ಅವಕ್ಕೆ ಅನಾದರಣೆಗೆ ಪಾತ್ರರಾದರು ಎಂದು ಗೆಳೆಯರು ಗೊಣಗಿಕೊಂಡದ್ದನ್ನು ಕೇಳಿದ್ದೇನೆ. ಇದೆಲ್ಲ ಮನುಷ್ಯ ಸೋತಾಗ ಬೆನ್ನಹಿಂದೆ ಮಾತಾಡಿಕೊಳ್ಳುವ ಮಾತು. ಅದೆಲ್ಲ ಇರಲಿ. ರಾವ್ ಅವರು ಶೂದ್ರದ ಹಿತಚಿಂತಕರಾಗಿದ್ದರು. ಶೂದ್ರಕ್ಕೆ ಹತ್ತು ವರ್ಷ ತುಂಬಿದಾಗ ಅದರ ಕಾರ್ಯಕ್ರಮಕ್ಕೆ ಛೇಂಬರ್ ಆಫ್ ಕಾಮರ್ಸ್ ಬಿಲ್ಡಿಂಗ್‌ನ ಸಭಾಂಗಣಕ್ಕೆ ಐನೂರು ರೂ.ಗಳ ಬಾಡಿಗೆಯನ್ನು ತುಂಬಿದರು. ಇಂಥ ವ್ಯಕ್ತಿ ಇತ್ತೀಚೆಗೆ ತೀರಿಕೊಂಡರು ಎಂದು ತಿಳಿದಾಗ ಗಾಬರಿ ಮತ್ತು ನೋವಾಯಿತು. ಶೂದ್ರ ರಚನಾ ರಾವ್ ಅವರಿಗಾಗಿ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಡಾ|| ಎಲ್. ಸುಬ್ರಹ್ಮಣ್ಯಂ : ಸುಬ್ರಹ್ಮಣ್ಯಂರವರು ಇತ್ತೀಚೆಗೆ ಭಾರತೀಯ ಮತ್ತು ಪಾಶ್ಚಿಮಾತ್ಯ ಸಂಗೀತ ಕ್ಷೇತ್ರದಲ್ಲಿ ತುಂಬ ಸುದ್ದಿಯಲ್ಲಿರುವವರು. ತುಂಬ ಕಿರಿಯ ವಯಸ್ಸಿನ ಇವರು ದಕ್ಷಿಣ ಭಾರತದ ಪ್ರಮುಖ ವಾದ್ಯವಾದ ಪಿಟೀಲುವಾದನದಲ್ಲಿ ಅಪಾರ ಸಾಧನೆಗೈದಿದ್ದಾರೆ. ಆರನೆಯ ವಯಸ್ಸಿನಲ್ಲಿಯೇ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದವರು. ಈಗ ದೇಶ ವಿದೇಶ ವಾದ್ಯಗಳ ಧ್ವನಿತರಂಗಗಳನ್ನು ಅರಿಯಲು ಒತ್ತಾಡುತ್ತಿರುವ ಮಹಾನ್ ವಿದ್ವಾಂಸ. ಕೆಲವು ಅಪ್ಪಟ ವಿದ್ವಾಂಸರಿಗೆ ಸಿಟ್ಟಿರಬಹುದು. ಆದರೆ ಸುಬ್ರಹ್ಮಣ್ಯಂರವರು ಇದ್ಯಾವುದನ್ನು ಕೇಳಿಸಿಕೊಳ್ಳುವುದೇ ಇಲ್ಲ. ಒಂದು ಕಾಲದಲ್ಲಿ ರವಿಶಂಕರ್ ಬಗ್ಗೆ ವಿದೇಶೀಯರು ಹುಚ್ಚರಾಗಿದ್ದಂತೆ ಇಂದು ಡಾ|| ಸುಬ್ರಹ್ಮಣ್ಯಂರವರ ಬಗ್ಗೆ ಹುಚ್ಚರಾಗಿದ್ದಾರೆ. ಇವರ ಜುಬಿನ್ ಮೆಹತಾ ಅವರ ಜೊತೆಗಿನ ಕ್ಯಾಸೆಟ್‌ನ ಧ್ವನಿಸಂಯೋಜನೆಯನ್ನು ಕೇಳುವುದು ಒಂದು ಸ್ಮರಣೀಯ ಅನುಭವ. ಅದೇ ರೀತಿಯಲ್ಲಿ ಬಿಸ್ಮಿಲ್ಲಾ ಖಾನ್‌ರವರೊಡನೆಯ ಕ್ಯಾಸೆಟ್. ಇತ್ತೀಚೆಗೆ ಬೆಂಗಳೂರಿನಲ್ಲಿ ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಅಭಿವೃದ್ಧಿ ವಿಭಾಗದವರು ಇವರ ಕಾರ್ಯಕ್ರಮವನ್ನು ಸ್ವಿಸ್ ತಂಡದವರೊಡನೆ ಏರ್ಪಡಿಸಿದ್ದರು. ಆದರೆ ಎರಡು ರಾಗಗಳ ನಂತರ ಶ್ರೋತೃಗಳು ಸುಬ್ರಹ್ಮಣ್ಯಂರವರ ರಾಗಸಂಯೋಜನೆಗೆ ಪಕ್ಕಾಗುವ ಸಮಯಕ್ಕೆ ಸಿದ್ಧಕ್ಕಿದ್ದಂತೆ ಎದ್ದು ಎಲ್ಲರಿಗೂ ನಮಸ್ಕರಿಸಿ ಹೊರಟೇಬಿಟ್ಟರು. ನಂತರ ಒಂದು ಸ್ವಿಸ್ ತಂಡದವರನ್ನು ಕೈಕುಲುಕಿ ಹೂವಿನ ಗೊಂಚಲನ್ನು ನೀಡಿ ಮರೆಯಾದರು. ಸ್ವಲ್ಪ ಹುಚ್ಚು ಅನ್ನಿಸಿತು. ಆದರೂ ದೊಡ್ಡ ವಿದ್ವಾಂಸರಲ್ಲವೇ? — ಶೂದ್ರ

FNP/KRNU/72 No. M (2) PRB 211/73/74

SHOODRA Kannada Monthly

ಏಪ್ರಿಲ್ 1991ರ ಸಂಚಿಕೆಯಲ್ಲಿ :

ಟಿ. ಪಿ. ಅಶೋಕ್–ಟಿ. ಎನ್. ಪ್ರಕಾಶ್–ಸಂಧ್ಯಾರೆಡ್ಡಿ–ಡಿ. ಆರ್. ನಾಗರಾಜ್
ಎ.ಆರ್. ಮಣಿಕಾಂತ್–ನಜೀರ ಚಂದಾವರ–ಪದ್ಮಪ್ರಸಾದ್–ಬಿ. ಚಿನ್ನಸ್ವಾಮಿ
ಕೆ. ಎಂ. ಎಸ್. ಸ್ವಾಮಿ – ಮೋಹನದಾಸ್ ಧಾವಸ್ಕರ್ – ಪುಸ್ತಕ ವಿಮರ್ಶೆ
ಸಂದ್ಧಿಯ ಗಂದ್ದಾಟ–ಕನಸಿಗೊಂದು ಕಣ್ಣು

ಡಾ॥ ಅನುಪಮ ನಿರಂಜನ ಅವರ ನಿಧನಕ್ಕೆ ಶೂದ್ರ ತನ್ನ ಸಂತಾಪ ವ್ಯಕ್ತಪಡಿಸುತ್ತದೆ.

ಸಂ.

M. Srinivas, Editor for Shudra, Printed at :
Pallavi Printers, No. 1, 3rd Cross, Balaji Nagar,
Suddagunte Palya, D.R. College Post, Bangalore–29